(SRI H. SIDDAVEERAPPA).

domestic consumption and on hulling of private paddy have been removed. The licensing of private agencies for distribution of wheat in the first instance in informally rationed areas has been introduced. There has been considerable relaxation with regard to controls on cloth.

Prayer of raiyats for lands in Anabur Rangaiahnadurga and State Forests.

Q.—198. Janab J. MOHAMED IMAM (Jagalur).—

Will the Government be pleased to state :—

(*a*) whether it is not a fact that the raiyats in Jagalur Taluk have been asking for the grant of land for caltivation in Anabur and Kanakuppa State Forests;

(*b*) whether it is not a fact that the areas asked for cultivation have no vegetation in them ?

A.—Sri T. CHANNIAH (Minister for Public Health and Local Self-Government).—

(*a*) Some applications from certain raiyats of Jagalur for grant of lands in Anabur and Rangaiahnadurga (and not Kanakuppe) were received through the Revenue Authorities but their requests were not granted in the interests of conserving the forest growth.

(*b*) Rangaiahnadurga State Forest contains good vegetation of Kamara and other fuel species all round. Anabur State Forest is a scrubby area consisting of date trees and other fuel species. Further, cultural operations by raising plants in trench mounds and furrows have been undertaken and plantations have also been raised.

NON-OFFICIAL BUSINESS—RESOLUTIONS.

Mr. SPEAKER.—Resolutions.

No. 9. Providing Electric Lights to all villages.

ಶ್ರೀ ಶಿವನಂಜೇಗೌಡರು (ಮೈಸೂರು ತಾಲ್ಲೂಕು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ. ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"ಸಂಸ್ಥಾನಾದ್ಯಂತವಾಗಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಲು ಸರ್ಕಾರದವರು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಹಳ್ಳಿಗಾಡಿಗೆ ಎಲ್ಲೆಲ್ಲ ದೀಪಗಳನ್ನು ಒದಗಿಸಬೇಕೆಂದು ಕೇಳುತ್ತಾರೋ ಅಲ್ಲಿಗೆಲ್ಲಾ ಹಾಕಬೇಕು. ಏಕೆಂದರೆ ಕತ್ತಲೆ ಹರಿದು ಬೆಳಕು ಒಂದರೆ ಎಷ್ಟೋ ಸಂತೋಷವಾಗುತ್ತದೆ. ಅದರಂತೆ ಜನಗಳಿಗೆ ಬಹಳ ಆನಂದದಾಯಕವಾಗಿರುವ ದೀಪಗಳ ವ್ಯವಸ್ಥೆಯನ್ನು ಜಾಗ್ರತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಅಲ್ಲದೆ ವಿದ್ಯುಚ್ಛಕ್ತಿಯಿಂದ ಬಹಳ ಉಪಯುಕ್ತವಾದ ಕೆಲಸ ಕಾರ್ಯಗಳು ಹಳ್ಳಿಗಾಡಿನಲ್ಲಿ ನಡೆಯಬೇಕಾಗಿವೆ. ಕೈಗಾರಿಕೆ, ಲಿಫ್ಟ್ ಇರಿಗೇಷನ್, ಹಲ್ಲರ್ಸ್ ಇವಕ್ಕೆಲ್ಲಾ ವಿದ್ಯುಚ್ಛಕ್ತಿ ಅವಶ್ಯಕ.

ಮೈಸೂರು ತಾಲ್ಲೂಕಿಗೆ ಬಹಳ ಹತ್ತಿರದಲ್ಲಿ ವಿದ್ಯುಚ್ಛಕ್ತಿ ಬಂದಿದ್ದರೂ ಅನೇಕ ಹಳ್ಳಿಗಳಲ್ಲಿ ಈ ದೀಪಗಳು ಇಲ್ಲದೇ ಇರುವುದರಿಂದ ಜನಗಳು ವಿಷಾದ ಪಡುತ್ತಾ ಇದ್ದಾರೆ. ನಾನು ಹೇಳುವುದಾದರೆ ಮೈಸೂರು ತಾಲ್ಲೂಕು ಎಲ್ಲಾ ವಿಧದಲ್ಲೂ ಹಿಂದೆ ಉಳಿದಿದೆ. ಆದ್ದರಿಂದ ಈ ತಾಲ್ಲೂಕಿಗೆ ಬೆಳಕನ್ನು ಕೊಡು. ಕುರುಡನಿಗೆ ಕಣ್ಣು ಬಂದಂತೆ ಮಾಡಿ ಜನಗಳ ಮನ್ನಣೆ ಪಡೆಯಬೇಕೆಂದು ನನ್ನ ಪ್ರಾರ್ಥನೆ. ಉದ್ದೂರು, ಬಂಡಿಬಳ್ಳಿ, ಗುಡಮಾರನಹಳ್ಳಿ, ಮರಚಿಕ್ಯಾತನಹಳ್ಳಿ, ದಾಸನಕೊಪ್ಪಲು, ಮಂಜೇಗೌಡರಕೊಪ್ಪಲು, ಯರಗನಹಳ್ಳಿ ಮುಂತಾದ ಗ್ರಾಮಗಳವರು ಬಹಳ ಒತ್ತಾಯ ಮಾಡುತ್ತಾ ಇದ್ದಾರೆ. ಅವುಗಳಿಗೆ ಬಹಳ ಹತ್ತಿರದಲ್ಲಿ ದೀಪದ ಕಂಬಗಳು ಇವೆ. ಕೆಲವು ಗ್ರಾಮಗಳಲ್ಲಿ ಊರಿನ ಒಳಗೂ ಸಹ ಲೈನು ಹೋಗಿರುವ ನಿದರ್ಶನ ಇದೆ. ಆದ್ದರಿಂದ ಈ ಕಾರ್ಯಕ್ರಮವನ್ನು ಜಾಗ್ರತೆ ಕೈಕೊಳ್ಳಬೇಕೆಂದು ಸರ್ಕಾರದವರಲ್ಲಿ ನನ್ನ ಪ್ರಾರ್ಥನೆ.

Mr. SPEAKER.—Resolution moved :

"That this Assembly is of the opinion that action should be taken by Government to provide electric lights to rural parts throughout the State."

ಶ್ರೀ ಟಿ. ನಾಗಪ್ಪನವರು (ತರೀಕೆರೆ).—ಶ್ರೀಮಾನ್ ಶಿವನಂಜೇಗೌಡರು ತಂದಿರುವ ಈ ನಿರ್ಣಯವನ್ನು ನಮರ್ಥಿಸುತ್ತಾ ಅದಷ್ಟು ಜಾಗ್ರತೆ ಹಳ್ಳಿಗಳಿಗೆ ಈ ದೀಪದ ಸೌಕರ್ಯ ಒದಗಿಸಿಕೊಡುವುದು ಸರ್ಕಾರದವರ ಕರ್ತವ್ಯ ಎಂದು ಮೊದಲನೆಯದಾಗಿ ಹೇಳುತ್ತೇನೆ. ಈಗ ಅನೇಕ ಹಳ್ಳಿಗಳಲ್ಲಿ ಸಾಯಂಕಾಲದ ಹೊತ್ತು ಎಷ್ಟೇ ಕೆಲಸವಿದ್ದರೂ ಅನೇಕರು ಪಟ್ಟಣಗಳಿಗೆ ಬಂದು ರೇಡಿಯೋ ಮತ್ತು ಇತರ ವಿಧವಾದ ಮನರಂಜಕ ನೋಟಗಳನ್ನು ನೋಡುವುದಕ್ಕೆ ಹೊರಟು ಹೋಗುತ್ತಾರೆ. ಇದರಿಂದ ಹಳ್ಳಿಗಾಡಿನವರ ಕೆಲಸ ನಿಂತುಹೋಗುತ್ತಾ ಇದೆ. ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯ ಸೌಕರ್ಯವಿದ್ದರೆ ದೀಪಗಳನ್ನು ಹಾಕಿಕೊಳ್ಳುವುದಕ್ಕೆ ಅಷ್ಟೇ ಅಲ್ಲದೆ, ಪಂಪು ಮಗ್ಗೆರೆ ಹಾಕಿಕೊಂಡು ಹೆಚ್ಚು ಆಹಾರ ಬೆಳೆಯುವುದಕ್ಕೂ ಸಹ ಅವಕಾಶವಾಗುತ್ತದೆ. ಇಂಥಾ ಸೌಕರ್ಯವನ್ನು ಸರ್ಕಾರದವರು ಅದಷ್ಟು ಜಾಗ್ರತೆ ಹಳ್ಳಿಗಾಡಿನವರಿಗೆ ಒದಗಿ

ಸಿಕೊಟ್ಟರೆ ಹಳ್ಳಿಯವರು ಹಳ್ಳಿಯಲ್ಲೇ ಇದ್ದು ಹೆಚ್ಚು ಆಹಾರ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ ಮರೆನಾಡು ಪ್ರಾಂತದಲ್ಲಿ ಹಳ್ಳಿಗಳಲ್ಲಿ ದೀಪ ಇಲ್ಲದೆ ಅನೇಕರು ಪಟ್ಟಣಗಳಿಗೆ ಹೊರಟುಹೋಗಿ ಬೇಚರಾಕು ಗ್ರಾಮಗಳು ಹೆಚ್ಚುತ್ತಾ ಇವೆ. ಈಗಾಗಲೇ ಅನೇಕ ಹಳ್ಳಿಗಳಿಗೆ ಜಾಗ್ರತೆ ವಿದ್ಯುಚ್ಛಕ್ತಿ ದೀಪ ಕೊಡುವ ಭರವಸೆ ಕೊಟ್ಟಿದ್ದರೂ ಅದನ್ನು ಕಾರ್ಯಗತಮಾಡಿಲ್ಲ. ಆ ಕಾರಣದಿಂದ ಅನೇಕ ಹಳ್ಳಿಗಳವರು ನಿರಾಶರಾಗಿ ಆ ಹಳ್ಳಿಯನ್ನೇ ಬಿಡುವ ಸಂಭವ ಇದೆ. ಆದ್ದರಿಂದ ಹಳ್ಳಿಗಾಡಿನವರಿಗೆ ಆದಷ್ಟು ಜಾಗ್ರತೆ ದೀಪ ಒದಗಿಸಿದರೆ ಅವರು ಹಳ್ಳಿಯಲ್ಲೇ ಇರುತ್ತಾರೆ. ಒಂದುವೇಳೆ ಅವರು ಪಟ್ಟಣಕ್ಕೆ ಹೊರಟುಹೋದರೆ ಈ ಅನುಕೂಲ ಒದಗಿಸುತ್ತೇವೆ. ಪುನಃ ಹಳ್ಳಿಗೆ ಹೋಗಿ ಎಂದು ತಾವೇ ಹೇಳಬೇಕಾದ ಪ್ರಸಂಗ ಒದಗುತ್ತದೆ. ಆದ್ದರಿಂದ ಹಳ್ಳಿಯವರ ಹಿತವನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆ ಹಳ್ಳಿಗಳಿಗೆ ವಿದ್ಯುತ್ ದೀಪವನ್ನು ಒದಗಿಸಬೇಕೆಂದು ಈ ಸಭೆಯಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜಅರಸ್‌ರವರು (ಹುಣಸೂರು).—ಈ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಈ ನಿರ್ಣಯವನ್ನು ತಂದಿರತಕ್ಕ ಶ್ರೀಮಾನ್ ಶಿವನಂಜೇಗೌಡರು ಬಹುಶಃ ವಿದ್ಯುತ್ ದೀಪಗಳನ್ನು ಎಲ್ಲಾ ಹಳ್ಳಿಗಳಿಗೂ ಹಾಕಿಸಬೇಕೆಂದು ಹೇಳಿರುವುದರ ಅಭಿಪ್ರಾಯ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಇರಬಹುದು. ಏನೇ ಆಗಲಿ ದೀಪಗಳು ಬಂದರೆ ವಿದ್ಯುಚ್ಛಕ್ತಿ ಬಂದೇ ಬರಬೇಕು. ಸ್ವಾಮಿ, ಇದುವರೆಗೂ ಸರ್ಕಾರದವರು ನಡೆಸಿರತಕ್ಕ ಕಾರ್ಯಕ್ರಮದಲ್ಲಿ ವಿದ್ಯುಚ್ಛಕ್ತಿಯನ್ನು ನುಮಾರು 200 ಚಿಲ್ಲರೆ ಹಳ್ಳಿಗಳಿಗೆ ಒದಗಿಸಿದ್ದಾರೆ. ನಮ್ಮ ದೇಶದಲ್ಲಿರತಕ್ಕ 16,000 ಚಿಲ್ಲರೆ ಹಳ್ಳಿಗಳಿಗೆಲ್ಲಾ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಈಗ ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಂಡು ಹೋಗುತ್ತಾ ಇರತಕ್ಕ ವೇಗದಲ್ಲಿ ಅನೇಕ ವರ್ಷಗಳು ಬೇಕಾಗುತ್ತವೆ. ಎಷ್ಟು ವರ್ಷ ಬೇಕಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ ಸರ್ಕಾರದವರು ಹಳ್ಳಿಗಾಡಿನಲ್ಲಿ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಬಡ್ಜೆಟ್‌ನಲ್ಲಿ ಕೊಟ್ಟಿರುವ ಹಣವನ್ನು ಸಂಪೂರ್ಣವಾಗಿ ಖರ್ಚುಮಾಡುತ್ತಾ ಇಲ್ಲ; ಮತ್ತು ಈಗ ಒದಗಿಸಿರುವುದು ಸಾಲದು. ಅದು ನಿಕ ಪ್ರಪಂಚದಲ್ಲಿ ವಿದ್ಯುಚ್ಛಕ್ತಿಯ ಉಪಯೋಗ ಬಹಳವಾಗಿದೆ. ಅದರಲ್ಲೂ ನಮ್ಮ ದೇಶದಲ್ಲಿ ಆಹಾರದ ಅಭಾವ ವರ್ಷೇವರ್ಷೇ ಜಾಸ್ತಿಯಾಗುತ್ತಾ ಇದ್ದು ಗ್ರೋ ಮೋರ್ ಪುಡ್ ಕ್ಯಾಂಪೇನ್ ವಗೈರೆ ಅನೇಕ ಯೋಜನೆಗಳನ್ನು ಹಾಕಿಕೊಂಡು ಕೆಲಸಮಾಡಿದರೂ ಆಹಾರದ ಅಭಾವ ನೀಗದೆ ಇರುವುದಕ್ಕೆ ಕಾರಣ ಇರಿಗೇಷ್‌ನ್ನು ಚೆನ್ನಾಗಿ ಅಭಿವೃದ್ಧಿಪಡಿಸಿಕೊಳ್ಳದೆ ಇರುವುದೇ ಆಗಿದೆ. ಇರಿಗೇಷ್ ಅಭಿವೃದ್ಧಿ ಮಾಡಬೇಕಾದರೆ ಹಿಂದಿನ ಕಾಲದಂತೆ ಎತ್ತುಗಳನ್ನು ಕಟ್ಟಿಕೊಂಡು ಕಪಿಲೆ ಹೊಡೆದು ನೀರು ಹಾಯಿಸುವ ತತ್ವವನ್ನು ಮುಂದುವರಿಸಿದರೆ ಸಾಧ್ಯವಾಗುವುದಿಲ್ಲ. ಆಹಾರದ ಅಭಾವ ನೀಗುವುದಿಲ್ಲ. ಮತ್ತು ಇರಿಗೇಷ್ ಕೂಡ ಅಭಿವೃದ್ಧಿಯಾಗುವುದಿಲ್ಲ. ದೊಡ್ಡದೊಡ್ಡ ಪ್ರಾಜೆಕ್ಟುಗಳನ್ನು ಹಾಕಿಕೊಂಡಿದ್ದೇವೆ. ಕೋಟ್ಯಾಂತರ ರೂ ಸಾಯಿ ಖರ್ಚಾಗತಕ್ಕ ಆ ಪ್ರಾಜೆಕ್ಟುಗಳು ಪೂರ್ತಿಯಾದಲೆ ಈ ಆಹಾರದ ಅಭಾವ ನೀಗುತ್ತದೆ ಎಂದು ತಾವು ಹೇಳಬಹುದು. ಆದರೆ ಜನಗಳಿಗೆ ಪೂರ್ಣ ಆಹಾರ ದೊರೆಯುವಂತೆ ತಾವು ಮಾಡಬೇಕಾದರೆ ಇಂಟೆನ್ಸೀವ್ ಕಲ್ಟಿವೇಷ್ (intensive cultivation) ಎಂದು ಏನು ಹೇಳುತ್ತೇವೆಯೋ ಅದನ್ನು ಅಭಿವೃದ್ಧಿಮಾಡುವುದಕ್ಕೆ ಹೆಚ್ಚು ಪ್ರಯತ್ನ ಪಡಬೇಕಾಗಿದೆ. ರಾಂಗ್ ರೇಂಜ್ ಪಾಲಿಸಿ, ಪ್ರೋಗ್ರಾಂಗಳನ್ನು ಹಾಕಿಕೊಂಡು ಕೆಲಸಮಾಡುವುದಾದರೆ ತಕ್ಷಣ ಒದಗಿರತಕ್ಕ ಕೊರತೆ ಹೋಗುವುದಿಲ್ಲ. ಇಂಟೆನ್ಸೀವ್ ಕಲ್ಟಿವೇಷ್ ಮಾಡಬೇಕಾದರೆ ವಿದ್ಯುಚ್ಛಕ್ತಿಯಿಂದ ಸಾಧ್ಯವಾಗುತ್ತದೆ. ನಾನು ಮೊದಲೇ ಹೇಳಿದಹಾಗೆ ದೀಪಗಳನ್ನು ಹಾಕಬೇಕಾಗಿದ್ದರೂ ಸಹ ವಿದ್ಯುಚ್ಛಕ್ತಿ ಬೇಕೇ ಬೇಕು. ನಮಗೆಲ್ಲಾ ಗೊತ್ತಿರುವಂತೆ ವರ್ಷೇವರ್ಷೇ ನಮ್ಮ ದೇಶದಲ್ಲಿ ಮಳೆ ಕಡಮೆಯಾಗುತ್ತಾ ಇದೆ. ಮರೆನಾಡು ಪ್ರದೇಶದಲ್ಲಿ ಈ ವರ್ಷ ಬೇಸಗೆಯಲ್ಲಿ ಕುಡಿಯುವುದಕ್ಕೂ ಸಹ ನೀರು ಇಲ್ಲದೆ ಅಭಾವವಾಗಿದೆ. ಕೆರೆಗಳಲ್ಲಿ ನೀರು ಇಲ್ಲದೆ ಒಂದೊಂದು ಹಳ್ಳಿಯವರು ಕುಡಿಯುವ ನೀರಿಗೆ 4–5 ಮೈಲು ದೂರ ಹೋಗಿ ತರಬೇಕಾಯಿತು. ಹತ್ತಾರು ವರ್ಷಗಳ ಹಿಂದೆ ಮಳೆ ಯಾವರೀತಿ ಬರುತ್ತಾ ಇತ್ತೋ ಆರೀತಿ ಈಗ ಬರುತ್ತಾ ಇಲ್ಲ. ಅದಕ್ಕೆ ಏನು ಕಾರಣ ಎಂದರೆ ವಿದ್ವಾಂಸರು, ತಜ್ಞರು ಹೇಳುತ್ತಾರೆ..... . ...

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ನಾನು ಒಂದು ಕ್ರಿಯಾರೋಪವನ್ನು ಸೂಚಿಸುತ್ತೇನೆ. ಹಳ್ಳಿಗಳಿಗೆ ವಿದ್ಯುತ್ ದೀಪಗಳನ್ನು ಕೊಡಬೇಕು ಎಂಬುದಾಗಿ ಈ ತರಾವಿನಲ್ಲಿ ಇದೆ. ಅವರು ಅದನ್ನು ಬಿಟ್ಟು ಬೇರೆವಿಷಯ ಮಾತನಾಡುತ್ತಾ ಇದ್ದಾರೆ. ಆದ್ದರಿಂದ ಯಾವ ವಿಷಯ ಇದೆಯೋ ಅದಕ್ಕೆ ಸಂಬಂಧಪಟ್ಟಂತೆ ಮಾತನಾಡಬಹುದು. ಬೇರೆ ವಿಷಯ ಮಾತನಾಡುವುದಕ್ಕೆ ಈ ತರಾವಿನಲ್ಲಿ ಅವಕಾಶವಿಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜಅರಸ್‌ರವರು.—ಅದಕ್ಕೇ ನಾನು ಮೊದಲೇ ವಿವರಣೆಯನ್ನು ಕೊಟ್ಟೆ. ವಿದ್ಯುಚ್ಛಕ್ತಿ, ದೀಪ ಕೊಡುವುದಕ್ಕೂ ವಿದ್ಯುಚ್ಛಕ್ತಿ, ಒದಗಿಸಬೇಕು. ತಮಗೇ ಗೊತ್ತಿರುವಹಾಗೆ ವಿದ್ಯುಚ್ಛಕ್ತಿ, ಎಲ್ಲಾ ಕೆಲಸಗಳಿಗೂ ಉಪಯೋಗವಾಗುತ್ತದೆ. ಆದ್ದರಿಂದ ಇರಿಗೇಷ್ ಅಭಿವೃದ್ಧಿಯಾಗಬೇಕಾದರೆ ವಿದ್ಯುಚ್ಛಕ್ತಿ ತೀರಾ ಮುಖ್ಯವಾದುದ್ದು.

ಇನ್ನೊಂದು ವಿಚಾರ. ಒಬ್ಬ ಮಾನ್ಯ ಸದಸ್ಯರು ಹೇಳಿದರು, ಹಳ್ಳಿಗಾಡುಗಳಿಂದ ಜನರು ಹೆಚ್ಚಾಗಿ ಪಟ್ಟಣಗಳಿಗೆ ಬರುತ್ತಾರೆ, ಅದನ್ನೂ ತಡೆಗಟ್ಟುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರು. ಅದನ್ನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. 1951ನೇ ಇಸವಿ ಸೆನ್‌ಸಸ್ ಪ್ರಕಾರ ನೋಡಿದರೆ ಆ ವರದಿಯಲ್ಲಿ ಹಳ್ಳಿಗಳಿಂದ ಪಟ್ಟಣಗಳಿಗೆ ಜನ ಹೆಚ್ಚಾಗಿ ಬರುವುದಕ್ಕೆ ಇದೂ ಒಂದು ಕಾರಣ ಎಂದು ಹೇಳಿದ್ದಾರೆ. ದೀಪದ ಬೆಳಕು, ಥಳಕು, ಸಿನಿಮಾ, ರೇಡಿಯೋ ಮುಂತಾದುವುಗಳು ಇರತಕ್ಕ ಒಂದು ನಿವೇಶ, ಸೌಕರ್ಯ ಪಟ್ಟಣಗಳಲ್ಲಿರುವುದರಿಂದ ಆ ಆಕರ್ಷಣೆಯಿಂದ ಜನಗಳು ಅಲ್ಲಗೆ ಹೋಗುವುದಕ್ಕೆ ಹೆಚ್ಚುಹೆಚ್ಚು ಪ್ರಯತ್ನ ಮಾಡುತ್ತಾರೆಯೇ ಹೊರತು ಮತ್ತೆ ಬೇರೆ ಅಲ್ಲ. ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ಒದಗಿಸಿದರೆ 'urbanisation of the villages ಎಂದು ಹೇಳುತ್ತಾರೆ, ರೇಡಿಯೋ ಬರುತ್ತದೆ, ದೀಪ ಬರುತ್ತದೆ. ಈ ರೀತಿ ಎಲ್ಲಾ ಆಧುನಿಕ ಸೌಕರ್ಯಗಳೂ ಒದಗಿಸುವುದಾದರೆ ಹಳ್ಳಿಗಳಲ್ಲರತಕ್ಕ ವಿದ್ಯಾವಂತರು ಸರ್ಕಾರಿ ನೌಕರಿಗಳಿಗೆ ಅರ್ಜಿ ಹಾಕಿ ಪಟ್ಟಣಗಳಿಗೆ ಓಡಾಡುವುದು ತಪ್ಪಿ ತಮ್ಮ ಕೆಲಸಕಾರ್ಯಗಳನ್ನು ಮಾಡಿಕೊಂಡು ಹಳ್ಳಿಯಲ್ಲೇ ಇರುವುದಕ್ಕೆ ಸಹಾಯಕವಾಗುತ್ತದೆ. ಆದ

(ಶ್ರೀ ಡಿ. ದೇವರಾಜ ಅರಸ್‌ರವರು).

ಕಾರಣ ಸರ್ಕಾರದವರು ನಮ್ಮಲ್ಲಿ ದುಡ್ಡಿಲ್ಲ, ಅಷ್ಟು ಹಳ್ಳಿಗಳಿಗೂ ಒದಗಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಬಹುದು. ಅದರೂ ಇದಕ್ಕೆ ಒಂದು ತೀವ್ರವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಈಗ ರಷ್ಯಾ ದೇಶದಲ್ಲಿ ತಮ್ಮ ದೇಶವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಎಷ್ಟು ಮಟ್ಟಿಗೆ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ ನೋಡಿ. ಇತೀ ದೇಶವೇ ಈ ಬಗ್ಗೆ ತೀವ್ರತೆಯಿಂದ ಕೆಲಸಕಾರ್ಯಗಳನ್ನು ನಡೆಸಿದೆ. ಹೀಗೆ ಮುಖ್ಯವಾದ ಈ ವಿಷಯವನ್ನು ಸರ್ಕಾರದವರು ಓಬಿರಾಯನ ಕಾಲದಲ್ಲಿ ಯಾವರೀತಿ ನೋಡುತ್ತಿತ್ತೊ, ಆ ರೀತಿಯೇ ನೋಡಿಕೊಂಡು ಹೋಗುವುದನ್ನು ಬಿಟ್ಟುಬಿಟ್ಟು ಒಂದು ಯೋಜನೆಯ ಪ್ರಕಾರ ಕಾರ್ಯಕ್ರಮ ಕೈಕೊಳ್ಳಬೇಕು. ಹಾಗಿಲ್ಲದೆ ಹಿಂದಿನಂತೆ ಪ್ರತಿಯೊಂದು ವಿಷಯವನ್ನೂ ತೆಗೆದುಕೊಂಡು, ಕೊಡೋಣವೇ, ಬೇಡವೇ ಎಂದು ನಿಧಾನವಾಗಿ ಯೋಚನೆಮಾಡುತ್ತಾ ಕುಳಿತರೆ ನಾವು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ಒಂದು ಸ್ಕೀಮ್ ಹಾಕಿಕೊಳ್ಳಬೇಕು. ಧೈರ್ಯವಾಗಿ ಒಂದು ಸಾಲವನ್ನಾದರೂ ಎತ್ತಿ ನಂಸ್ಥಾನಾದಾಯವನ್ನು ವಿದ್ಯುಚ್ಛಕ್ತಿ ಸರಬರಾಯಿಮಾಡುವುದಕ್ಕೆ ಏನೇನು ಪ್ಲಾನ್ ಹಾಕಿಕೊಳ್ಳಬೇಕು, ಯಾವ ರೀತಿ ಕಾರ್ಯಕ್ರಮ ಕೈಕೊಳ್ಳಬೇಕೆಂಬುದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು (ಕೈಗಾರಿಕೆ ಶಾಖೆಗಳ ಮಂತ್ರಿಗಳು)—ಮಾನ್ಯ ಅಧ್ಯಕ್ಷರೇ, ನಮ್ಮ ಮಿತ್ರರು ತಂದಿರತಕ್ಕ ನಿರ್ಣಯದ ಉದ್ದೇಶವನ್ನು ಯಾರೂ ಚರ್ಚೆಮಾಡಬೇಕಾದ ಅವಶ್ಯಕತೆಯೇ ಇಲ್ಲ. ಸಂಸ್ಥಾನಾದಾಯಕ್ಕೆ ವಿದ್ಯುಚ್ಛಕ್ತಿ ದೀಪಗಳನ್ನು ಕೊಡಬೇಕೆಂಬುದು ಎಲ್ಲರ ಪವಿತ್ರಧ್ಯೇಯವಾಗಿದೆ. ಈಗಲೂ ಇರಾಖೆಯವರು ವರ್ಷವರ್ಷಕ್ಕೂ ಹೆಚ್ಚುಹೆಚ್ಚಾಗಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಲೇ ಇದ್ದಾರೆ. ಇನ್ನೊಬ್ಬ ಮಾನ್ಯ ಸದಸ್ಯರು ಹೇಳಿದಹಾಗೆ ವಿದ್ಯುಚ್ಛಕ್ತಿ ದೀಪಗಳನ್ನು ಕೊಡುವುದೆಂದರೆ ಬರೀ ದೀಪಗಳನ್ನು ಒದಗಿಸುವುದೇ ಅಲ್ಲ, ಪವರ್ ಒದಗಿಸುವುದೂ ಆಗುತ್ತದೆ: ಆದರಿಂದ ಇರೀಗೇಷನ್ ಪಂಪುಗಳನ್ನು ಇಟ್ಟುಕೊಳ್ಳಬಹುದು; ಯಾವುದಾದರೂ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು; ವಿಲೇಜ್ ಪಂಚಾಯ್ತಿಯವರು ತಮ್ಮ ಹಳ್ಳಿಯಲ್ಲಿ ದೀಪಗಳನ್ನು ಹಾಕಿಕೊಳ್ಳಬಹುದು; ರೇಡಿಯೋ ಅನುಕೂಲ ಹೊಂದಬಹುದು. ಹೀಗೆ ವಿದ್ಯುಚ್ಛಕ್ತಿಯ ಪ್ರಯೋಜನಗಳೇನೆಂಬುದನ್ನು ಎಲ್ಲರೂ ಕಂಡವರಾಗಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಮ್ಮ ಉದ್ದೇಶವನ್ನು ಯಾರೂಸಹ ಚರ್ಚೆ ಮಾಡಬೇಕಾದ ಅವಶ್ಯಕತೆಯೇ ಇಲ್ಲವೆಂದು ಹೇಳಬಯಸುತ್ತೇನೆ.

ಹಾಗೆಯೇ, ಇನ್ನೊಬ್ಬ ಮಾನ್ಯ ಸದಸ್ಯರು ಸಲಹೆ ಕೊಟ್ಟಿರುವಹಾಗೆ ಹಳ್ಳಿಗಳಿಗೆ ಎಲ್ಲಾ ವಿಧವಾದ ಸೌಲಭ್ಯಗಳನ್ನೂ ಕಲ್ಪಿಸಿಕೊಡಬೇಕೆಂಬುದೇ ಮೊದಲಿನಿಂದಲೂ ಸರ್ಕಾರದವರ ಧ್ಯೇಯವಾಗಿದೆ. ಆದರೆ ಇದರಲ್ಲಿ ಏನು ಕಷ್ಟವಿದೆಯೆಂಬುದನ್ನು ಮಾತ್ರ ಸಂಕ್ಷೇಪವಾಗಿ ಹೇಳಲಿಚ್ಛಿಸುತ್ತೇನೆ. ಇದಕ್ಕಾಗಿ ತಗಲುವ ಖರ್ಚು ಬಹಳ ಜಾಸ್ತಿಯಾಗುತ್ತಿದೆ. ಇದುವರೆಗೆ ಕೊಟ್ಟಿರುವುದಲ್ಲಿ ಹಳ್ಳಿಗಳ ವೇಲಿನ ಉದಾರ ಭಾವನೆಯಿಂದಲೇ, Return ಬಹಳ ಕಡಮೆಯಿದ್ದರೂ, ಸರ್ಕಾರದವರು ಹೆಚ್ಚುಹೆಚ್ಚಾಗಿ ಅವರುಗಳಿಗೆ ದೀಪಗಳನ್ನೂ ಪವರನ್ನೂ ಕೊಡುತ್ತಲೇ ಇದ್ದಾರೆ. ಆಮೇಲೆ ಈಗ ಹೊಸದಾಗಿ, ಸಾಧ್ಯವಿರದ ಮೇಲೆ ಪ್ರಜಾಸಂಖ್ಯೆಯಿರುವ ಎಲ್ಲಾ ಹಳ್ಳಿಗಳ ಸರ್ವೆಯನ್ನು ಮಾಡಬೇಕೆಂದು ಹೇಳಿ ಸರ್ವೆ ನಡೆಸಿದ್ದೇವೆ. ಅದರಲ್ಲೂ 660 ಹಳ್ಳಿಗಳ ವಿಷಯದಲ್ಲಿ ಎಸ್ಟಿಮೇಟುಗಳಿನ್ನೂ ಕೂಡ ತಯಾರುಮಾಡಿಸಿದ್ದಾಗಿದೆ. ಒಂದು ಪ್ಲಾನ್ ಇರೆಯೆಂಬುದಕ್ಕೆ ಇದನ್ನೆಲ್ಲಾ ತಮಗೆ ತಿಳಿಸುತ್ತಿದ್ದೇನೆ. ಇಷ್ಟೇ ಅಲ್ಲ. ಈ ಎರಡುವರ್ಷಗಳಲ್ಲಿ ಆಡಳಿತ ನಡೆಸತಕ್ಕ ನಾಕರರ ನಂಖ್ಯೆ ಎರೆಕ್ಟ್ರಿಕ್ ಇರಾಖೆಯಲ್ಲಿ ಕಡಮೆಯಾದ್ದರಿಂದ special staffನ್ನು ನೇಮಕಮಾಡಿಕೊಂಡು ನಮ್ಮ ಕೆಲಸವನ್ನು ವಿಸ್ತರಿಸಿದ್ದೇವೆ.

ಇನ್ನು ಮುಂದಕ್ಕೂ ಹೀಗೆಯೇ ಮಾಡಬೇಕೆಂಬ ಉದ್ದೇಶವೂ ಇದೆ. ಆದರೆ ಕಷ್ಟಬರುವುದು ಇಷ್ಟೆ; ಬೇಕಾದಾಗ ಕಂಬಿಗಳು, ಕಂಬಗಳು ಸಿಕ್ಕದಿರುವುದೇ ದೊಡ್ಡ ಕೊರತೆ. ಟ್ರಾನ್ಸ್‌ಫಾರ್ಮರ್‌ಗಳು ದೊರಕುವುದು ಕಷ್ಟ. ಇವೆಲ್ಲಕ್ಕಿಂತಲೂ ಮೇಲಾಗಿ ಹಣದ ಅಭಾವ. ಇದನ್ನು ಎಷ್ಟರಮಟ್ಟಿಗೆ ಒದಗಿಸಬಹುದೋ ಅಷ್ಟರಮಟ್ಟಿಗೆ ಒದಗಿಸುವುದೇ ಸರ್ಕಾರದವರ ಉದ್ದೇಶವಾಗಿದೆ. ಇದನ್ನು ಯಾರೂ ಒತ್ತಾಯಪಡಿಸದಿದ್ದರೂ ಮಾಡಬೇಕೆಂದಿದೆ. ಏಕೆಂದರೆ ಅದು ಹಣ ಕೊಡತಕ್ಕಂಥಾದ್ದು. It pays. ಈ ದೃಷ್ಟಿಯನ್ನು ನಾವೆಲ್ಲರೂ ಗಮದಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯಕ. ಈ ಉದ್ದೇಶದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದು ವರೆಗೂ ಎಷ್ಟೆಷ್ಟು ದೀಪಗಳನ್ನೂ ಪಂಪುಗಳನ್ನೂ ಹಳ್ಳಿಗಳಿಗೆ ಕೊಡುತ್ತಿದ್ದರೋ ಮತ್ತು ಹೇಗೆ ವರ್ಷವರ್ಷವೂ ಜಾಸ್ತಿ ಮಾಡಿಕೊಂಡು ಬರುತ್ತಿದ್ದರೋ ಹಾಗೆಯೇ ಮುಂದಕ್ಕೂ ಇದೇ ನೀತಿಯನ್ನು ಅನುಸರಿಸಿಕೊಂಡು ಹೋಗುವುದಕ್ಕೆ ಸರ್ಕಾರದವರು ಸಾಧ್ಯವಾದಷ್ಟು ಪ್ರಯತ್ನ ಪಡುತ್ತಾರೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಈ ವಿವರಣೆ ಕೊಟ್ಟಮೇಲೆ ಮಾನ್ಯ ಸೂಚಕರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವನಂಜೇಗೌಡರು.—ಮಂತ್ರಿಯವರು ಕೊಟ್ಟ ಭರವಸೆಯ ಮೇರೆ ಸಭೆಯ ಅನುಮತಿಯನ್ನು ಪಡೆದು ನಾನು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ.

The Resolution was, by leave, withdrawn.

No. 11. High priority for Electricity to Irrigation Lift wells in Molakalmuru and Challakere Areas.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ಸ್ವಾಮಿ, ನನ್ನ ಸಂಕಲ್ಪ ಈ ರೀತಿಯಿದೆ. ಅದನ್ನು ಮಂಡಿಸುತ್ತೇನೆ:—

> "ನೀರಾವರಿ ಉದ್ದೇಶಗಳಿಗಾಗಿ ಭಾವಿಗಳಿಂದ ನೀರನ್ನೆತ್ತಲು ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಸಂಬಂಧದಲ್ಲಿ ಮತ್ತು ಚಳ್ಳಕೆರೆ ಪ್ರದೇಶಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಒಂಬತ್ತನೆಯ ನಿರ್ಣಯ ಚರ್ಚೆಯಾದಾಗ ನಮ್ಮ ಮಿತ್ರರನೇಕರು ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದ ಅವಶ್ಯಕತೆಗಳನ್ನೆಲ್ಲಾ ಕೂಲಂಕಷವಾಗಿ ವಿವ

ರಿಸಿದ್ದಾರೆ. ಆದ್ದರಿಂದ ಆ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ನನ್ನ ನಿರ್ಣಯದ ಸಂಬಂಧವಾಗಿ ಎರಡೇ ಎರಡು ಹೊಸ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೈಸೂರು ದೇಶದಲ್ಲಿ ಅನಾವೃಷ್ಟಿ ಪ್ರದೇಶಗಳೆಂದರೆ ಚಳ್ಳಕೆರೆ, ಮೊಳಕಾಲ್ಮುರು.

ಶ್ರೀ ಎಂ. ಶಂಕರಲಿಂಗೇಗೌಡರು —ನಾಗಮಂಗಲ.

ಶ್ರೀ ಎ. ಭೀಮಪ್ಪನಾಯಕರು.—ಹೌದು. ನಾಗಮಂಗಲವೂ ಹಾಗೆಯೇ. ಇಲ್ಲಿನವರು ಜೀವನಕ್ಕಿಲ್ಲದೆ ಬೊಂಬಾಯಿ ಮುಂತಾದ ಕಡೆಗಳಿಗೆ ಹೋಗಿ ಲಾರಿ ಡ್ರೈವರುಗಳಾಗಿಯೋ, ಟ್ರಾಕ್ಟರ್ ಹೊಡೆಯುವವರಾಗಿಯೋ, ಕೂಲಿಗೋ ಸೇರಿಕೊಂಡು ಹೊಟ್ಟೆ ಹೊರೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇದರಂತೆ ಇನ್ನೂ ಕೆಲವು ಅನಾವೃಷ್ಟಿ ಪ್ರದೇಶಗಳು ನಮ್ಮ ಸಂಸ್ಥಾನದಲ್ಲಿವೆಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ,

... .

Sri M. PALANIYAPPAN (Ulsoor).—I rise to a point of order, Mr. Speaker. Rule 140 of the Rules of Procedure says :

> "A motion must not raise a question substantially identical with one on which the Assembly has given a decision in the same session."

Now that the same subject of electricity has already been discussed by the House, this Resolution which raises the same subject matter cannot be discussed again.

Mr. SPEAKER.—This motion is very specific. The mover wants that electric power should be supplied to a particular place.

Sri M. PALANIYAPPAN.—It concerns with electricity as a whole.

ಅಧ್ಯಕ್ಷರು.—ಇದಕ್ಕೆ ಒಪ್ಪಿಗೆ ಕೊಟ್ಟಿರುವುದರಿಂದ ನಾನು ಅವರ point of order ಗೆ ಜವಾಬು ಹೇಳಬೇಕಾಗಿಲ್ಲವೆಂದು ಕಾಣುತ್ತದೆ.

The Resolution is in order.

1—30 P.M.

ಶ್ರೀ ಎ. ಭೀಮಪ್ಪನಾಯಕರು.—ನಾನು ಈಗ ತಾನೇ ಹೇಳುತ್ತಿದ್ದುದು. ಮೈಸೂರು ದೇಶದ ಅನೇಕ ಭಾಗಗಳಲ್ಲಿ ವರ್ಷಕ್ಕೆ ಸರಾಸರಿ 30—40 ಅಂಗುಲ ಮಳೆ ಬರುತ್ತಿರುವುದು ಎಲ್ಲರಿಗೂ ಗೊತ್ತಿದೆ. ಆದರೆ ವರ್ಷಕ್ಕೆ 10—12 ಅಂಗುಲದಷ್ಟು ಕೂಡ ಚಳ್ಳಕೆರೆ, ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಮಳೆ ಬಂದಿಲ್ಲ. ಎರಡನೆಯದಾಗಿ ಅಲ್ಲಿರುವಷ್ಟು ಕಪಿಲೆಗಳು ಮೈಸೂರು ದೇಶದ ಇನ್ನಾವ ಭಾಗದಲ್ಲೂ ಇಲ್ಲ. ಚಳ್ಳಕೆರೆ ತಾಲ್ಲೂಕೊಂದರಲ್ಲಿ ಎರಡು ಸಾವಿರ ಕಪಿಲೆಗಳಿವೆ. ಮೊಳಕಾಲ್ಮುರು ತಾಲ್ಲೂಕಿನಲ್ಲಿಯೂ ಹೀಗಿದೆ. ಅಲ್ಲಿಯ ವೈಶಿಷ್ಟ್ಯವೊಂದಿದೆ. 40 ಅಂಗುಲ ಮಳೆ ಬೀಳುವ ಬೆಂಗಳೂರಿನಲ್ಲಿ ಭಾವಿ ತೆಗೆದರೆ 40-50 ಅಡಿಯಲ್ಲಿ ನೀರು ಸಿಕ್ಕಿದರೆ, ಹತ್ತು ಅಂಗುಲ ಮಳೆ ಬೀಳುವ ಆ ತಾಲ್ಲೂಕುಗಳಲ್ಲಿ ಕೇವಲ ಎಂಟು ಹತ್ತು ಅಡಿ ತೆಗೆದರೆ ಭಾವಿಯಲ್ಲಿ ನೀರು ಬರುತ್ತದೆ. ಈ ಸೌಲಭ್ಯವನ್ನು ಭಗವಂತ ಕೊಟ್ಟಿದ್ದಾನೆ. ಮೇರೆ ಆಕಾಶದಿಂದ ಮಳೆ ಆಗದೇ ಇದ್ದರೂ ಭೂಗರ್ಭದಲ್ಲಿ ಗಂಗೆಯಿದ್ದು, ಈ ಸೌಲಭ್ಯ ಒದಗಿಸುತ್ತಿದ್ದಾನೆಂದು ಕಾಣುತ್ತದೆ. ಮೈಸೂರು ದೇಶದ ಇತರ ಅನೇಕ ಭಾಗಗಳಲ್ಲಿ ಇದೇ ರೀತಿ ಕಪಿಲೆ ವ್ಯವಸಾಯವಿದ್ದು ಅನಾವೃಷ್ಟಿಯು ಇರುವುದನ್ನು ನಾನು ಒಪ್ಪುತ್ತೇನೆ. ಅವುಗಳಿಗೂ ನಾನು ಚಳ್ಳಕೆರೆ ವಿಷಯದಲ್ಲಿ ಏನು ಹೇಳುತ್ತೇನೋ ಅದು ಅನ್ವಯಿಸುತ್ತದೆ. ಮುಖ್ಯವಾಗಿ ಸಾವಿರ ರೂಪಾಯಿನ ಒಂದು ಜೊತೆ ಎತ್ತನ್ನು ಇಟ್ಟುಕೊಂಡು ಕಪಿಲೆ ಕೆಲಸ ಮಾಡಿದರೆ ಎರಡು ವರ್ಷಗಳಲ್ಲಿ ಅವುಗಳ ಎದೆ ಹರಿದುಹೋಗಿ ರೈತ ನಿಶ್ಯಕ್ತನಾಗುತ್ತಾನೆಂದು ಅತಿವಿನಯದಿಂದ ಹೇಳುತ್ತೇನೆ. ಇದನ್ನು ಹಿಂದಿನ ಸರಕಾರದವರು ಗಮನಕ್ಕೆ ತೆಗೆದುಕೊಂಡು ಚಳ್ಳಕೆರೆ, ಮೊಳಕಾಲ್ಮುರು ಪ್ರದೇಶಕ್ಕೆ ಎದ್ದುಟ್ಟಕ್ಕಿಯ ಸಹಾಯದಿಂದ ನೀರು ಸರಬರಾಯಿ ಮಾಡಿಕೊಳ್ಳುವಸೌಲಭ್ಯವನ್ನು ಒದಗಿಸಿದ್ದಾರೆ. ಹೋದ ವರ್ಷ ಒಂದು ವರ್ಷಕ್ಕೆ 26 ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಕೊಟ್ಟ ಸಾಲದಲ್ಲಿ, ಈ ಭಾಗಕ್ಕೆ ಉಪಯೋಗಿಸಿದ್ದಾರೆ. ಇದಕ್ಕಾಗಿ ನಾನು ಅಲ್ಲಿಯ ಜನರ ಪರವಾಗಿ ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅಲ್ಲ ಮೈಸೂರು ದೇಶದ ಇನ್ನಾವ ಭಾಗದಲ್ಲೂ ಇಲ್ಲದಷ್ಟು ಉತ್ಪಾಹದಿಂದ ಜನ ಇರಿಗೇಷನ್ ಪಂಪುಗಳಿಗಾಗಿ ಅರ್ಜಿಹಾಕಿದ್ದಾರೆ. ಮುನ್ನೂರು ಮನೆಗಳಿರುವ ಹಳ್ಳಿಯಲ್ಲಿ ಬಳಗಿನಿಂದ ಸಾಯಂಕಾಲದವರೆಗೆ ಒಂದು ದಿವಸದಲ್ಲಿ 40 ಪಂಪುಗಳನ್ನು ಹಾಕಿದರು. ಇದನ್ನು ನೋಡಿದರೆ ಎಂಥವರಿಗೂ ಸಂತೋಷವಾಗುತ್ತದೆ. ಬಾವಿಗಳಿಂದ ನೀರೆತ್ತಲು ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಅನಾವೃಷ್ಟಿಯಿಂದಾಗುವ ಕಷ್ಟವನ್ನು ತಡೆಗಟ್ಟಬಹುದು; ಕ್ಷಾಮವನ್ನು ತಡೆಗಟ್ಟಬಹುದು. ಕೋಲಾರ ಜಿಲ್ಲೆಯಲ್ಲಿ ಅನೇಕ ಪ್ರಾಂತಗಳಲ್ಲಿ ಅನಾವೃಷ್ಟಿಯಿಂದ ಕ್ಷಾಮ ಬಂದಿದೆ. ಚಳ್ಳಕೆರೆ, ಮೊಳಕಾಲ್ಮುರು ತಾಲ್ಲೂಕುಗಳಲ್ಲಿಯೂ ಇದೇ ರೀತಿ ಕ್ಷಾಮ ಬಂದಿದೆ. ಬಾಕಿಯಕಡೆ ಕೆರೆ ಕುಂಟೆಗಳಾದರೂ ಇವೆ. ಮೈಸೂರು ದೇಶದ ಶಿವಮೊಗ್ಗ ಜಿಲ್ಲೆಯಲ್ಲಿ ಏಳು ಸಾವಿರ ಕೆರೆಗಳಿದ್ದರೆ ಚಿತ್ರದುರ್ಗದಲ್ಲಿ ಕೇವಲ ಇನ್ನೂರು ಕೆರೆಗಳಿವೆ. ನಮ್ಮ ದುರದೃಷ್ಟಕ್ಕೆ 200ರಕ್ಕಿಂತ ಹೆಚ್ಚಿಲ್ಲ. ಹೀಗಿರುವಾಗ ನಮ್ಮ ಕಷ್ಟ ಹೇಗಿರಬೇಕು! ಮೊದಲೇ ಅದು ಮೈದಾನ ಪ್ರದೇಶ; ಅದರ ಜೊತೆಗೆ ಅನಾವೃಷ್ಟಿ. ಇಂತಹ ಸಂದರ್ಭದಲ್ಲಿ ನಾವು ಕೇಳುತ್ತಿರುವ ಕೋರಿಕೆಯನ್ನು ಸಲ್ಲಿಸಿದರೆ ಭತ್ತವನ್ನು ಹೆಚ್ಚು ಬೆಳೆಯಲವಕಾಶವಾಗುತ್ತದೆ. ಸಾಲ್ಕು ಎಕರೆ ಜಮೀನಿರುವ ರೈತ ಒಂದು ಮೂರು ಅಶ್ವಶಕ್ತಿ ಪಂಪು ಹಾಕಿದರೆ, ಅವೇರಿಕಾದಲ್ಲಿರುವ ರೈತನಂತೆ ಇಲ್ಲಿಯೂ ಸುಖವಾಗಿ ಜೀವನ ನಡೆಸಲು ಸಾಧ್ಯವಾಗುತ್ತದೆ. ಏಕೆಂದರೆ, ಇಲ್ಲಿ ನೀರು ಮೇರೆ ಸಿಕ್ಕುತ್ತದೆ. ಆದರೆ ಕಪಿಲೆಯಿಂದ ನೀರೆತ್ತುವುದಾದರೆ ಒಂದು ಎಕರೆಗಿಂತ ಹೆಚ್ಚು ವ್ಯವಸಾಯ ಮಾಡಲು ಸಾಧವಿಲ್ಲ. ಪಂಪಿದ್ದರೆ ನಾಲ್ಕೆಕರೆ ಸಾಗುಮಾಡುವುದಕ್ಕೆ ಸಾಧ್ಯವಾದರೆ, ರೈತನ ಆದಾಯ ನಾಲ್ಕರಷ್ಟು ಹೆಚ್ಚಾಗುತ್ತದೆ. ವಿದ್ಯುಚ್ಛಕ್ತಿಯಿಂದ ಸರ್ಕಾರಕ್ಕೆ ಬರತಕ್ಕ ಉತ್ಪತ್ತಿ ಶೇಕಡ ಅರರಷ್ಟಾದರೆ ರೈತನಿಗೆ ಬರತಕ್ಕ ಉತ್ಪತ್ತಿ ಶೇಕಡ ಅರನೂರಾಗುತ್ತದೆ. ಈ ದೃಷ್ಟಿಯಿಂದ ತಾವು ನೋಡಬೇಕು. ಸರ್ಕಾರಕ್ಕೆ ಶೇಕಡ ಎಷ್ಟು ಉತ್ಪತ್ತಿ ಬರಬೇಕೋ ಅದಕ್ಕೆ ಕಡಮೆ ಬರುವುದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಬದಲು ಎಷ್ಟೇ ಕಡಮೆ ಬಂದರೂ ಕೂಡ ರೈತನ

(ಶ್ರೀ ಎ. ಭೀಮಪ್ಪನಾಯಕರು).

ಉತ್ಪತ್ತಿಯನ್ನು ಹೆಚ್ಚಿಸುವುದಾದರೆ ಸರ್ಕಾರಕ್ಕೆ ಉತ್ಪತ್ತಿ ಬಾರದೇಯಿದ್ದರೂ ಅಲ್ಲಿಗೆ ಕೊಡುವುದು ಒಳ್ಳೆಯದು. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರನ್ನು ಸಂಪೂರ್ಣವಾಗಿ ಧನಸಹಾಯ ಮಾಡುವುದಕ್ಕೆ ಒತ್ತಾಯ ಮಾಡಬೇಕು. ಕೆರೆ ಕಾಲುವೆಗಳನ್ನು ಕಟ್ಟಲು ಕೊಡುವ ಹಣಕ್ಕಿಂತ ಈ ವಿದ್ಯುಚ್ಛಕ್ತಿ ಪಂಪುಗಳನ್ನು ಆ ಹಳ್ಳಿಗಳಲ್ಲಿ ಕೊಡುವುದಕ್ಕೆ ಹೆಚ್ಚು ಒತ್ತಾಯ ಪಡಿಸಬೇಕು. ಪ್ರಚಾರ ಮಾಡುವುದಕ್ಕೆ ಕೊಡುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಕೊಡಬೇಕೆಂದು ಹೇಳಿ ಒತ್ತಾಯ ಮಾಡಬೇಕು. ಇನ್ನಾವ ಉದ್ದೇಶಕ್ಕಾದರೂ ಕೊಟ್ಟ ಹಣವನ್ನಾದರೂ ಇದಕ್ಕೆ ವಿನಿಯೋಗ ಮಾಡಬೇಕು. ಒಂದುವೇಳೆ ಇಂಡಿಯ ಸರ್ಕಾರದಿಂದ ದೊರೆಯದಿದ್ದರೆ ರಿಜರ್ವ್ ಬ್ಯಾಂಕಿನಿಂದಾದರೂ ಸಾಲ ಪಡೆದು ಮೈಸೂರು ದೇಶದ ಎಲ್ಲಭಾಗಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸುವುದಾದರೆ ಅಷ್ಟು ಜೊತೆ ಎತ್ತುಗಳನ್ನೂ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಬಹುದು. ಮನುಷ್ಯರು ಎಷ್ಟೇ ಇದ್ದರೂ ಎಷ್ಟು ಭೂಮಿ ಇವೆಯೋ ಅಷ್ಟೇ ಬೆಳೆಯಾಗುತ್ತದೆ. ಬರಿಯ ಮನುಷ್ಯರಿದ್ದರೆ ವ್ಯವಸಾಯ ಹೆಚ್ಚಾಗುವುದಿಲ್ಲ—ಹಳ್ಳಿಯಲ್ಲಿ ಒಬ್ಬ ನಾಲ್ಕು ಜೊತೆ ಎತ್ತುಗಳನ್ನಿಟ್ಟುಕೊಂಡರೆ ಅದರಿಂದ ಅವನ ಆದಾಯವನ್ನು ಕಂಡುಹಿಡಿಯುತ್ತಾರೆ. ಅದೇ ಅವನ ಮನೆಯಲ್ಲಿ 50 ಜನರಿದ್ದರೂ ಎತ್ತುಗಳು ಮಾತ್ರ ಇಲ್ಲದಿದ್ದರೆ ವ್ಯವಸಾಯ ಮಾಡುವುದಕ್ಕೆ ಅವನಿಗೆ ಸ್ವಲ್ಪವೂ ಅನುಕೂಲವಿಲ್ಲವೆನ್ನುತ್ತಾರೆ. ಹೀಗೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ತಾವು ಕೊಟ್ಟರೆ ಅಷ್ಟು ಜೊತೆ ಎತ್ತುಗಳನ್ನು ವ್ಯವಸಾಯಕ್ಕೆ ಉಪಯೋಗಿಸಲು ಸಹಾಯವಾಗಿ ಎಷ್ಟೋ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ದಯೆಯಿಟ್ಟು ಸರ್ಕಾರದವರು ಮೊಳಕಾಲ್ಮೂರು ಮತ್ತು ಚಿಳ್ಳಕೆರೆ ಪ್ರಾಂತಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಒದಗಿಸಿಕೊಡಬೇಕೆಂದು ಹೇಳಿ, ಈಗಾಗಲೇ ಒದಗಿಸಿರುವುದಕ್ಕೆ ಕೃತಜ್ಞತೆಯನ್ನರ್ಪಿಸುತ್ತೇನೆ.

Mr. SPEAKER.—Resolution moved.—

"That this Assembly is of the opinion that high priority be given to Molakalmuru and Challakere areas in supplying electricity to irrigation wells".

Mr. SPEAKER.—There is an amendment tabled by Sri Mulka Govinda Reddy. It is as follows:

"Omit the word "and" occurring between the words 'Molakalmuru' and 'Challakere' and insert in its place comma (,) and between the words 'Challakere' and 'areas' insert the words 'Chitaldrug and Hiriyur'."

I hold this amendment as not in order. Rule 143 (1) reads as follows:

"The amendment shall be relevant to and within the scope of the motion to which it is proposed."

Under this rule, it is obvious that an amendment must not only be relevant but must also be within the scope of the main resolution. There are several rulings to say that where an amendment widens the scope of the original resolution, it is inadmissible. We have the latest ruling in our own Assembly by my predecessor. I therefore hold that this amendment, though relevant, is outside the scope of the resolution.

Sri Mulka GOVINDA REDDY.—Then I would like to speak on the original resolution, Mr. Speaker.

Mr. SPEAKER.—Yes.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಸ್ವಾಮಿ, ಶ್ರೀಮಾನ್ ಭೀಮಪ್ಪನಾಯಕರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಿಂದೆ ಅನೇಕ ಸಾರಿ ಸರ್ಕಾರಕ್ಕೆ ಈ ವಿಚಾರದಲ್ಲಿ ಅನೇಕ ಅರಿಕೆಗಳನ್ನು ನಾವೆಲ್ಲರೂ ಸಲ್ಲಿಸಿದ್ದೇವೆ. ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸುವುದರಿಂದ ಎಷ್ಟು ಜಮೀನು ನೀರಾವರಿಯಾಗುತ್ತದೆ, ಬಾವಿಗಳನ್ನು ತೋಡಿಸುವುದರಿಂದ ಎಷ್ಟು ನೀರಾವರಿಯಾಗುತ್ತದೆಂಬುದನ್ನು ರೆಕ್ಕಹಾಕಿದರೆ, ಬಾವಿಗಳನ್ನು ಕಟ್ಟಿದರೆ ಹೆಚ್ಚಿನ ಭೂಮಿ ನೀರಾವರಿಯಾಗಲು ಅವಕಾಶವಾಗುತ್ತದೆಂದು ಅನೇಕಸಾರಿ, ಶ್ರೀಮಾನ್ ಭೀಮಪ್ಪನಾಯಕರೂ ಪೇಳಿದ್ದಾರೆ, ನಾವೂ ಕೂಡ ಸರ್ಕಾರಕ್ಕೆ ಅರಿಕೆಗಳನ್ನು ಸಲ್ಲಿಸಿದ್ದೇವೆ. ಈಗ ಶ್ರೀ ಭೀಮಪ್ಪನಾಯಕರು ಹೇಳಿದಹಾಗೆ ಈ ತಾಲ್ಲೂಕುಗಳಲ್ಲಲ್ಲಾವಷ್ಟು ಭಾವಿಗಳು ಇನ್ನೆಲ್ಲೂ ಇಲ್ಲ. ಎತ್ತುಗಳಿಂದ ನೀರೆತ್ತಲು ಕಷ್ಟವಾಗುತ್ತದೆ. ವಿದ್ಯುಚ್ಛಕ್ತಿ ಪಂಪುಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಈಗ ತಂದಿರತಕ್ಕ ಈ ನಿರ್ಣಯ ಬಹಳ ಸಾಧುವಾದುದು. ಇದಕ್ಕೆ ಸಭೆಯವರೆಲ್ಲರೂ ಒಪ್ಪಿಗೆ ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸ್ವಾಮಿ, ಅಧ್ಯಕ್ಷರೇ, ಈ ನಿರ್ಣಯದಲ್ಲಿ ಅಡಕವಾಗಿರುವಂಥ ಉದ್ದೇಶ ಎಲ್ಲರೂ ಕೂಡ ಒಪ್ಪತಕ್ಕಂಥಾದ್ದಾಗಿದೆ.

(ಅಷ್ಟು ಹೊತ್ತಿಗೆ ಸಭೆಯಲ್ಲ ಪ್ರಕಾಶಮಾನದಿಂದ ಉರಿಯುತ್ತಿದ್ದ ವಿದ್ಯುದ್ದೀಪಗಳೆಲ್ಲಾ ಆರಹೋದವು.)

ಶ್ರೀ ಕೆ. ಪಟ್ಟಾಭಿರಾಮ್ಮರವರು (ಕೋರಾರ).—ಸ್ವಾಮಿ, ತಾವೀಗ ಎಲ್ಲ ಕಡೆಯೂ ಕರೆಂಟ್ ಬರುವಂತೆ ಮಾಡಬೇಕಾಗಿದೆ ಸ್ವಾಮಿ.

(ಸಭೆಯಲ್ಲೆಲ್ಲಾ ಕೋರಾಹಲ).

ಅಧ್ಯಕ್ಷರು.—"For irrigation purposes!"

ಶ್ರೀ ಟಿ. ಸಿದ್ದಲಿಂಗಯ್ಯನವರು.—ಶ್ರೀ ಎ. ಭೀಮಪ್ಪನಾಯಕರು ತಂದಿರತಕ್ಕ ನಿರ್ಣಯದಲ್ಲಿ ಕೇವಲ 2 ಸ್ಥಳಗಳಿಗೆ ಮಾತ್ರ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದೂ ಮತ್ತು ನೀರಾವರಿ ಉದ್ದೇಶದ ಕೆಲಸಕಾರ್ಯಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟರೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತೆ ಎಂತ ಇದೆ.

(ಅಷ್ಟು ಹೊತ್ತಿಗೆ ಸಭೆಯಲ್ಲೆಲ್ಲಾ ಪುನಃ ಆರಿಹೊಗಿದ್ದ ವಿದ್ಯುದ್ದೀಪಗಳು ಹೊತ್ತಿಕೊಂಡವು).

ಈ ವಿಚಾರವಾಗಿ ನಾನು ಮೊದಲೇ ಹೇಳಿರುವ ಪ್ರಕಾರ ಸಂಸ್ಥಾನದ ನಾನಾ ಪ್ರದೇಶಗಳಿಗೆ ಬೆಳಕನ್ನು

ಉಪಯೋಗಿಸಲು ಈ ವಿದ್ಯುಚ್ಛಕ್ತಿಯನ್ನು ಬಳೆಸುವುದಕ್ಕೆ ಬದಲಾಗಿ ವ್ಯವಸಾಯ ಸಂಬಂಧವಾದ ಕೆಲಸಗಳಿಗೆ ಉಪಯೋಗಿಸುವುದು ಬಹಳ ಉತ್ತಮವಾದುದೆಂದು ಕಾಣುತ್ತದೆ. ಏತನ್ಮಧ್ಯೆ ಸರ್ಕಾರದವರಿಗೆ ಹಣದ ಕೊರತೆ ಬೇರೆ ಇದೆ. ಆದಾಗ್ಯೂ ಮಳೆ ಅಭಾವ ವಿರತಕ್ಕ ಪ್ರದೇಶಗಳ ಹೈಕಿ ಚಿತ್ರದುರ್ಗ ಮತ್ತು ತುಮಕೂರು ಈ ಎರಡು ಜಿಲ್ಲೆಗಳಿಗೆ ಇಂಡಿಯಾ ಸರ್ಕಾರದವರು ಸಾಲದ ರೂಪವಾಗಿ ಕೊಟ್ಟ ಮೊಬಲಗಿನಲ್ಲಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವ್ಯವಸಾಯಕ್ಕೆ ಅನುಕೂಲವಾಗುವಂತೆ ಇರಿಗೇಷನ್ ಪಂಪುಗಳನ್ನು ಕೊಡಲಾಗಿದೆ. ಈಗಾಗಲೆ ಸುಮಾರು 30 ಲಕ್ಷ ರೂಪಾಯಿಗಳ ಕೆಲಸವನ್ನು carry out ಮಾಡಿದ್ದಾರೆ. ಇನ್ನೂ ಬಹಳ ಕೆಲಸ ತ್ವರಿತವಾಗಿ ಮುಂದುವರಿಯುತ್ತಿದೆ. ಆದರೆ ಸರ್ಕಾರದವರಿಗೆ ಕೆಲಸಮಾಡಿಸಬಾರದೆಂಬ ಉದ್ದೇಶವೇನೂ ಇಲ್ಲ. ಈ ವಿದ್ಯುಚ್ಛಕ್ತಿ ಸರಬರಾಯಿಗೆ ಅತ್ಯಾವಶ್ಯಕವಾದ ಕಂಬ, ಕಂಬಿ, ತಂತಿ ಇತ್ಯಾದಿ ಸಾಮಗ್ರಿಗಳಿಲ್ಲದೆ ಕೆಲಸ ನಿಧಾನವಾಗುತ್ತಿದೆಯೇ ವಿನಃ ಸರ್ಕಾರದವರಿಗೆ ಮತ್ತೇನೂ ಉದ್ದೇಶವಿಲ್ಲ. ಆದರೆ ನಿರ್ಣಯದ ಸೂಚಕರು ತಮ್ಮ ನಿರ್ಣಯದಲ್ಲಿ ಏನು ಎರಡು ಅಂಶಗಳನ್ನು ಒತ್ತಿ ಹೇಳಿದ್ದಾರೋ ಅವುಗಳ ಬಗ್ಗೆ ಸರ್ಕಾರದವರು ಆದಷ್ಟೂ ಒಂದು ಹೆಚ್ಚಿನ ರಿಯಾಯಿತಿ ತೋರಿಸಲು ಆಲೋಚನೆ ಮಾಡತಕ್ಕವರಿದ್ದಾರೆ. ಇನ್ನೂ ಕೆಲವು ಸಲಹೆಗಳನ್ನು ಅನೇಕ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಆದರೆ ಸರ್ಕಾರದವರಿಗೂ ಕೂಡ ವ್ಯವಸಾಯ ಸಂಬಂಧವಾದ ಕೆಲಸಕಾರ್ಯಗಳಿಗೆ ಒಂದು ಪ್ರಥಮ ಪ್ರಾಶಸ್ತ್ಯ ಕೊಡುವುದರಿಂದ ಯಾರಿಗೂ ಅದರಿಂದ ನಷ್ಟವಾಗುವುದಿಲ್ಲ, ಅದಕ್ಕೆ ಪ್ರತಿಯಾಗಿ ದೇಶದಲ್ಲಿ ಇನ್ನೂ ಹೆಚ್ಚಿನ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ, ಅದರಿಂದ ದೇಶಕ್ಕೆ ಹಿತವಾಗುತ್ತದೆ ಎಂಬುದಾಗಿಯೇ ಆಲೋಚನೆ ಮಾಡಿದ್ದಾರೆ. ನಾನು ಈಗ ಇಷ್ಟು ಭರವಸೆಯನ್ನು ನೀಡುವುದರಿಂದ ಮಾನ್ಯ ಸೂಚಕರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು.—ಮಾನ್ಯ ಮಂತ್ರಿಗಳು ನಾನು ಒತ್ತಾಯಪಡಿಸಿರುವ ಎರಡು ತಾಲ್ಲೂಕುಗಳ ವಿಚಾರದಲ್ಲಿಯೂ ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಒಂದು ಭರವಸೆಯನ್ನು ನೀಡಿರುವುದರಿಂದ ನಾನು ನನ್ನ ನಿರ್ಣಯವನ್ನು ಒತ್ತಾಯಪಡಿಸಲು ಇಷ್ಟಪಡುವುದಿಲ್ಲ. ಆದ್ದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ನಾನು ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

No. 12.—Plea for removal of all restrictions on production, movement and sale of foodgrains within the State.

Sri B. HUTCHE GOWDA (Turuvekere).—Sir, I move resolution No. 12 which is as follows:—

"That this Assembly is of the opinion that all restrictions on production, movement and sale of foodgrains be withdrawn with immediate effect throughout the State (except restrictions on transportation of foodgrains out of the State and price control)."

Mr. SPEAKER.—Resolution moved:

"That this Assembly is of the opinion that all restrictions on production, movement and sale of foodgrains be withdrawn with immediate effect throughout the State (except restrictions on transportation of foodgrains out of the State and price control)."

Sri H. SIDDAVEERAPPA (Minister for Home Affairs and Agriculture).—May I with your permission submit one thing about the resolution that has just now been moved by the Hon'ble Member? The Government propose to allot a special day or half a day for a discussion on the food problem. I therefore appeal to the Hon'ble Members who have tabled resolutions on this problem of food, to avail themselves of that opportunity and discuss this subject then, and thereby give scope for other subjects being taken up now on the floor of the Assembly.

Sri M. MADIAH (Nanjangud—Scheduled Castes).—The Leader of the House *i.e.*, the Chief Minister also will be present on that day.

Sri A. BHEEMAPPA NAIK (Molakalmuru).—Even these resolutions could be moved that day so that we may have a consolidated opinion and the whole picture before us. Many other resolutions of that type may be taken up that day and discussed.

Sri H. SIDDAVEERAPPA.—If I may bring to your notice, there are as many as 16–17 resolutions tabled on the food problem. That shows the keen interest the Hon'ble Members have on this subject. Therefore, I would bring to your notice that if this suggestion is agreeable to them, in view of the fact that the Government propose to have a special day allotted for it, it may not be necessary to move all these resolutions.

ಶ್ರೀ ಬಿ. ಹುಚ್ಚೇಗೌಡರು.—ಇದರಲ್ಲಿ ನಾನು ಎಲ್ಲಾ ವಿಚಾರಗಳ ಮೇಲೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಆಹಾರ ನಿಯಂತ್ರಣ ಅಜೆ್ಞ ಮತ್ತು ರೈತರಿಗೆ ಸಂಬಂಧಪಟ್ಟ ಕೆಲವು ವಿಚಾರ ಈ ಎರಡು ಅಂಶಗಳ ಬಗ್ಗೆ ಮಾತ್ರ ಕೆಲವು ವಿಚಾರಗಳನ್ನು ಹೇಳಿ ಮುಗಿಸುತ್ತೇನೆ.....

ಅಧ್ಯಕ್ಷರು.—ಸರ್ಕಾರದವರು ಆಹಾರ ವಿಷಯದ ಬಗ್ಗೆ ಚರ್ಚೆ ಮಾಡಲು ಪ್ರತ್ಯೇಕವಾಗಿ ಒಂದು ಕಾಲವನ್ನೇ ನಿರ್ಧರಮಾಡಿದ್ದಾರೆ. ಆ ಕಾಲದಲ್ಲಿ ಈ ಅಂಶಗಳನ್ನೆಲ್ಲಾ ಒಟ್ಟಾಗಿ ಸೇರಿಸಿ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ. ಹಾಗೆ ಮಾಡುವುದೇ ಸೂಕ್ತವಾದ ದ್ದೆಂದು ಅನೇಕ ಮಾನ್ಯ ಸದಸ್ಯರೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ತಾವೇನೋ ಈಗಾಗಲೇ ತಮ್ಮ ನಿರ್ಣಯವನ್ನು ಸಭೆಯಮುಂದೆ ಮಂಡಿಸಿರತಕ್ಕದ್ದಾಗಿದೆ. ಅದನ್ನು ತಾವೀಗ ವಾಪಸ್ಸು ತೆಗೆದುಕೊಳ್ಳುವ ಹಾಗಿದ್ದರೆ ತೆಗೆದುಕೊಳ್ಳಬಹುದು.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ಮಾನ್ಯ ಸದಸ್ಯರು ಈ ವಿಷಯವಾಗಿ ಇನ್ನೂ ಸ್ವಲ್ಪ ಆಲೋಚನೆ ಮಾಡುವುದು ಉತ್ತಮವಾಗಿ ಕಾಣುತ್ತೆ. ಆದರೆ ನನ್ನದೊಂದು ವಿನಂತಿ—ಏನೆಂದರೆ ಈ ದಿವಸ ಯಾರು ಯಾರು ಈ ಸಂಬಂಧವಾಗಿ ನಿರ್ಣಯಗಳನ್ನು ತಂದಿದ್ದಾರೋ ಅವುಗಳನ್ನೆಲ್ಲಾ ಆ ದಿವಸ ಇಂದು ಅವು ಯಾವ ರೂಪದಲ್ಲವೆಯೋ ಆ ರೂಪದಲ್ಲೇ ಸಭೆಯಮುಂದೆ ಮಂಡಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ದಿವಸದ ನಿರ್ಣಯಗಳನ್ನು ಈ ದಿವಸ ಮಂಡಿಸಲು ಅವಕಾಶಕೊಡುವುದಕ್ಕಾಗುವುದಿಲ್ಲ. ಆಹಾರ ನೀತಿಯ ಮೇಲೆ ಸಾಮಾನ್ಯ ಚರ್ಚೆ ಮಾತ್ರ ನಡೆಯುತ್ತದೆ. ಅಷ್ಟಕ್ಕೆಅನುಕೂಲ ಕಲ್ಪಿಸಿಕೊಡಲಾಗಿದೆ. ಆ ದಿವಸ ಈ ವಿಚಾರಗಳನ್ನೆಲ್ಲಾ ಚರ್ಚೆ ಮಾಡಿದರೆ ಒಳ್ಳೆಯದಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ನನಗೆ ತಿದ್ದುಪಡಿಗಳನ್ನು ಸೂಚಿಸುವುದಕ್ಕೆ ಅವಕಾಶ ಕೊಟ್ಟರೆ ಆಗಬಹುದು.

Sri A. BHEEMAPPA NAIK.—By way of amendments all these things could be brought in.

Sri H. K. VEERANNA GOWDH (Maddur).—Sir, on the day that is to be specially appointed for discussion on food policy, I am afraid there will be no room for moving any amendments for I do not suppose there will be any definite resolution for discussion that day. Therefore, there will be no amendments to be moved.

ಶ್ರೀ ಎಂ. ಮಾಧಯ್ಯನವರು (ನಂಜನಗೂಡು—ಅನುಸೂಚಿತ ಜಾತಿಗಳು)—ಸ್ವಾಮಿ, ಮೊನ್ನೆ ರಾಜಪ್ರಮುಖರು ಅಪ್ಪಣೆಕೊಡಿಸಿದ್ದ ಭಾಷಣದ ಬಗ್ಗೆ ಸದಸ್ಯರು ಮಾಡಿದ ಟೀಕೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಎಂಬ ಬಗ್ಗೆ ಮಾನ್ಯ ಸದಸ್ಯರುಗಳಿಗೆಲ್ಲಾ ಬಹಳ ಕಾತರತೆಯಿತ್ತು. ಈ ನಿರ್ಣಯದ ಪರವಾಗಿ ಕೂಡ ಚೈಜರಿ ಬೆಂಚನವರ ಉತ್ತರ ಏನಿರುತ್ತೆಯೆಂಬ ಬಗ್ಗೆ ಎಲ್ಲರಿಗೂ ಇನ್ನೂ ಹೆಚ್ಚಿನ ಕಾತರತೆಯನ್ನುಂಟುಮಾಡಿದೆ. ಆದರೆ ಈ ವಿಷಯವನ್ನು ಇಂದು ಆ ಚೈಜರಿ ಬೆಂಚಿನಲ್ಲಿ ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಈ ವಿಚಾರವನ್ನು ಆ ಹವರು ಹಾಜರಿರರ ತಕ್ಕ ದಿವಸವೇ ತೆಗೆದುಕೊಂಡರೆ ಚೆನ್ನಾಗಿರುತ್ತದೆಂದು ನಾನು ಹೇಳುತ್ತೇನೆ.

Mr. SPEAKER.—It is left to the Hon'ble Mover either to withdraw the resolution or to press it.

Sri B. HUCHE GOWDA.—If permission is given to move the amendments .. ..

ಆ ದಿವಸ ಆಹಾರ ಶಾಖೆಯ ಮಂತ್ರಿಗಳು ನಿರ್ಣಯ ರೂಪವಾಗಿ ಒಂದು ಸೂಚನೆಯನ್ನು ತರುವುದಾದರೆ ತಿದ್ದುಪಡಿಯನ್ನು ಮಂಡಿಸುವುದಕ್ಕೆ ಅವಕಾಶಕೊಟ್ಟರೆ ನಾನು ವಾಪಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn.

No. 13.—Electric Power utilisation within the State itself.

ಶ್ರೀ ಎ. ವಿ. ನರಸಿಂಹರೆಡ್ಡಿಯವರು (ಬೆಂಗಳೂರು ದಕ್ಷಿಣ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ. ಅದನ್ನು ಮಂಡಿಸುತ್ತೇನೆ—

"ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯ ದೀಪವನ್ನೊದಗಿಸುವುದು, ನೀರಾವರಿ "ಪಂಪು"ಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನೂ ಮತ್ತು ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನೂ ಒದಗಿಸುವುದು.

ಇವುಗಳಿಗೆ ಸಂಬಂಧಪಟ್ಟ ಅವಶ್ಯಕತೆಗಳು ಪೂರ್ತಿಯಾಗಿ ನೆರವೇರುವವರೆಗೂ, ಸಂಸ್ಥಾನದಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯನ್ನು ಸಂಸ್ಥಾನದ ಬಳಕೆಗೆ ಮಾತ್ರವೇ ಉಪಯೋಗಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಅಧ್ಯಕ್ಷರು.—ಶ್ರೀ ಪಳನಿಯಪ್ಪರವರು 140ನೆಯ ರೂಲ್ ಪ್ರಕಾರ ಒಂದು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದರು. 9ನೆಯ ನಿರ್ಣಯ ವಿದ್ಯುಚ್ಛಕ್ತಿಯ ದೀಪಗಳ ವಿಷಯವನ್ನೂ 11ನೆಯ ನಿರ್ಣಯ ಇರಿಗೇಷನ್ ವಿಚಾರವನ್ನೂ ಸೂಚಿಸಿವೆ. 13ನೆಯ ನಿರ್ಣಯವೂ ಅದೇ ವಿಷಯವನ್ನೊಳಗೊಂಡಿದೆ.

Under Rule 140, a motion must not raise a question substantially identical with one on which the Assembly has given a decision in the same session.

But this resolution is different from the other two as it raises the question of limiting the utilisation of the Electricity produced in the State to the State itself. So I propose to allow it to be discussed in the House.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ನಾನು ಇದನ್ನು ಮಂಡಿಸುವಾಗ ಇದರ ಉದ್ದೇಶವೇನೆಂಬುದನ್ನು ಪೂರ್ವಭಾವಿಯಾಗಿ ಈ ಸಭೆಯವರ ಅವಗಾಹನೆಗೆ ತರುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ.

ಈ ವಿಷಯ ಬಹಳ ತೀವ್ರತರವಾದುದು ಮತ್ತು ಅಗತ್ಯವಾದುದು ಎಂದು ಕಂಡುಬಂದರೆ ಸರ್ಕಾರದವರು ಪರಿಶೀಲನೆ ಮಾಡಬೇಕಾದದ್ದು ಅವಶ್ಯಕ ಎಂಬುದು ನನ್ನ ಖಚಿತ ಅಭಿಪ್ರಾಯ. ಇತರ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯುಚ್ಛಕ್ತಿ ಸಹಾಯದಿಂದ ಈ ದಿವಸ ಬಹಳವಾಗಿ ಕೈಗಾರಿಕೆಯಿಲ್ಲೂ ಮತ್ತು ವ್ಯವಸಾಯದಲ್ಲೂ ಮುಂದುವರೆಯುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ದಕ್ಷಿಣ ಭಾರತದಲ್ಲೆಲ್ಲಾ ಮೈಸೂರು ಸಂಸ್ಥಾನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುತ್ತಿದ್ದೇವೆ. ಈ ವಿದ್ಯುಚ್ಛಕ್ತಿ ಉಪಯೋಗ ಈ ಸಂಸ್ಥಾನದ ಪ್ರಜೆಗಳಿಗೆ ಪೊಟ್ಟಮೊದಲನೆಯದಾಗಿ ಹೆಚ್ಚಿನ ರೀತಿಯಲ್ಲಿ ಪ್ರತಿಯೊಬ್ಬರಿಗೂ ಸಿಕ್ಕುವಹಾಗೆ ಏನಿಯೋಗ ಮಾಡುವುದಕ್ಕೆ ಸಾಧ್ಯವಿಲ್ಲವೆ ಎಂಬ ಪ್ರಶ್ನೆ ನನಗೆ ಅನೇಕಸಾರಿ ಬಾಧಿಸುತ್ತಿದೆ ಆದ್ದರಿಂದ ಸರ್ಕಾರಕ್ಕೆ ಈ ವಿಷಯದಲ್ಲಿ ಬೇರೆ ಯಾವ ಅನಾನುಕೂಲಗಳು ಅಥವ ಅಡಚಣೆಗಳು ಇಲ್ಲದಿದ್ದರೆ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಬಿನ್ನೈಸಿಕೊಳ್ಳುತ್ತೇನೆ. ಈ ನಿರ್ಣಯದ ಸಾರಾಂಶವಾದರೂ ಕೂಡ ಗ್ರಾಮಾಂತರಗಳಿಗೆ ಮತ್ತು ಪಟ್ಟಣಗಳಿಗೆ ಎಷ್ಟು ವಿದ್ಯುಚ್ಛಕ್ತಿ ಆವಶ್ಯಕ ಎಂಬುದನ್ನು ತಿಳಿಸುವುದೇ ಆಗಿದೆ. ದೇಶ ಮುಂದುವರಿಯುವುದಕ್ಕೆ, ಜನ ಮುಂದುವರಿಯುವುದಕ್ಕೆ ಕೈಗಾರಿಕೆ ವ್ಯವಸಾಯ ಮುಂತಾದುವುಗಳಿಗಾಗಿ ವಿದ್ಯುಚ್ಛಕ್ತಿ ಸಹಾಯ ಬೇಕಾಗಿದೆ. ಹಳ್ಳಿಯಲ್ಲಿ ಪ್ರತಿಯೊಬ್ಬರಿಗೂ ಇದರ ಸೌಲಭ್ಯಗಳು ಸಿಕ್ಕಲಿ ಎಂಬ ದೃಷ್ಟಿಯಿಂದ ಈ ನಿರ್ಣಯವನ್ನು ತಂದವನಾಗಿದ್ದೇನೆ. ಈ ನಿರ್ಣಯದ ಉದ್ದೇಶವನ್ನು ತಿಳಿಸುವಾಗ ಸರ್ಕಾರದಿಂದ ಕೆಲವು ಧೋರಣೆಗಳನ್ನು ನಿರೀಕ್ಷಿಸುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ರೂಪವಾಗಿ ಅವರ ಅಭಿಪ್ರಾಯವನ್ನು ತಿಳಿಸುವರೆಂದು ನಂಬಿದ್ದೇನೆ. ಕೆಲವು ನಂದರ್ಭಗಳಲ್ಲಿ ಹೊರಪ್ರಾಂತಗಳೊಡನೆ ಕೆಲವು ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆಂದು ಈಗಾಗಲೇ ನನ್ನ ಮಿತ್ರರು ಕೆಲವರು ಹೇಳುತ್ತಿದ್ದರು. ಅವರಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ವಿಚಾರದಲ್ಲಿ ಒಂದು ಮಾತು. ವಿದ್ಯುಚ್ಛಕ್ತಿ ಯೋಜನೆ ಪ್ರಾರಂಭಿಸುವಾಗಲೇ ಸರ್ಕಾರದವರು ಆ ರೀತಿ ಒಂದು ಒಪ್ಪಂದಕ್ಕೆ ಬರುವುದು ಸ್ವಾಭಾವಿಕವಾಗಿರುವಾಗ ಆ ಒಂದು ನನ್ನ ವೇಶದಲ್ಲಿ ಈ ನಿರ್ಣಯ ತರುವುದು ಸಾಧುವೇ ಎಂದು ಅನುಮಾನ ಬರಬಹುದು. ಆದರೆ ಇದರ ಉದ್ದೇಶ ಸ್ಪಷ್ಟವಾಗಿದೆ. ಆ ದೃಷ್ಟಿಯಿಂದ ಮಾನ್ಯ ಸರ್ಕಾರದವರು ಒಂದು ಯೋಜನೆ ಮಾಡತ್ತಾರೆಂದು ನಂಬುತ್ತೇನೆ. ಅಲ್ಲದೆ ಯಾವ ವಿಧದಲ್ಲೇ ಆಗಲಿ ಒಂದು ಒಪ್ಪಂದಮಾಡಿಕೊಂಡಿದ್ದರೂ ಕೂಡ ಸಂಸ್ಥಾನದ ಬೇಡಿಕೆಯನ್ನು ಪೂರೈಸಿದ ಮೇಲೆಯೇ ಬೇರೆಯವರಿಗೆ ಒದಗಿಸಬೇಕಾದದ್ದು ಧರ್ಮ ಎಂಬುದನ್ನು ನಾನು ಮೊದಲನೆಯದಾಗಿ ಸರ್ಕಾರದಲ್ಲಿ ತಿಳಿಸಬೇಕಾಗಿದೆ. ಇಷ್ಟು ಹೇಳಿ ಸರ್ಕಾರದ ಉತ್ತರವನ್ನು ನಿರೀಕ್ಷಿಸುತ್ತಾ ಈ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸುತ್ತೇನೆ.

Mr. SPEAKER.—Resolution moved :

"That this Assembly is of the opinion that the electricity produced in the State be utilised for the use of the State only, until such time when the demand of rural electrification, supply of power to irrigation pumps, small and big industries' demand for supply of electric power is met completely."

ಶ್ರೀ ಎಂ. ಸಿ. ಆಂಜನೇಯರೆಡ್ಡಿಯವರು (ಚಿಂತಾಮಣಿ).—ಸ್ವಾಮಿ, ಈಗ ನಮ್ಮ ಮಿತ್ರರಾದ ಶ್ರೀ ನರಸಿಂಹರೆಡ್ಡಿಯವರು ತಂದಿರತಕ್ಕಂಥ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬ ನಿರ್ಣಯವನ್ನು ಸಮರ್ಥನೆಮಾಡುತ್ತಾ, ಕೆಲವಂಶಗಳನ್ನು ತಮ್ಮದುರಿನಲ್ಲಿಡಬೇಕೆಂದು ಅಪೇಕ್ಷಿಸುತ್ತೇನೆ. ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ವಿಷಯವನ್ನೂ ನಮ್ಮ ದೇಶಕ್ಕೆ ಅದರಿಂದ ಎಷ್ಟು ಅನುಕೂಲವಾಗುತ್ತದೆಂಬುದನ್ನೂ ಇದುವರೆಗೆ ಅನೇಕ ಮಿತ್ರರು ಹೇಳಿರುತ್ತಾರೆ. ಅದರೂ ನಾನೂ ಕೂಡ ಈ ವಿಷಯವನ್ನು ಸ್ವಲ್ಪ ಒತ್ತಿ ಹೇಳಬೇಕೆಂದು ಇಚ್ಛಿಸುತ್ತೇನೆ. ಚಿಂತಾಮಣಿ ತಾಲ್ಲೂಕಿನ ಎರಡು ಹೋಬಳಿಗಳಲ್ಲಿ (ಅಂದರೆ ಮಂಗಾನಹಳ್ಳಿ ಮತ್ತು ಚಿಲಕಲನೇರ್ಪು) ಸುಮಾರು ಒಂದು ಸಾವಿರ ಬಾವಿಗಳಿವೆ. ಈ ಬಾವಿಗಳಲ್ಲಿ ನೀರು 50–60 ಅಡಿಗಳ ಕೆಳಗಿದೆ. ಆ ಬಾವಿಗಳಲ್ಲಿ ಕಪಿಲೆಯಿಂದ ನೀರು ತೆಗೆದು ಬೆಳೆ ಬೆಳೆಯುವುದು ಎಷ್ಟು ಕಷ್ಟವೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಒಂದು ಬೆಳೆ ತೆಗೆಯಲು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಎತ್ತುಗಳನ್ನು ಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ಅನೇಕ ರೈತರಿಗೆ ಬಹಳವಾಗಿ ತೊಂದರೆಗಳಿವೆ. ಇಷ್ಟೇ ಅಲ್ಲದೆ ಈಗ ಕ್ಷಾಮಕ್ಕೀಡಾಗಿರುವ ಪ್ರದೇಶಗಳು ಬೇರೆ ಇರುವುದು ಎಲ್ಲರಿಗೂ ಗೊತ್ತೇ ಇದೆ. ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿ ಎಲ್ಲಾ ಬಾವಿಗಳಿಗೂ ವಿದ್ಯುಚ್ಛಕ್ತಿ ಸಹಾಯ ನೀಡಿದ್ದರೆ ಕ್ಷಾಮದ ಹೊಡೆತಕ್ಕೆ ಜನರು ಸಿಕ್ಕುತ್ತಿರಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಏಕೆಂದರೆ ಚಿಂತಾಮಣಿ ತಾಲ್ಲೂಕಿನಲ್ಲಿ ಸಾವಿರಾರು ಎಕರೆಗಳಲ್ಲಿ ಕಪಿಲೆಯ ಮುಖಾಂತರ ಬೆಳೆಯಾಗುತ್ತಿದೆ. ಆದಕಾರಣ ಇದು ಬಹಳ ಮುಖ್ಯವಾಗಿ ಆಗಬೇಕಾದ ಕೆಲಸವೆಂಬುದನ್ನು ಸರ್ಕಾರದವರು ಗಮನಿಸಿ ಈ ಕೆಲಸವನ್ನು ಅತಿ ಜಾಗ್ರತೆಯಾಗಿ ಮಾಡಿಸಿಕೊಡಬೇಕೆಂದು ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಅನೇಕ ಎಸ್ಟಿಮೇಟುಗಳು ಬಂದರೂ ಕೂಡ ವಿದ್ಯುಚ್ಛಕ್ತಿ ಸಾಮಾನು ಸಿಕ್ಕುವುದಿಲ್ಲ ಎಂದು ಸಾಧಾರಣವಾಗಿ ಮಂತ್ರಿಗಳಿಂದ ಜವಾಬು ಬರುತ್ತದೆ. ಈ ವಿಷಯದಲ್ಲಿ ಏನಾದರೂ ವಿಶೇಷ ಕಾರ್ಯಕ್ರಮ ಕೈಕೊಂಡು ಬೆನ್ನಿ ಮುಖಾಂತರವೋ ಅಥವಾ ಪಾಶ್ಚಾತ್ಯ ದೇಶಗಳಿಗೆ ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಟ್ಟೋ ಹೆಚ್ಚಾಗಿ ಸಾಮಾನುಗಳನ್ನು ತರುವುದಕ್ಕೆ ಏರ್ಪಾಡು ಮಾಡಿ ನಮ್ಮ ದೇಶವನ್ನು ಉದ್ಧಾರವಾಡುವ ಯೋಜನೆಯನ್ನು ಬಹಳ ಜಾಗರೂಕತೆಯಿಂದ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಲ್ಲದೆ ಈ ವರ್ಷದ ಬಜೆಟಿನಲ್ಲಿ ವಿದ್ಯುಚ್ಛಕ್ತಿಗಾಗಿ ಹೆಚ್ಚು ಹಣ ಒದಗಿಸಿಲ್ಲವೆಂದು ಕಂಡುಬಂದಿದೆ. ಆದರೆ ಬೇರೆ ಯಾವುದಾದರೂ ಬಾಬುಗಳಿಗೆ ಕಡಮೆಮಾಡಿ ಹೊಟ್ಟೆಗೆ ಉಟ್ಟು ಹಾಕುವ ಈ ಯೋಜನೆ ಬಹಳ ಮುಖ್ಯವೆಂಬುದನ್ನು ಗಮನಿಸಿ ಈ ವಿಷಯಕ್ಕೆ ಹೆಚ್ಚಾದ ಮುತವರ್ಜಿ ವಹಿಸಬೇಕಾದದ್ದು ಆವಶ್ಯಕ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ಬಹಳ ಸಹಾಯಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

2 P.M.

ಅಧ್ಯಕ್ಷರು.—ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ವಿದ್ಯುಚ್ಛಕ್ತಿ ದೀಪಗಳ ಆವಶ್ಯಕತೆಯನ್ನು ಕುರಿತು

(ಅಧ್ಯಕ್ಷರು)

ಶ್ರೀಮಾನ್ ಶಿವನಂಜೇಗೌಡರು ನಿರ್ಣಯ ತಂದಿದ್ದಾರೆ. ನೀರಾವರಿ ಪಂಪುಗಳಿಗೆ ಬೇಕಾದ ವಿದ್ಯುಚ್ಛಕ್ತಿ ಅವಶ್ಯಕತೆಯನ್ನು ಕುರಿತು 11ನೇ ನಿರ್ಣಯ ಶ್ರೀಮಾನ್ ಭೀಮಪ್ಪನಾಯಕರು ತಂದಿದ್ದಾರೆ. ಇವೆರಡರ ಮೇಲೆ ಯೂ ಚರ್ಚೆಯಾಗಿದೆ. ಆದ್ದರಿಂದ ಆ ಎರಡು ನಿರ್ಣಯಗಳಲ್ಲಿ ನಮೂದಾಗಿರದೆ ಈ ನಿರ್ಣಯದಲ್ಲಿ ಮುಖ್ಯವಾಗಿ ಅಡಕವಾಗಿರುವ ಬೇರೆ ಅಂಶವನ್ನು ಮಾತ್ರ ಕುರಿತು ಮಾತನಾಡುವುದು ಸೂಕ್ತ.

ಶ್ರೀ ಕೆ. ಪ್ರಭಾಕರರಾವರು (ನೆಲಮಂಗಲ-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದಲ್ಲಿರುವಕ್ಕ ಮೂಲ ತತ್ವಕ್ಕೆ ಒಂದು ಮೆಚ್ಚಿಗೆಯನ್ನು ತೋರಿಸುತ್ತಾ, ಈ ನಿರ್ಣಯವನ್ನು ಅನುಮೋದಿಸುತ್ತಾ, ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ನಮ್ಮ ಸಂಸ್ಥಾನದಲ್ಲಿ ಮೂಲಭೂತವಾಗಿ ಉತ್ಪನ್ನವಾಗತಕ್ಕ ವಿದ್ಯುಚ್ಛಕ್ತಿ, ನಮ್ಮ ದೇಶಕ್ಕೆ ಸಾಕಾಗುವಷ್ಟು ಆಗಿ ಹೆಚ್ಚಾಗಿರುವಂಥದನ್ನು ಅಜುಬಾಜು ಸರ್ಕಾರಗಳಲ್ಲಿ ಮಾರಿಕೊಂಡಿರತಕ್ಕ ಒಪ್ಪಂದದ ಮೇರೆ ಅವರುಗಳಿಗೆ ಕೊಡುತ್ತಾ ಇದ್ದಾರೆ. ಅದು ಎಷ್ಟು ಎಂಬುದು ಇದಕ್ಕೆ ಅನ್ವಯವಾಗುವುದಿಲ್ಲ. ಈ ವಿದ್ಯುಚ್ಛಕ್ತಿಯನ್ನು ದೇಶದಲ್ಲಿ ಬಳಸುವಾಗ ಟ್ರಾನ್ಸ್‌ಫಾರ್ಮರ್ ಇಲ್ಲ ಅಂತರೋ, ಮತ್ತೊಂದು ಕಾರಣ ದಿಂದರೋ ಅದನ್ನು ಮುಂದುವರಿಸುವುದಕ್ಕೆ ಬದಲಾಗಿ ಹಿಂತೆಗೆಯುವುದಾಗಲೀ, ಬೇರೆ ಯಾವ ವಿಧದಲ್ಲಾದರೂ ಅಡ್ಡಿ ತರುವುದಾಗಲೀ ಒಪ್ಪತಕ್ಕ ಮಾತಲ್ಲ. ವಿದ್ಯುಚ್ಛಕ್ತಿ ಇರಾವೆ ಒಂದು paying Department. ಇದು ಸರ್ವರೂ ಒಪ್ಪತಕ್ಕ ಮಾತು. Production of Electricity is itself a way to the growth of industries. ಆದ್ದರಿಂದ ಯಾವ ವಿಧವಾದ ಅಡಚಣೆ, ಆತಂಕ ತರುವುದು ಒಳ್ಳೆಯದಲ್ಲ ಎಂದು ತೀವ್ರವಾಗಿ ಹೇಳಬೇಕಾಗಿ ಬರುತ್ತದೆ. ಈ ಸಂದರ್ಭದಲ್ಲಿ ಹೊರಗೆ ವಿದ್ಯುಚ್ಛಕ್ತಿ ಕೊಡುವ ಉದ್ದೇಶ, ಅವರೊಂದಿಗೆ ಮಾಡಿಕೊಂಡಿರುವ ಒಪ್ಪಂದ, ಅವನ್ನು ಹೆಚ್ಚುಕಡಮೆ ಮಾಡಬಹುದೇ ಎಂಬ ವಿಚಾರಗಳಿಗೆ ಉತ್ತರ ಕೊಡುವುದು ಅನಂಭವ. ಒಪ್ಪಂದ ಆಗಿದೆ. ಅದನ್ನು ಕಲಕುವ ಹಾಗಿಲ್ಲ. ವಿದ್ಯುಚ್ಛಕ್ತಿ ಎಂಬುದನ್ನು ಮೂರು ಭಾಗವಾಗಿ ಮೂರು ದೃಷ್ಟಿಯಿಂದ ನೋಡುತ್ತಾ ಇದ್ದೇನೆ. ದೀಪ, ನೀರಾವರಿ ಈ ವಿಚಾರಗಳಲ್ಲಿ ಚರ್ಚೆಯಾಗಿದೆ ಎಂಬುದಾಗಿ ಒಂದು ಸಲಹೆ ಅಧ್ಯಕ್ಷರಿಂದ ಬಂದಿರುವುದರಿಂದ ಉಳಿದ ವಿಚಾರವನ್ನು ಮಾತ್ರ ಹೇಳಬೇಕಾಗಿದೆ. ನಮ್ಮ ದೇಶದಲ್ಲಿರತಕ್ಕ ಸಣ್ಣಪುಟ್ಟ ಕೈಗಾರಿಕೆಗಳನ್ನು ವಿದ್ಯುಚ್ಛಕ್ತಿ ಅಭಾವದಿಂದ ನಿಲ್ಲಿಸಿದ್ದೇವೆ ಎಂದು ಕೆಲವು ಮಿರ್‌ಗಳವರು ಅರ್ಧ ದಿನ ಕೆಲಸಮಾಡುತ್ತಾರೆ. ವಿದ್ಯುಚ್ಛಕ್ತಿ ಉತ್ಪನ್ನ ಕಡಮೆಯಾಗಿರುವುದರಿಂದ ಅದನ್ನು ರೆಗ್ಯುಲೇಟ್‌ಮಾಡಬೇಕೆಂದು ಈ ರೀತಿ ಕಡಿಮೆಮಾಡಿರುವುದರಿಂದ ಕೈಗಾರಿಕೆಗೆ ಧಕ್ಕೆ ಬರುತ್ತದೆ, ಕೂಲಿಗಾರರಿಗೆ ಕೂಲಿ ಕಡಿಮೆಯಾಗುತ್ತದೆ. ಇತ್ಯಾದಿ ನಷ್ಟಗಳು ಉಂಟಾಗುತ್ತವೆ. ಆಗ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪನ್ನಮಾಡಬೇಕಾದ ಪ್ರಮೇಯ ಬರುತ್ತದೆ. ಇದು ನಿರ್ಬಾಧವಾದದ್ದು ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಒಂದವೇಳೆ ಅಮೆರಿಕಾದಂತಹ ದೂರ ದೇಶದಿಂದ ತರಿಸತಕ್ಕ ಕೆಲವು ಯಂತ್ರಗಳ ಅಭಾವದಿಂದ ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಒಂದೊಂದು ಸಲ ತೊಂದರೆಯಾಗುತ್ತದೆ. ಎಂದರೆ—Circumstances beyond our control within a limit ಅದು ಸಹಜವಾಗಿ ಕಾಣುತ್ತದೆ. ಯಂತ್ರದ ಅಭಾವ ಎನ್ನುವುದು ಬೋರ್ಡಾ ಬಡ್ಜೆಟ್‌ನ ದೃಷ್ಟಿಯಿಂದ ಒಪ್ಪಿಕೊಳ್ಳುವ ಮಾತಲ್ಲ. ಮೂಲಭೂತವಾಗಿ ವಿದ್ಯುಚ್ಛಕ್ತಿ ಉತ್ಪನ್ನಮಾಡುವುದನ್ನು ಕಡಿಮೆಮಾಡುವುದರ ದುಷ್ಪರಿಣಾಮ ನಾನಾ ರೀತಿಯಲ್ಲಿ ಉಂಟಾಗುವುದರಿಂದ ಅದನ್ನು ಹೆಚ್ಚಾಗಿ ಉತ್ಪತ್ತಿಮಾಡಲೇಬೇಕು. ಆದ್ದರಿಂದ ಸರ್ಕಾರದವರಿಗೆ ಸಲಹೆಮಾಡುವುದೇನೆಂದರೆ: ಬಡ್ಜೆಟ್ ಡಿಫಿಸಿಟ್ ಆಗಿರುವುದನ್ನು ತೋರಿಸಿ ವಿದ್ಯುಚ್ಛಕ್ತಿ ಉತ್ಪತ್ತಿಮಾಡುವುದನ್ನು ಕಡಮೆಮಾಡಬಾರದು. ಆ ರೀತಿ ಮಾಡಿದ್ದೇ ಆದರೆ ಅದರ ದುಷ್ಪರಿಣಾಮ ಸಂಸ್ಥಾನದಲ್ಲೂ ಮತ್ತು ಹೊರಗಡೆಯೂ ನಾನಾ ರೀತಿಯಲ್ಲಿ ಉಂಟಾಗುವುದರಲ್ಲಿ ಸಂದೇಹವಿಲ್ಲ. ನೀರಾವರಿ ಮತ್ತು ದೀಪಗಳಿಗೆ ವಿದ್ಯುಚ್ಛಕ್ತಿ, ಒದಗಿಸುವ ವಿಚಾರ ಚರ್ಚೆಯಾಗಿದೆ ಎಂದು ಕೇಳಿದರೂ ಕೂಡ ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಸಂಬಂಧಪಟ್ಟ ಮತ್ತೊಂದು ಅಂಶವನ್ನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿರುವ ಆಹಾರದ ಅಭಾವವನ್ನು ನೀಗುವಂತೆ ಬಾವಿಗಳನ್ನು ತೋಡಿಕ್ಕೊಂಡು ಹೆಚ್ಚು ಬೆಳೆ ಬೆಳೆಯಲು ಸರ್ಕಾರದವರು ಹಣವನ್ನು ಸಾಲದ ರೂಪವಾಗಿ ಕೊಟ್ಟಿದ್ದಾರೆ; ಅಲ್ಲದೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಪಂಪುಗಳನ್ನು ಹಾಕಿಕೊಂಡು ನೀರು ಹಾಯಿಸಲು ಅನುಕೂಲಮಾಡಿಕೊಟ್ಟಿದ್ದಾರೆ. ಈ ರೀತಿ ಸೌಕರ್ಯ ಒದಗಿಸಿಕೊಟ್ಟು ಆಹಾರದ ಅಭಾವವು ನೀಗಿ ಎಂಬ ಸಂದೇಶವನ್ನು ಕೊಟ್ಟಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಈ ಸಂಬಂಧವಾಗಿ ಸಾಲಪಡೆದವರು ಬಜೆ, ಬಾಳೆ, ಕಬ್ಬು ಮುಂತಾದುವುಗಳನ್ನು ಬೆಳೆದು ಆಹಾರಧಾನ್ಯಗಳ ಅಭಾವವು ಆಳಿಯದಂತೆ ಮಾಡಿದ್ದಾರೆ. ಆದ್ದರಿಂದ ವಿದ್ಯುಚ್ಛಕ್ತಿಯನ್ನು ಕೊಡುವಾಗ ತೆಗೆದುಕೊಂಡವರು ಅದನ್ನು ಬೇರೆ ರೂಪದಲ್ಲಿ ಉಪಯೋಗಿಸದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾದ ಪ್ರಮೇಯ ಈಗ ಇದೆ.

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಗೆ ಡಿಮ್ಯಾಂಡ್ ಯಾವ ವಿಧದಲ್ಲೂ ಕಡಮೆಯಾಗುವುದಕ್ಕೆ ಕಾರಣವಿಲ್ಲ ಎಂಬುದು ಸರ್ಕಾರದವರಿಗೆಗೊತ್ತಿದ್ದರೂ ಕೂಡ, ಅನಿವಾರ್ಯವಾದ ಸಂದರ್ಭಗಳಲ್ಲಿ ಒಂದು ನಿಗದಿಯಾದ ಪ್ರಮಾಣದಲ್ಲೇ ಉತ್ಪನ್ನಮಾಡಬೇಕಾಗಿ ಬರುತ್ತದೆ. ಈ ರೂಪದಲ್ಲಿರತಕ್ಕ ನಿರ್ಣಯವನ್ನು ಅನುಮೋದಿಸುತ್ತಾ, ನಮ್ಮ ಪಿತ್ರರು ತಂದಿರತಕ್ಕ ಈ ಸಲಹೆಯನ್ನು ಒಪ್ಪಿಕೊಳ್ಳುವುದು ಸೂಕ್ತ. ಸಂಸ್ಥಾನದಿಂದ ಹೊರಗೆ ಕೊಡುವ ವಿದ್ಯುಚ್ಛಕ್ತಿಯನ್ನು ಕೊಂಚ ಕಡಮೆಮಾಡಿ ನಮ್ಮ ದೇಶಕ್ಕೆ ಕಡಮೆಯಾಗಿರುವುದನ್ನು ಮೇಕ್‌ಅಪ್ ಮಾಡಿ ಎಂಬ ಒಂದು ವಾಣಿಯನ್ನು ಎತ್ತಿದ್ದಾರೆ. ಆ ರೀತಿ ಈಗ ಮಾಡುವುದಕ್ಕೆ ಅವಕಾಶ ವಿಲ್ಲ. ಆದ್ದರಿಂದ ವಿದ್ಯುಚ್ಛಕ್ತಿ ಹೆಚ್ಚು ಉತ್ಪನ್ನಮಾಡುವುದಕ್ಕೆ ವರ್ಷೇ ವರ್ಷೇ ಯಾವ ವಿಧವಾದ ಅಡ್ಡಿಯನ್ನೂ ತಂದುಹಾಕದೆ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕು. ವಿದ್ಯುಚ್ಛಕ್ತಿಯ ಏನಿಯೋಗದ ಬಗ್ಗೆ 3 ಮಾರ್ಗಗಳನ್ನು ಸೂಚನೆಮಾಡಿದ್ದಾರೆ: (i) ಸಣ್ಣಪುಟ್ಟ ಕೈಗಾರಿಕೆಗಳು; (ii) ದೀಪ ಮತ್ತು (iii) ನೀರಾವರಿ ಕೆಲಸಗಳು. ದೀಪಕ್ಕೆ ವಿದ್ಯುಚ್ಛಕ್ತಿ, ಒದಗಿಸಿದಾಗ, ಅದನ್ನು ಬೇರೆ ಬಾಬುಗಳಿಗೆ ಏನಿಯೋಗಿಸತಕ್ಕ ಪ್ರಮೇಯವಿಲ್ಲ. ಪಂಪು ಮುಂತಾದ ನೀರಾವರಿ ಕೆಲಸಗಳಿಗೆ ಹೆಚ್ಚಾಗಿ ಕೊಡಬೇಕಾಗುತ್ತದೆ. ಆದರೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಪಂಪು ಹಾಕಿಸಿ ಕೆಲಸಮಾಡಿಸತಕ್ಕವರು ಸಾಮಾನ್ಯವಾಗಿ ಧನಿಕರಾಗಿರುತ್ತಾರೆ. ಬಡವರು ವಿದ್ಯುಚ್ಛಕ್ತಿ ತೆಗೆದುಕೊಂಡು ಬೇಸಾಯವನ್ನಾಗಲಿ ಇತರ ಕೈಗಾರಿಕೆಯನ್ನಾಗಲೀ ನಡೆಸತಕ್ಕ ಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಒಂದು ಕಡೆ (i) ವಿದ್ಯುಚ್ಛಕ್ತಿ,

ಯನ್ನು ಹೆಚ್ಚಾಗಿ ಉತ್ಪನ್ನಮಾಡತಕ್ಕ ಪ್ರಮೇಯ; (ii) ಉತ್ಪನ್ನಮಾಡಿದುದನ್ನು ನ್ಯಾಯವಾಗಿ ಕೊಡತಕ್ಕ ಪ್ರಮೇಯ; (iii) ಕೊಟ್ಟಮೇಲೆ ಅದು ಸರಿಯಾಗಿ ವಿನಿಯೋಗವಾಗುತ್ತಿದೆಯೇ ಎಂಬುದನ್ನು ನೋಡಿಕೊಳ್ಳತಕ್ಕ ಪ್ರಮೇಯ—ಇವುಗಳನ್ನೆಲ್ಲಾ ಸರ್ಕಾರದವರು ಗಮನಿಸಬೇಕೆಂದು ಹೇಳಿ ಈ ನಿರ್ಣಯವನ್ನು ಅನುಮೋದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಧ್ಯಕ್ಷರೇ, ಈ ನಿರ್ಣಯದ ಮೂಲೋದ್ದೇಶದ ವಿಚಾರವಾಗಿ ಸಂದೇಹಕ್ಕೆ ಕಾರಣವೇ ಇಲ್ಲ. ಆ ದೃಷ್ಟಿಯಿಂದ ನೋಡುವುದಾದರೆ ಈ ನಿರ್ಣಯದ ಆವಶ್ಯಕತೆಯೇ ಇರಲಿಲ್ಲವೆಂಬುದನ್ನು ನಾನು ಹೇಳುತ್ತೇನೆ. ಏಕೆಂದರೆ, ಯಾರಿಗಾದರೂ ಸರಿಯೆ, ಮೈಸೂರು ದೇಶದ ಎರೆಕ್ಟ್ರಿಕ್ ಪವರನ್ನು ಮೈಸೂರು ದೇಶದವರಿಗೆ ತಪ್ಪಿಸಿ ಹೊರಗೆ ಕೊಡಬೇಕೆಂದು ನಾವು ಉದ್ದೇಶಪಟ್ಟು ಕೊಂಡಿದ್ದೇವೆಂದು ಸಂದೇಹವೇಕೆ ಬಂತೆಂದು ನಾನು ಕೇಳುತ್ತೇನೆ. ನಮ್ಮ ದೇಶಕ್ಕೆ ಬೇಕಾದಷ್ಟು ವಿದ್ಯುಚ್ಛಕ್ತಿ ಸರಬರಾಜು ಈಗಲೂ ಇದೆ. ಹೆಚ್ಚಾಗಿರುವುದನ್ನು ಮಾತ್ರ ಪರಪ್ರಾಂತಗಳವರಿಗೆ ಮಾರುವುದರಿಂದ ಹೆಚ್ಚಿಗೆ ಲಾಭ ಬರುವ ಹಾಗಿದ್ದರೆ ಮಾರುತ್ತೇವೆಯೇ ಹೊರತು ಇಲ್ಲದಿದ್ದರೆ ಇಲ್ಲ. ಈಗ ಕೆಲವು ಕಡೆಗೆ ಸರಬರಾಜು ಮಾಡುವುದಕ್ಕೆ Refuse ಮಾಡಿದ್ದಾರೆಂದು ಹೇಳಿದ್ದಕ್ಕೆ ಹಿಂದೆಯೇ ಅನೇಕ ಸಾರಿ ಉತ್ತರ ಹೇಳಿದ್ದೇವೆ. ನಿಜ, ಬೆಂಗಳೂರು ಸಿಟಿಯಲ್ಲಿ ಕೆಲವು ಕೈಗಾರಿಕೆಗಳಿಗೆ ಪವರ್ cut ಮಾಡಿದ್ದೇವೆ, ಪವರ್ ಇಲ್ಲ ಎಂದು. ಇದಕ್ಕೆ ಕಾರಣ ಇಷ್ಟೆ. ನಮ್ಮಲ್ಲಿ 50 ಸೈಕಲ್ಸ್‌ನಲ್ಲಿ ಈಗಲೂ ಬೇಕಾದಷ್ಟು ಪವರ್ ಇದೆ. ಆದರೆ ಈಗ ಬೇಕಾದ converting apparatus, ಮೋಟಾರುಗಳು ಸಿಕ್ಕುತ್ತಿಲ್ಲ. ಆದ್ದರಿಂದ ಶಿವನ ಸಮುದ್ರದಿಂದ ಬರುವ 25 ಸೈಕಲ್ ಪವರನ್ನು cut ಮಾಡಬೇಕಾಗಿದೆ. ಈ 25 ಸೈಕಲ್ ಪವರ್ ಈಗ ಒದಗಿಸುತ್ತಿರುವುದು ಚಿನ್ನದಗಣಿ, ಬೆಂಗಳೂರಿನಲ್ಲಿರುವ ಅರ್ಧ ಮುಕ್ಕಾಲು ಯಂತ್ರ ಕೈಗಾರಿಕೆಗಳಿಗೆ ಸಂಬಂಧಪಟ್ಟಿದೆ. ಇದನ್ನು 50 ಸೈಕಲ್ಲಿಗೆ convert ಮಾಡಿ ಒಳಗೆ ನಾವು ಯಾವತ್ತಿಗೂ cut ಮಾಡಬೇಕಾಗಿರುವುದಿಲ್ಲವೆಂದು ಹೇಳಬಹುದು. ವಿದ್ಯುಚ್ಛಕ್ತಿ ಯನ್ನು ಒಂದು ದೊಡ್ಡ ಕೈಗಾರಿಕೆಯೆಂದು ಬೇಕಾದರೂ ನಾವು ಭಾವಿಸಬಹುದು. ಅದೇ ನೀತಿಯನ್ನು ಸರ್ಕಾರದವರು ಈ ಬಗ್ಗೆ ಅನುಸರಿಸುತ್ತಿದ್ದಾರೆ. ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಬೇಕೆಂದೇ ಹೊನ್ನಮರಡು, ಷಿಂಷಾ, ಮೇಕೆ ದಾಟು—ಇವುಗಳ ಕಾರ್ಯವನ್ನು ಕೈಕೊಳ್ಳಬೇಕೆಂದು ಸರ್ಕಾರದವರ ಉದ್ದೇಶವಾಗಿದೆ.

ಆದ್ದರಿಂದ ಈ ಒಂದು ಸಂದೇಹವನ್ನು ಇನ್ನು ಯಾರೂ ಇಟ್ಟುಕೊಳ್ಳಬೇಕಾದ ಕಾರಣವಿಲ್ಲ. ಪ್ರತಿಯೊಬ್ಬ ಮೈಸೂರಿನವನ ಪವಿತ್ರ ಧ್ಯೇಯವೂ ಇದೇ ಆಗಿದೆ. ಸರ್ಕಾರದವರಿಗೆ ಅಂಥ ಧ್ಯೇಯ ಇಲ್ಲವೆಂದು ಹೇಳುವುದಕ್ಕೇನೂ ಕಾರಣವಿಲ್ಲ. ಈ ದೃಷ್ಟಿಯಲ್ಲಿ ಈ ನಿರ್ಣಯವು ಅನಾವಶ್ಯಕವಾಗಿತ್ತೆಂದು ನಾನು ಭಾವಿಸುತ್ತೇನೆ. ಇದಕ್ಕಿಂತ ಹೆಚ್ಚಿಗೆ ಭರವಸೆಯನ್ನೇನೂ ನಾನು ಹೇಳಬೇಕಾಗಿಲ್ಲವೆಂದು ಕಾಣುತ್ತದೆ. 'For the State first and then only for others' ಎಂಬ ಮೂಲ ತತ್ವವನ್ನು ನಾವೆಲ್ಲರೂ ಪಾಲಿಸುತ್ತೇವೆಂದು ಒಮ್ಮತದಿಂದ ಒಪ್ಪೋಣ, ಎಂದು ಹೇಳಿ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಳನಿಯಪ್ಪನ್‌ರವರು.—ಒಂದು ವಿಷಯ ತಿಳಿದುಕೊಳ್ಳಬೇಕು. ಈಗ ಸರ್ಕಾರದವರು ಯಾವಾವ ಪ್ರಾಂತಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತಿದ್ದಾರೆಂಬುದನ್ನು ಹೇಳುತ್ತಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಮಗೆ surplus ಆಗಿದ್ದರೆ ಇತರರಿಗೆ ಮಾರುತ್ತೇವೆಯೇ ಹೊರತು, ನಮಗೆ ಇಲ್ಲದ ಹಾಗೆ ಮಾಡಿಕೊಂಡು ಹೊರಗಡೆ ಮಾರುತ್ತಿಲ್ಲ.

Sri M. PALANIYAPPAN.—I want to know whether the Government are now supplying electricity to places outside Mysore State.

Sri T. SIDDALINGAIYA.—That is not relevant. If the Speaker orders, I shall answer.

ಅಧ್ಯಕ್ಷರು.—ಹಾಗೆ ಎಲ್ಲಾದರೂ ಕೊಟ್ಟಿದ್ದಾರೆಯೇ ಎಂದು ಕೇಳುತ್ತಿದ್ದಾರೆ. ಇದ್ದರೆ ಹೇಳಬಹುದು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಹಿಂದೂಪುರಕ್ಕೆ, ಕೊಳ್ಳೆಗಾಲಕ್ಕೆ ಕೊಟ್ಟಿದೆ. ಸೌತ್ ಕೆನರಾಕ್ಕೆ ಸರಬರಾಜು ಮಾಡುವ ಬಗ್ಗೆ ಅಗ್ರಿಮೆಂಟು ಇನ್ನೂ ಪೂರ್ತಿಯಾಗಿಲ್ಲ. ಬೊಂಬಾಯಿಗೂ ಅಷ್ಟೆ. ಇನ್ನು ಸ್ವಲ್ಪ ಕಾಲದಲ್ಲೇ ಅಗ್ರಿಮೆಂಟು finalise ಆಗಬಹುದು. ಕೊಡಗಿಗೆ ಕೊಡಬೇಕೆಂಬ ವಿಷಯವೂ ಪರ್ಯಾಲೋಚನೆಯಲ್ಲಿದೆ; ಇನ್ನೂ ಅಗ್ರಿಮೆಂಟು finalise ಆಗಿಲ್ಲ.

ಶ್ರೀ ಎ. ವಿ. ನರಸಿಂಹ ರೆಡ್ಡಿಯವರು.—ಮಾನ್ಯ ಮಂತ್ರಿಗಳು ಇತ್ತ ಭರವಸೆಯ ಮೇರೆ ಈ ನಿರ್ಣಯವನ್ನು ವಾಪಸು ಪಡೆಯಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

No. 14 Establishment of a Porcelain Factory in Hoskote.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು (ಹೊಸಕೋಟೆ–ಆನೇಕಲ್).—ಮಾನ್ಯ ಅಧ್ಯಕ್ಷರೇ, ಈಗ ನಾನು ಸೂಚಿಸತಕ್ಕ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.—ನನ್ನ ನಿರ್ಣಯ ಈ ರೀತಿ ಇದೆ:

> "ಹೊಸಕೋಟೆಯಲ್ಲಿ ಪಿಂಗಾಣಿ ಕಾರ್ಖಾನೆಗೆ ಬೇಕಾದ ಕಚ್ಚಾ ಪದಾರ್ಥಗಳೂ ಮತ್ತು ಕೆಲಸಗಾರರೂ ಹೇರಳವಾಗಿ ದೊರೆಯುವುದರಿಂದ ಅಲ್ಲಿ ಒಂದು ಪಿಂಗಾಣಿ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ಈ ನಿರ್ಣಯವನ್ನು ನಾನು ಮಂಡಿಸಲು ಕಾರಣ ಇಷ್ಟೆ. ಗ್ರಾಮಾಂತರ ನಿವಾಸಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಉದ್ದೇಶದಿಂದ, ಅವರಿಗೊಂದು ಜೀವನೋಪಾಯಕ್ಕೆ ಮಾರ್ಗವನ್ನು ಕಲ್ಪಿಸುವ ಉದ್ದೇಶದಿಂದ, ತಮ್ಮ ತಮ್ಮ ತಾಲ್ಲೂಕುಗಳಲ್ಲೇ ಏನಾದರೊಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ, ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಈ ಸಂದರ್ಭದಲ್ಲಿ ಹೊಸಕೋಟೆಯಲ್ಲಿ ಪಿಂಗಾಣಿ ಕಾರ್ಖಾನೆ ಏಕೆ ಬೇಕೆಂದು ಕೇಳುತ್ತಿದ್ದೇನೆಂದರೆ,

(ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು)

ಹೊಸಕೋಟೆ ಊರಿಗೆ ಹತ್ತಿರದಲ್ಲೇ ನಂದಗುಡಿ ಗ್ರಾಮದ ಬಳಿ ರಾಗಲರಾಶಿ ಗುಡ್ಡ ಎಂಬ ಒಂದು ದೊಡ್ಡ ಗುಡ್ಡವಿದೆ. ಆ ಗುಡ್ಡದಲ್ಲಿ ಪಿಂಗಾಣಿ ಸಾಮಾನಿಗೆ ಬೇಕಾದ ಚೈನಾ ಕ್ಲೇ (ಸುದ್ದೆಮಣ್ಣು) ಹೇರಳವಾಗಿ ದೊರೆಯುತ್ತದೆ. ಮತ್ತು ಹೊಸಕೋಟೆಯಲ್ಲಿ ದೊಡ್ಡ ಸಾಗಾದಂತರತಕ್ಕ ಒಂದು ಕೆರೆಯಿದ್ದು ಯಥೇಚ್ಛವಾಗಿ ನೀರಿದೆ. ಜೊತೆಗೆ ವಿದ್ಯುಚ್ಛಕ್ತಿಯ ಸೌಲಭ್ಯ ವಿದೆ. ಬೆಂಗಳೂರಿಗೆ ಹೊಸಕೋಟೆ ಬಹಳ ಹತ್ತಿರ ಎಂದರೆ 16 ಮೈಲಿ ಕೂಡ ಇಲ್ಲದಿರುವುದರಿಂದ ಪಟ್ಟಣಕ್ಕೆ ಬಹಳ ಹತ್ತಿರವಾಗಿದೆ. ಪಾಷನ ಸೌಕರ್ಯ, ಸಂಚಾರ ಸೌಕರ್ಯ ಎರಡೂ ಚೆನ್ನಾಗಿದೆ. ಒಳ್ಳೆ ಟಾರ್ ರಸ್ತೆ ಇರುವುದರಿಂದ 16 ಮೈಲಿಯನ್ನು ಕೇವಲ ಅರ್ಧ ಮುಕ್ಕಾಲು ಗಂಟೆಯಲ್ಲೇ ಬೆಂಗಳೂರಿಂದ ಹೋಗಿ ಬರಬಹುದು. ಸಾಮಾನುಗಳನ್ನು ಸಾಗಿಸುವುದಕ್ಕೆ ಎಲ್ಲಾ ಅನುಕೂಲತೆಗಳೂ ಸಿಕ್ಕುತ್ತವೆ. ಮತ್ತು ಜನಗಳೂ ಕೂಡ ಸಾಕಾದಷ್ಟು ಜಪಾನಿಲ್ಲದವರಾಗಿ ಈ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಬಂದು ಇಲ್ಲಿಯೂ ಕೆಲಸ ವಿಲ್ಲದೆ ಅನೇಕರು ನಿರುದ್ಯೋಗದಿಂದ ಕೊಂದರೆ ಪಡುತ್ತಿದ್ದಾರೆ. ಅಂಥವರಿಗೆ ಒಂದು ಉದ್ಯೋಗಕ್ಕೆ ಅವಕಾಶ ಮಾಡಿಕೊಡಲು ನಾನು ಈ ನಿರ್ಣಯವನ್ನು ತಂದಿದ್ದೇನೆ.

ಈ ಸಂಬಂಧದಲ್ಲಿ ಬೆಂಗಳೂರಿನಲ್ಲಿರತಕ್ಕ ಪಿಂಗಾಣಿ ಕಾರ್ಖಾನೆಗೆ ಹೆಚ್ಚಾಗಿ ಹಣವನ್ನೊದಗಿಸಬೇಕೆಂದು ಸರ್ಕಾರದವರು ಅಭಿಪ್ರಾಯ ಪಟ್ಟಿರುವುದನ್ನು ಸ್ವಲ್ಪ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಬೆಂಗಳೂರಿನ ಈ ಕಾರ್ಖಾನೆಗೆ ಮಷಿನರಿಗಳನ್ನು ಹೊರಗಡೆಯಿಂದ ತರಿಸಿ ಅದನ್ನು ಬಡಾವಣೆಗೊಳಿಸುವುದಕ್ಕೆ ಬದಲು ಅದನ್ನೇ ನಮ್ಮ ಹೊಸಕೋಟೆಗೆ ತರಿಸಿಡುವುದಾದರೆ, ಅಲ್ಲಿನ ಜನರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಬೆಂಗಳೂರಿನ ಕಾರ್ಖಾನೆಯನ್ನೇ ಅಭಿವೃದ್ಧಿ ಪಡಿಸುವುದಾದರೆ ಗ್ರಾಮಾಂತರ ನಿವಾಸಿಗಳು ಇನ್ನೂ ಹೆಚ್ಚಿಗೆ ಬೆಂಗಳೂರಿಗೇ ಬಂದು, ಇಲ್ಲಿನ ಜನಸಾಂದ್ರತೆ ಇನ್ನೂ ಹೆಚ್ಚುವುದಕ್ಕೆ ಕಾರಣವಾಗಿ, ಮನೆಗಳ ಅಭಾವವೂ, ಸ್ಲಂ ಪ್ರದೇಶಗಳು ಇನ್ನೂ ಹೆಚ್ಚುವುದೂ ಆಗುತ್ತದೆ. ಈ ಕಾರಣಗಳಿಂದ ಹೊಸಕೋಟೆಯಲ್ಲಿ ಒಂದು ಪಿಂಗಾಣಿ ಕಾರ್ಖಾನೆಯನ್ನು ಸ್ಥಾಪಿಸುವುದು ಸೂಕ್ತವೆಂದು ಸರ್ಕಾರದವರೂ ಮತ್ತು ಈ ಸಭೆಯವರೂ ಅಭಿಪ್ರಾಯ ಪಡುತ್ತಾರೆಂದು ನಂಬಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Resolution moved :

"That this Assembly is of the opinion that a Porcelain Factory be started at Hoskote where the required raw materials and men are available in abundance".

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು (ದಾವಣಗೆರೆ)— ಮಾನ್ಯ ಅಧ್ಯಕ್ಷರೇ, ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು ತಂದಂಥ ಈ ನಿರ್ಣಯಕ್ಕೆ ಅನುಮೋದನೆ ಕೊಡುತ್ತಾ ನಾಲ್ಕು ಮಾತುಗಳನ್ನು ಆರಿಕೆಮಾಡಿಕೊಳ್ಳಲು ಇಷ್ಟಪಡುತ್ತೇನೆ. ಈ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುವುದರಲ್ಲಿ ನಮ್ಮ ಯಾವ ಒಂದು ಉದ್ದೇಶ ಅಡಕವಾಗಿದೆಯೆಂಬುದನ್ನು ನಾನು ತಮ್ಮ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ನಾವು ಈಗ ದೇಶವನ್ನು ಕಟ್ಟುವವರಾಗಿರುವುದರಿಂದ ಪ್ರತಿಯೊಂದೂ ಸ್ವದೇಶಿಯಾಗಬೇಕು, ನಮ್ಮ ಕೈಗಾರಿಕೆಗಳು ಬೆಳೆಯಬೇಕು, ಎಲ್ಲಾ ಸಾಮಾನುಗಳನ್ನು ಮಾಡುವುದರಿಂದ ಬರುವ ಹಣವೂ ಕೂಡ ನಮ್ಮ ಕಲಸಗಾರರಿಗೆ ಹಂಚಿ ಹೋಗಬೇಕು, ಕೇಂದ್ರೀಕೃತವಾಗಿದೆ ಎಕೇಂದ್ರೀಕರಣವಾಗಬೇಕೆಂಬ ತತ್ವ ನಮ್ಮ ಮುಂದಿದೆ. ಈಗ ಈ ನಿರ್ಣಯದಲ್ಲಿ ಹೇಳಿರುವಂತೆ, ಪಿಂಗಾಣಿ ಸಾಮಾನು ಮಾಡುವುದರಲ್ಲಿ ಆ ಕಾರ್ಖಾನೆಯಲ್ಲಿ ಎಲ್ಲರೂ ನಮ್ಮ ದೇಶದವರೇ ಇರುತ್ತಾರೆ. ಇದರಿಂದ ಬರುವ ಹಣವೂ ನಮ್ಮ ದೇಶದ ಜನರಿಗೆ ಹಂಚಿಹೋಗುತ್ತದೆ ಮತ್ತು ನಿರುದ್ಯೋಗವೂ ಕಡಮೆಯಾಗುವುದಕ್ಕೆ ಅವಕಾಶವಾಗುತ್ತದೆ. ಈಗ ತಾವುಗಳು ನೋಡಿರಬಹಾಗೆ ಗಾಜಿನ ಸಾಮಾನುಗಳನ್ನು ಬಹಳಮಟ್ಟಿಗೆ ಹೊರಗಿನಿಂದ ತರಿಸುತ್ತಿದ್ದೇವೆ. ಇದರಿಂದ ಎಷ್ಟು ದುಡ್ಡು ನಮ್ಮಿಂದ ಹೊರಕ್ಕೆ ಹೋಗುತ್ತಿದೆಯೆಂಬುದನ್ನು ಯೋಚಿಸಿ. ನಾವು ಸ್ವದೇಶಿ ವಸ್ತುಗಳನ್ನು ಕೊಳ್ಳಬೇಕೆಂದು ರಾಮಯ್ಯನವರು ಹೇಳುತ್ತಿದ್ದಾರೆ; ಬರೀ ಬಾಯಲ್ಲಿ ಹೇಳಿದಾಗುತ್ತಿದೆಯೇ ಹೊರತು ಇಂದು ಯಾರೂ ಒಬ್ಬರ ಮನೆಗೆ ಹೋಗಲಿ, ಬರೀ ಗಾಜಿನ ಸಾಮಾನುಗಳು ಸ್ಟೇರೆಸ್ ಸ್ಟೀಲ್ ಪಾತ್ರೆಗಳೇ ಹೊರತು ಬೇರೆ ಏನೂ ಕಣ್ಣಿಗೆ ಬೀಳುವುದಿಲ್ಲ. ಇವೆಲ್ಲಾ ಹೋಗಿ ಸ್ವದೇಶಿ ಸಾಮಾನುಗಳು ಹೆಚ್ಚಾಗಬೇಕಾದರೆ ನಮ್ಮ ದೇಶದ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು ನ್ಯಾಯ ವಷ್ಟು ಸೂಕ್ತ. ಆದ್ದರಿಂದ ಅಲ್ಲಿನ ಜನಕ್ಕೆ ಸುಖವನ್ನು ಒದಗಿಸಿಕೊಟ್ಟು, ಸಹಾಯಮಾಡಬೇಕೆಂದು ತಂದಿರತಕ್ಕ ಈ ನಿರ್ಣಯಕ್ಕೆ ನಾನು ಅನುಮೋದನೆ ಕೊಡುತ್ತೇನೆ.

ಶ್ರೀ ಎ. ಆರ್. ನಾಯ್ಡುರವರು (ಮಲ್ಲೇಶ್ವರಂ)— ಅಧ್ಯಕ್ಷರೇ, ಈಗತಾನೆ ನಮ್ಮ ಮುಂದೆ ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು ಮಂಡಿಸಿರುವ ನಿರ್ಣಯವನ್ನು ಸ್ವಾಗತಿಸುತ್ತಾ ಎರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಾ ಅದರಲ್ಲೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳಿಗೆ ಬಹಳ ಹೆಚ್ಚಿನ ಪ್ರೋತ್ಸಾಹ ಸಿಕ್ಕುತ್ತಿದೆಯೆಂದರೆ ತಪ್ಪಾಗದಿರದು. ಅದೇ ರೀತಿಯಾಗಿ, ಪಿಂಗಾಣಿ ಸಾಮಾನೆಂಬುದು ನಮ್ಮ ನಾಡಿನಲ್ಲಿ ಬಡವರು ಗರೀಬರು ಉಪಯೋಗಿಸುವ ಪಾತ್ರೆಯಾಗಿದೆಯೆಂದರೆ ತಪ್ಪಿಲ್ಲವೆಂದು ಭಾವಿಸಬಹುದು. ಈಗ ನಾವು ಎಷ್ಟೋ ಪಿಂಗಾಣಿ ಸಾಮಾನುಗಳನ್ನು ಚೈನಾ, ಜಪಾನಿನಿಂದ ತರಿಸುತ್ತಿದ್ದೇವೆ. ಇದರಿಂದ ಕೊಟ್ಯಾಂತರ ರೂಪಾಯಿಗಳು ನಮ್ಮ ದೇಶದಿಂದ ಹೊರಗೆ ಹೋಗುತ್ತಿದೆ. ಇದನ್ನು ತಪ್ಪಿಸಿ, ಈಗಾಗಲೇ ಬೆಂಗಳೂರು ನಗರದಲ್ಲಿ ಇದಕ್ಕಾಗಿಯೇ ಒಂದು ಫ್ಯಾಕ್ಟರಿಯನ್ನು ಸ್ಥಾಪಿಸಿರುವುದು ತಮ್ಮೆಲ್ಲರಿಗೂ ಗೊತ್ತಿದೆ. ಅದಕ್ಕೂ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದಾರೆಂದು ಗೊತ್ತಿದೆ. ಅಲ್ಲಿ ಈಗಲೂ ಬೇಕಾದಷ್ಟು ಸಾಮಾನುಗಳನ್ನು ತಯಾರಿಸುತ್ತಿದಾರೆ. ಅದರೆ ಹೊಸಕೋಟೆಯಲ್ಲಿ ಇಂಥ ಒಂದು ಕೈಗಾರಿಕೆ ನಡೆಸಲು ಅನುಕೂಲಗಳು ಹೆಚ್ಚಾಗಿವೆಯೆಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಪಿಂಗಾಣಿ ಸಾಮಾನುಗಳನ್ನು ತಯಾರುಮಾಡಬೇಕಾದರೆ ಯಾವಾವ ಕಚ್ಚಾ ಸಾಮಾನುಗಳು ಬೇಕೋ ಅವೆಲ್ಲಾ ಹೊಸಕೋಟೆಯಲ್ಲೇ ಸಿಕ್ಕುತ್ತವೆ : ಮುಖ್ಯವಾಗಿ ನೀರು ಹತ್ತಿರದಲ್ಲೇ ಇದೆ. ಆದ್ದರಿಂದ, ಪಿಂಗಾಣಿ ಸಾಮಾನುಗಳು ನಮ್ಮ ದೇಶದಲ್ಲಿ ಅಗತ್ಯವಾದ ಸಾಮಾನಾಗಿರುವುದರಿಂದ ಮತ್ತು ಈ ಕಾಲದಲ್ಲಿ ಬಡಕಾರ್ಮಿಕರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಇದೂ ಒಂದು ಮಾರ್ಗವಾಗಿರುವುದರಿಂದ ಈ ನಿರ್ಣಯವನ್ನು ಸಭೆಯವರು ಜಾಗ್ರತೆ ಒಪ್ಪಿ

ಕೊಂಡು, ಸಂಬಂಧಪಟ್ಟ ಸಚಿವರಿಗೆ ಅರಿಕೆಮಾಡಿಕೊಂಡು ಈ ನಿರ್ಣಯದಂತೆ ಕಾರ್ಯಕ್ರಮ ಕೈಕೊಳ್ಳುವಂತೆ ಮಾಡ ಬೇಕೆಂದು ಹೇಳುತ್ತಾ, ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು (ಕುಣಿಗಲು).— ಸ್ವಾಮಿ, ಈ ನಿರ್ಣಯದಲ್ಲಿರುವುದು ಒಂದು ಪಿಂಗಾಣಿ ಕಾರ್ಖಾನೆಯನ್ನು ತೆರೆಯಬೇಕೆಂದು. ಈ ವಿಚಾರ ವನ್ನು ಪಾಸುಮಾಡುತ್ತಾ, ಶ್ರೀಮತಿ ಬಳ್ಳಾರಿ ಸಿದ್ದಮ್ಮ ನವರು ನಮ್ಮ ದೇಶದಲ್ಲಿ ಗೃಹಕೈಗಾರಿಕೆ ಮುಂದೆಬರ ಬೇಕೆಂದು ಹೇಳಿದರು. ಹಿಂದೆ ನಮ್ಮ ಕೈಗಾರಿಕೆ ಇಂತಾ ಬೆಯವರು ಅನೇಕ ಪತ್ತೆದಾರಿ ಕೆಲಸ ಮಾಡುತ್ತಿದ್ದರು. ಎಂದರೆ, ಎಲ್ಲೆಲ್ಲ ಕೈಗಾರಿಕೆಗಳನ್ನು ಸ್ಥಾಪನೆಮಾಡುವು ದಕ್ಕೆ ಅವಕಾಶವಿದೆ, ಎಲ್ಲೆಲ್ಲ ಆಯಾ ಕೈಗಾರಿಕೆಗೆ ಬೇಕಾಗುವ ಕಚ್ಚಾ ಪದಾರ್ಥಗಳು ಸಿಕ್ಕುತ್ತವೆ ಎಂಬು ದನ್ನೆಲ್ಲಾ ಪತ್ತೆಮಾಡಿ ಪರಿಶೀಲನೆಮಾಡಿರುತ್ತಾರೆ. ಆದಕಾರಣ ಈ ಪಿಂಗಾಣಿ ಕೈಗಾರಿಕೆಯನ್ನು ಒಂದು ಗೃಹಕೈಗಾರಿಕೆಯ ರೂಪದಲ್ಲಿ ಅಳವಡಿಸುವುದಕ್ಕೆ ಸಾಧ್ಯ ವಿದ್ದರೆ ಇದನ್ನು ಸರ್ಕಾರದವರು ಯೋಚನೆಮಾಡಿ, ಬೇರೆ ದೇಶಗಳ ಪ್ರವೀಣರನ್ನು ಕರೆಯಿಸಿ ಗೃಹಕೈಗಾರಿಕೆಗಳು ಬೆಳೆಯುವುದಕ್ಕೂ ಕಚ್ಚಾ ಪದಾರ್ಥಗಳು ಸಿಕ್ಕುವುದನ್ನು ಉಪಯೋಗಿಸುವುದಕ್ಕೂ ಪ್ರಯತ್ನಪಡಬೇಕು. ಇದು ಕೂಡಲೇ ಆಗಬೇಕು. ಒಂದೊಂದುಕಡೆ ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡಿದರೆ ಅಲ್ಲಿ ಕೂಲಿಗಾರರು ಹೆಚ್ಚಾಗುವ ಪರಿಸ್ಥಿತಿ ಉಂಟಾಗಿ ಅದರಿಂದ ಗುಣ್ಯವಿನಾಶಕ್ಕೆ ಸಮಾನ್ಯೆಗ ಳಿಗೆಲ್ಲಾ ಸೂಕ್ತ ವ್ಯವಸ್ಥೆ ಮಾಡಬೇಕಾಗುತ್ತದೆ. ಆದು ದರಿಂದ, ಸಾಧ್ಯವಾದಮಟ್ಟಿಗೂ ಗೃಹಕೈಗಾರಿಕಗ ಳನ್ನು ಪ್ರೋತ್ಸಾಹಿಸಿಕೊಳ್ಳುವ ಮಾರ್ಗವನ್ನು ಕೈಕೊಳ್ಳ ಬೇಕು. ಇದನ್ನು ಯಾವ ರೀತಿ ಕಾರ್ಯರೂಪಕ್ಕೆ ತರ ಬೇಕೆಂಬ ಬಗ್ಗೆ ಪರಿಶೀಲಿಸಬೇಕೆಂಬ ಸೂಚನೆಯನ್ನು ನಧೆಯ ಮುಂದಿಟ್ಟಿದ್ದೇನೆ. ಇದನ್ನು ಮಂತ್ರಿಗಳು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಧ್ಯಕ್ಷರೆ, ಈ ಪಿಂಗಾಣಿ ಕೈಗಾರಿಕೆಯ ವಿಚಾರ ಹೇಳಬೇಕಾದರೆ, ಈಗಾಗಲೇ ಇಲ್ಲಿ ಸರ್ಕಾರಕ್ಕೆ ಸೇರಿದ ಪಿಂಗಾಣಿ ಕಾರ್ಖಾನೆ ಇದ್ದೇ ಇದೆ. ಈಗ ಈ ಪಿಂಗಾಣಿ ಕಾರ್ಖಾನೆಯನ್ನು ವಿಸ್ತೀರ್ಣ ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದು ಈಗ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಈ ಸಂಬಂಧವಾಗಿ ಜಪಾನ್ ದೇಶದ ಒಂದು ಕಂಪೆನಿಯೊಡನೆ ವ್ಯವಹಾರ ನಡೆ ಸುತ್ತಿದ್ದಾರೆ. ಹೀಗೆ ವಿಸ್ತರಿಸಲು ಸುಮಾರು ಒಂದು ಕೋಟಿ ರೂಪಾಯಿಯವರೆಗೂ ಬೇಕಾಗುತ್ತದೆ. ಈ ವರ್ಷ ಪ್ರಾರಂಭಮಾಡಿದರೆ ಮೂರುವರ್ಷಗಳಲ್ಲಿ ಪೂರ್ತಿ ಯಾಗತ್ತದೆ. ಇದರಲ್ಲ ಒಂದು ದೊಡ್ಡ ಅನುಕೂಲ ವಿದೆ. ಎಲ್ಲೆಲ್ಲಿಯೂ ವಿದ್ಯುಚ್ಛಕ್ತಿ ಬೇಕೆಂದು ಕೇಳುತ್ತಿ ದ್ದಾರೆ; ಇದಕ್ಕೆ ಮುಖ್ಯವಾಗಿ ಬೇಕಾದ 'ಹೈಟೆಕ್ಷನ್ ಇನ್ಸ್ಯುಲೇಟರ್' ಗಳು ಇಂಡಿಯಾದೇಶದಲ್ಲಿ ತಯಾರಾ ಗುತ್ತಿಲ್ಲ, ಪರದೇಶಗಳಿಂದ ಬರುತ್ತಿವೆ. ನಾವು ಈಗ ಯೋಚನೆಮಾಡಿರುವಂತೆ ಈ ಕಾರ್ಖಾನೆಯನ್ನು ವಿಸ್ತರಿ ಸಿದರೆ ಇವನ್ನು ಇಲ್ಲೇ ತಯಾರುಮಾಡಬಹುದು. ಇದು ಬಹಳ ಲಾಭಕರವಾದದ್ದರಿಂದ ಹಣಕಾಸಿನ ಕಷ್ಟ ಎಷ್ಟೇ ಇದ್ದರೂ ಕೂಡ ಇದನ್ನು ಕೈಕೊಳ್ಳಬೇಕೆಂದು ನಿರ್ಧರಮಾಡಿದ್ದೇವೆ. ಆದುದರಿಂದ ಹೆಚ್ಚಿನ ಹಣವನ್ನು ಖರ್ಚುಮಾಡಿ ಬೇರೊಂದು ಪಿಂಗಾಣಿ ಕಾರ್ಖಾನೆ ಯನ್ನು ತೆರೆಯುವುದು ಲಾಭದಾಯಕವೆ ಮತ್ತು ಸಾ ಧುವೆ ಎಂಬುದನ್ನು ಯೋಚಿಸಬೇಕೆಂದು ಅರಿಕೆಮಾಡಿಕೊ ಳ್ಳುತ್ತೇನೆ. ಆದರೆ ನಮ್ಮ ಸ್ನೇಹಿತರಾದ ಶ್ರೀಮಾ ಮೂಡ್ಲಗಿರಿಗೌಡರು ಸೂಚಿಸಿರುವ ಹಾಗೆ ಇದೆನ್ನು ಗೃಹ ಕೈಗಾರಿಕೆಯಾಗಿ ಮಾಡಲು ಸಾಧ್ಯವಾದರೆ ಅದನ್ನು ಯೋಚನೆಮಾಡುತ್ತೇವೆ. ಇಷ್ಟು ವಿವರಣೆ ಕೊಟ್ಟ ಮೇರೆ ಸೂಚಕರು ತಮ್ಮ ನಿರ್ಣಯವನ್ನು ವಾಪಸು ತೆಗೆ ದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು.— ಮಾನ್ಯ ಸಚಿವರು ಈ ನಿರ್ಣಯದ ಬಗ್ಗೆ ಇರುವ ಸಾಧಕ ಬಾಧ ಕಗಳನ್ನು ವಿವರಿಸಿರುವುದರಿಂದ, ಇದನ್ನು ವಾಪಸು ತೆಗೆ ದುಕೊಳ್ಳಲು ಅವಕಾಶ ಕೊಡಬೇಕೆಂದು ಬೇಡುತ್ತೇನೆ.

The resolution was, by leave, withdrawn.

No. 15. Legislation to prohibit the reduction of working personnel in Industrial establishments.

ಶ್ರೀ ಡಿ. ವೆಂಕಟೇಶ್ ಅವರು (ಗಾಂಧಿನಗರ).—

Sir, I move,

"That this Assembly is of the opinion that the Government should prohibit by suitable legislation the reduction of woking personnel in the various industrial establishments in the State".

ಸ್ವಾಮಿ, ಈ ನಿರ್ಣಯವನ್ನು ನೋಡಿದ ಕೂಡಲೇ ಕೈಗಾರಿಕೆ ಸಂಸ್ಥೆಗಳ ಮಾಲೀಕರಿಗೂ ಮತ್ತು ಸರ್ಕಾ ರ್ಕ್ಕೂ ಸ್ವಲ್ಪ ಭೀತಿಯುಂಟಾಗಿರಬಹುದು. ಸಂಸ್ಥಾನ ದಲ್ಲಿ one of the biggest employers ಎಂದರೆ ಸರ್ಕಾರ. ಕೆಲಸ ಕೊಟ್ಟರೆ ಆಮೇಲೆ ಕೆಲಸಗಾರ ರನ್ನು ಕೆಲಸದಿಂದ ವಜಾಮಾಡಬಾರದೆಂದು ಹೇಳಿ ಸೆಕ್ಯೂರಿಟಿ ಆಫ್ ಸರ್ವಿಸ್ ಕೇಳುತ್ತಾರೆ. ಅವರು ಸಾಯುವವರೆಗೂ ಕೆಲಸದಿಂದ ವಜಾಮಾಡುವ ಹಾಗಿಲ್ಲ. ಇದನ್ನು ಹೇಗೆ ಒಪ್ಪುವುದು ಎಂದು ಹೆದರಿಕೆಯಾಗ ಬಹುದು ಈ ನಿರ್ಣಯವನ್ನು ನೋಡಿದರೆ. ಆದರೆ ನಿಜ ವಾಗಿ ಇದಕ್ಕೆ ಕಾರಣವಿಲ್ಲ. ಒಂದು ಕೈಗಾರಿಕೆ ಸಂಸ್ಥೆ ಯಲ್ಲಿ ಸಂಪಾದನೆಯಿರಲಿ ಇಲ್ಲದಿರಲಿ, ಕೆಲಸವಿರಲಿ ಇಲ್ಲ ದಿರಲಿ, ಕೆಲಸಗಾರರು ಕೆಲಸವಿಲ್ಲದೆ ಸೋಮಾರಿಗಳಾಗಿ ಕುಳಿತಿದ್ದರೂ ಅವರಿಗೆ ಸಂಬಳಗಳನ್ನು ಕೊಡಬೇಕೆಂದು ಇದರ ಅಭಿಪ್ರಾಯವಲ್ಲ. ಇದನ್ನು ಸ್ಪಷ್ಟಪಡಿಸಬೇ ಕೆಂಬುದೇ ನನ್ನ ಉದ್ದೇಶ. ಈಗ ಸರ್ಕಾರದವರು ಮಾಡಿರುವ ಲೇಬರ್ ಕಾನೂನನ್ನು ಯಾವ ರೀತಿ ಮಾಡಿದ್ದಾರೆಂಬುದನ್ನು ಸ್ವಲ್ಪ ನಮ್ಮ ಆಲೋಚನೆಗೆ ತೆಗೆದುಕೊಳ್ಳೋಣ. ಪ್ರಥಮತಃ ಕಾರ್ಮಿಕರಲ್ಲ ಒಂದು ಸರಿಯಾದ ಸಂಘಟನೆ ಇಲ್ಲದಿದ್ದಾಗ ಮಾಲೀಕರು ಅವರ ಮೇಲೆ ಅಧಿಕಾರ ಚಲಾಯಿಸಿಕೊಂಡು ಅವರನ್ನು domestic servants ಅಥವಾ master and servantsನ ಹಾಗೆ ನೋಡುತ್ತಿದ್ದರು. ಈಗಿನಂತೆ ಮಾಲೀಕರಿಗೂ ಕಾರ್ಮಿಕರಿಗೂ ವಿವಾದವುಂಟಾದರೆ ಕೈಗಾರಿಕೆ ಟ್ರಿಬ್ಯೂನಲ್ ಮೂಲಕ ಬಗೆಹರಿಸುವ ನೀತಿ ಯನ್ನನುಸರಿಸುತ್ತಿರಲಿಲ್ಲ. ಆದರೆ domestic tribunals ಎಂಬುವಾಗಿ ಮಾಲೀಕರು ಇತ್ತಾದೇ ತೀರ್ಪು. ಹಿಂದೆ ಆಗಾಗ ಯಾವುದಾದರೂ ತಕರಾರುಗಳು ಬಂದು ಗೈರ್ ಕಾನೂನು ಮುಷ್ಕರಗಳಾಗುತ್ತಿದ್ದವು. ಅನೇಕ ಸಂದರ್ಭಗಳಲ್ಲಿ ಇದರಿಂದ ಜನತೆಗೂ ಉತ್ಪತ್ತಿ ಗೂ ಆತಂಕವಾಗುತ್ತಿತ್ತು. ಇದನ್ನು ತಡೆಗಟ್ಟಬೇಕೆಂದು

(ಶ್ರೀ ಡಿ. ವೆಂಕಟೇಶ್‌ರವರು)

1942ನೆಯ ಇಸವಿಯಲ್ಲಿ ಮೈಸೂರು ಲೇಬರ್ ಆಕ್ಟ್ ಜಾರಿ ಮಾಡಿದರು. ಇದರಲ್ಲಿ ಮುಖ್ಯವಾಗಿ ಮೂರು ಅಂಶಗಳಿದ್ದುವು. ಮೊದಲನೆಯದು ಮಾಲೀಕರಿಗೂ ಕೆಲಸಗಾರರಿಗೂ ಇರುವ ಸಂಬಂಧವನ್ನು ಬೆಳಸುವುದು, ಎರಡನೆಯದು ಕೆಲಸಗಾರರ ಹಿತಕ್ಕೆ ಬೇಕಾದ ಸಂಘಗಳನ್ನು ಬೆಳಸುವುದು, ಮೂರನೆಯದು, ಮಾಲೀಕರಿಗೂ ಕೆಲಸಗಾರರಿಗೂ ಏನಾದರೂ ತಕರಾರುಗಳು ಬಂದ ಕಾಲದಲ್ಲಿ ಅದನ್ನು ಪರಿಹಾರಮಾಡುವುದು, ಈ ಮೂರು ಅಂಶಗಳು. ಆದರಲ್ಲಿ ಮಾಲೀಕರಿಗೂ ಕೆಲಸಗಾರರಿಗೂ ಸಂಬಂಧಪಟ್ಟ ಹಾಗೆ ಸ್ಟ್ಯಾಂಡಿಂಗ್ ಆರ್ಡರುಗಳ ವಿಚಾರ ಆ ಲೇಬರ್ ಕಾನೂನಿನ 9ನೆಯ ಸೆಕ್ಷನ್ ಒಂದನೆಯ ವಿಧಿಯ ಪ್ರಕಾರ Iನೆಯ ಷೆಡ್ಯೂಲಿನಲ್ಲಿ ನಮೂದುಮಾಡಲಾಗಿತ್ತು. ಇದಕ್ಕೆ ಸಂಬಂಧಪಟ್ಟ ಒಪ್ಪಂದ ಸ್ಟ್ಯಾಂಡಿಂಗ್ ಆರ್ಡರ್ಸ್ ಏನಿತ್ತೋ ಅದನ್ನು ಬದಲಾವಣೆಮಾಡಬೇಕಾದರೆ, 10ನೆಯ ಸೆಕ್ಷನ್ Iನೆಯ ವಿಧಿಯ ಪ್ರಕಾರ ಮಾಲೀಕರಿಗೂ 2ನೆಯ ವಿಧಿಯ ಪ್ರಕಾರ ಕೆಲಸಗಾರರಿಗೂ ಅವಕಾಶವಿತ್ತು. ಎರಡನೆಯ ಷೆಡ್ಯೂಲಿನಲ್ಲಿ ಒಂದು ವಿಧವಾದ ಇತರ ಸಮಸ್ಯೆಯನ್ನಿಟ್ಟಿದ್ದರು.

Sri M. CHIKKALINGIAH.—Mr. Speaker, on a point of information. Is he referring to Government industrial concerns or private industrial concerns?

ಶ್ರೀ ಡಿ. ವೆಂಕಟೇಶ್ ಅವರು.—All industries in the State. 2ನೆಯ ಷೆಡ್ಯೂಲಿನಲ್ಲಿರತಕ್ಕ ಅಂಶಗಳ ಮೇರೆ ಸ್ಟ್ಯಾಂಡಿಂಗ್ ಆರ್ಡರಿನಲ್ಲಿ ಒಳಗೊಂಡ ತೀರ್ಮಾನವಿರಲಿಲ್ಲ. ಲೇಬರ್ ಆಕ್ಟಿನ 9ನೆಯ ವಿಧಿಯ ಪ್ರಕಾರ ಯಾವ ಸ್ಟ್ಯಾಂಡಿಂಗ್ ಆರ್ಡರ್ಸ್ ನಮೂದಾಗಿತ್ತೋ ಅದರ ಪ್ರಕಾರ ಮಾಲೀಕರಿಗೂ ಕೆಲಸಗಾರರಿಗೂ ಕೆಲವು service conditionsಗೆ ಅನುಗುಣವಾದ ಅಧಿಕಾರಗಳಿದ್ದವು. ಇತರ ವಿಚಾರಗಳಲ್ಲಿ ತಕರಾರು ಬಂದಾಗ 2ನೆಯ ಷೆಡ್ಯೂಲ್ ಪ್ರಕಾರ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಗುತ್ತಿತ್ತು. ಇದನ್ನು ಮಾಲೀಕರು ಚರ್ಚೆಗೆ ತಂದರೆ ಇದು ಸರ್ಕಾರದ ಗಮನಕ್ಕೆ ಬರಬೇಕಾಗಿತ್ತು. ಆಕ್ಟ್ III ನೆಯ 1951ನೆಯ 'ಬಿ' ಸಂಸ್ಥಾನಗಳಿಗೆ ಸಂಬಂಧಪಟ್ಟ ಆಕ್ಟ್ಆಯಿತು. ಇದರ ಪ್ರಕಾರ 6ನೆಯ ಸೆಕ್ಷನ್ read with Act 372 of Indian Constitution ನಲ್ಲಿರುವ ರಿಪೀಲ್ ಅಂಡ್ ಸೇವಿಂಗ್ಸ್ ನೋಡಿದರೆ, ಮೈಸೂರು ಲೇಬರ್ ಆಕ್ಟಿನಲ್ಲಿ ಏನಿದೆಯೋ ಅದೇ ಇಲ್ಲಿಯವರಿಗೂ ಅನ್ವಯಿಸುತ್ತದೆ.

2-30 P.M.

ನಮ್ಮ ದೇಶದಲ್ಲಿ ಈ ಮಾಲೀಕರುಗಳು ಅವರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಮಾಡಲು ಕಾನೂನುಮಾಡಿಕೊಂಡಿದ್ದರು. ಆದರೆ ಈಗ Act III of 1951 'B' State Acts ಈ ಷೆಡ್ಯೂಲಿನಲ್ಲಿ ಕಂಡ 36 ಕಾರ್ಮಿಕರ ಕಾನೂನುಗಳು ಕೈಗಾರಿಕಾ ಕ್ಷೇತ್ರಗಳಿಗೂ ಅನ್ವಯಿಸುತ್ತವೆ. ಈಗ ಅದು ಜಾರಿಗೆ ಬಂದಿದೆ. ಇದೇ ಸೆಂಟ್ರಲ್ ಆಕ್ಟ್ ಜಾರಿಯಲ್ಲಿದೆ. ಜೊತೆಗೆ ನಮ್ಮ ದೇಶದ ಕಾನೂನುಗಳೂ ಬೇರೆ ಇವೆ. ಹೀಗೆ ಕಾನೂನಿನಲ್ಲಿ ಅನೇಕ ದೋಷವಿದ್ದುದರಿಂದಲೇ ಮಾಲೀಕರಿಗೂ ಕಾರ್ಮಿಕರಿಗೂ ವಿಶೇಷ ತಕರಾರುಗಳು ಬಂದು ಅವುಬಗೆ ಹರಿಯಲು ಬಹಳ ಕಷ್ಟಕ್ಕೆ ಬಂದುದರಿಂದ, ಅವುಗಳನ್ನು ತೀರ್ಮಾನಮಾಡುವುದಕ್ಕಾಗಿ ಸರ್ಕಾರದ ಪರವಾಗಿ ಒಂದು ಕೋರ್ಟನ್ನು ಏರ್ಪಾಡು ಮಾಡಲಾಗಿದೆ. ಹೀಗೆ ಮೂರು ಕೋರ್ಟುಗಳು ಈಗಾಗಲೇ ಏರ್ಪಾಡಾಗಿ ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿವೆ. ಒಂದನೆಯ ಕೋರ್ಟಿನಲ್ಲಿ ಒಂದು ಕೇಸಿದೆ, ಎರಡನೆಯ ಕೋರ್ಟಿನಲ್ಲಿ ಹದಿನೇಳು ಕೇಸುಗಳು ನಡೆಯುತ್ತಿವೆ, ಮೂರನೆಯ ಕೋರ್ಟಿನಲ್ಲಿ ಒಂಭತ್ತು ಕೇಸುಗಳು ನಡೆಯುತ್ತಿವೆ. ಹೀಗೆ ಮೂರು ಕೋರ್ಟುಗಳಲ್ಲಿ ಒಟ್ಟು ಇಪ್ಪತ್ತೇಳು ಕೇಸುಗಳು ಈಗ ಹಾಲಿ ನಡೆಯುತ್ತಿವೆ. ಇಷ್ಟೆಲ್ಲಾ ತೊಂದರೆಗೆ ಈ 33ನೆಯ ಸೆಕ್ಷನ್ನೇ ಕಾರಣ. ಸರ್ಕಾರದವರು ಈ ಅಂಶವನ್ನು ತಮ್ಮ ಗಮನಕ್ಕೆ ಸ್ವಲ್ಪ ತೆಗೆದುಕೊಳ್ಳಬೇಕಾದದ್ದು ಮುಖ್ಯವಾಗಿದೆ. Section 33 of the Industrial Disputes Act States.—

> "Conditions of service, etc. to remain unchanged during pendency of proceedings.—No employer shall, during the pendency of any conciliation proceedings or proceedings before a tribunal, in respect of any industrial dispute, alter to the prejudice of the workmen concerned in such dispute, the conditions of service applicable to them immediately before the commencement of such proceedings, nor save with the express permission in writing of the Conciliation Officer, Board or Tribunal as the case my be..."

ಈ 33ನೆಯ ವಿಧಿಗನುಸಾರವಾಗಿ ಇಲ್ಲಿರುವ ವಿಚಾರವಾಗಿ ಅಂದರೆ service conditions ವಿಚಾರವಾಗಿ ತೀರ್ಮಾನ ಕೊಡತಕ್ಕ ಬಗ್ಗೆ ಕೋರ್ಟಿಗೆ ಯಾವ ಅಧಿಕಾರವೂ ಇಲ್ಲ. ಇದಕ್ಕೆ ಉದಾಹರಣೆಯಾಗಿ ತಿಳಿಸಬೇಕೆಂದರೆ ಎಷ್ಟೋ ಕೇಸುಗಳಿವೆ. ಮಹಾರಾಜ ಮತ್ತು ಮಿನರ್ವ ಮಿಲ್ಲುಗಳ ಪೈಕಿ, ಮಹಾರಾಜ ಮಿಲ್ಲು ಒಂದು ಮಾತ್ರ ನ್ಯಾಯವಾಗಿ 500 ಕೆಲಸಗಾರರನ್ನು ವಜಾ ಮಾಡುವುದಕ್ಕೆ ಪ್ರತ್ಯೇಕ reference ಮಾಡಿಕೊಂಡಿದ್ದಾರೆ. ಮಿನರ್ವಮಿಲ್ಲು ಈಗಾಗಲೇ ಸುಮಾರು 500 ಜನರನ್ನ ವಜಾಮಾಡಲಿದೆ. ಇನ್ನೂ ಅನೇಕರನ್ನು ವಜಾ ಮಾಡುವ ನಿರೀಕ್ಷಣೆ ಇದೆ. ಮಿನ್ವಮಿಲ್‌ನವರು, 7,500 ಜನರನ್ನು ಇಟ್ಟುಕೊಂಡು ಕೆಲಸ ಮಾಡುವಂಥ ಈ ಒಂದು ಸಂಸ್ಥೆ, 33ನೇ ನಿಯಮಗಳನ್ನೂ ಪಾಲಿಸದೆ ಹಲವರನ್ನು ಕೆಲಸದಿಂದ! ವಜಾ ಮಾಡಿದೆ. ಆ ಬಗ್ಗೆ ಲೇಬರ್ ಕಮಿಷನರವರು, ಆ ಮಿಲ್ಲಿನವರು ಹಾಗೆ ಮಾಡಿರತಕ್ಕದ್ದು ತಪ್ಪೆಂದೂ ಹಾಗೆ ಮಾಡಿದ್ದಕ್ಕಾಗಿ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಹೇಳಿದಾಗ್ಯೂ ಕೂಡ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಅವರ ಮೇರೆ ಕೈಕೊಂಡಿಲ್ಲ. ಹೀಗೆ ಅವರು ಕಾನೂನಿನಲ್ಲಿರತಕ್ಕ ನಡಿಲವನ್ನು ನೋಡಿಕೊಂಡು, ಈ ಕಾನೂನನ್ನೇ ದುರುಪಯೋಗಪಡಿಸಿಕೊಳ್ಳುತ್ತ, ಯಾರ ಹತೋಟಿಯೂ ಅವರ ಮೇರೆ ಇಲ್ಲದಿದ್ದಂತೆ, ಅವರು ದಿನ ಬೆಳಗಾದರೆ ಜನರನ್ನು ಅಂದರೆ ಕೂಲಿಗಾರರನ್ನು ಡಿಸ್‌ಚಾರ್ಜುಮಾಡುವುದು, ಇಲ್ಲವೇ ರಾಕೆಟಿಯರ್ ಮಾಡುವುದು, ಇಲ್ಲವೇ ಡಿಸ್‌ಮಿಸ್ ಮಾಡುವುದು, ಹೀಗೆ ಮಾಡುತ್ತಿದ್ದಾರೆ. ಹೀಗೆ ಅವರು ಇಂಥ ಅಚಾತುರ್ಯವಾದ ಕೆಲಸಗಳನ್ನು ಮಾಡುತ್ತಿದ್ದರೆ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಕೂಲಿಗಾರರಿಗೆ ನಮ್ಮ ದಿಯಿಂದ ಜೀವನ ಮಾಡಲು ಯಾವ ಒಂದು ಖಾತರಿಯೂ ಇಲ್ಲದೆ ಅವರಿಗೆ ತುಂಬಾ ತೊಂದರೆಯಾಗಿದೆ. ತಾವು ಈ ದುರ್ನೀತಿಯನ್ನು ಮೊದಲು ತಡೆ

ಗುಜ್ಜಬೇಕು. ಬಿನ್ನಿಮಿಲ್ಲಿನಲ್ಲಿ ಇಲ್ಲಿಯವರೆಗೆ ಆಗಲೇ 170ಜನರನ್ನು ವಜಾಮಾಡಿವ್ವಾರೆ, ಮತ್ತು woollen departmentನಲ್ಲಿ 600 ಜನರನ್ನು ವಜಾಮಾಡಲು ದ್ದಾರೆ. ಶ್ಯಾಮರಾವ್ ಫ್ಯಾಕ್ಟರಿಯಲ್ಲಿ 600 ಜನ ರನ್ನು ವಜಾಮಾಡಲದ್ದಾರೆ. ರೇಸ್‌ಕೋರ್ಸ್ ಕ್ಲಬ್ಬಿ ನಿಂದ 100ಜನರನ್ನು ವಜಾ ಮಾಡಿದ್ದಾರೆ. ಮೈಸೂರು ಮೆಷಿನೆರಿ ಮ್ಯಾನುಫ್ಯಾಕ್ಚರರ್ಸ್‌ನಲ್ಲಿ ಸುಮಾರು 150 ಜನರನ್ನು ವಜಾ ಮಾಡಿದ್ದಾರೆ. ಶ್ರೀ ಬಿ. ಕೆ. ಸುಬ್ಬಯ್ಯ ಅಂಡ್ ಸನ್ಸ್ ಮಿಲ್ಲಿನಿಂದ 51 ಜನ ಕೂಲಿಗಾರರನ್ನು ವಜಾಮಾಡಲದ್ದಾರೆ. ವೆಜಿಟಬರ್ ಅಂಡ್ ಆಯಿಲ್ ಕಂಪೆನಿಯವರು 23 ಜನರನ್ನು ವಜಾಮಾಡಿದ್ದಾರೆ. ಚನ್ನಪಟ್ಟಣದಲ್ಲಿ 1,200 ಜನರಿಗೆ ಕೆಲಸವಿಲ್ಲದಂತಾಗಿದೆ. ಬಣ್ಣ ಮತ್ತು ಅರಗಿನ ಕೆಲಸದ ಕಾರ್ಖಾನೆಯಿಂದ 58 ಜನರನ್ನು ಕೆಲಸದಿಂದ ತೆಗೆಯಲಾಗಿದೆ. ನೂರ್ಜೀದಯ ಮಿಲ್ಲಿನಲ್ಲಿ 200 ಜನರಿಗೆ ಡಿಸ್‌ಮಿಸ್ ಆರ್ಡರನ್ನು ಮಾಡಲಾಗಿದೆ. ಕೆ. ಜಿ. ಎಫ್.ನಲ್ಲೂ ಹೀಗೆ ಮಾಡಿದ್ದಾರೆ. ಹಾಸನದಲ್ಲಿ ಸಹ ಅನೇಕರನ್ನು ಫ್ಯಾಕ್ಟರಿಯಿಂದ ತೆಗೆದು ಹಾಕಲಾಗಿದೆ. ಹೀಗೆ ಕಾನೂನಿನಲ್ಲಿ ಎರೋಧವಾಗಿ ನಡೆದುಕೊಂಡು ಬರುವುದಕ್ಕೆ ಅವಕಾಶವಿರುವುದರಿಂದ ಸರ್ಕಾರದವರು, ಈ ಅಂಶವನ್ನು ತಮ್ಮ ಗಮನದಲ್ಲಿಟ್ಟುಕೊಂಡು, ಈ ಉದ್ದೇಶ ಸಫಲವಾಗುವಂತೆ ಮಾಡುವುದಕ್ಕಾಗಿ, ಈ 33ನೇ ಸೆಕ್ಷನ್ನಿಗೆ ಒಂದು ಪ್ರಾವಿಸೋ ಸೇರಿಸಬೇಕೆಂದೂ, ಈ ಲೇಬರ್ ಪ್ರಶ್ನೆಯು ಒಂದು concurrent subject ಆಗಿರುವುದರಿಂದ ಇದು ಸೆಂಟ್ರರ್ ಆಕ್ಟ್ ಆಗಿದ್ದರೂ ಇದನ್ನು ಬದಲಾಯಿಸುವ ಮತ್ತು ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಳ್ಳುವ ಅಧಿಕಾರ ನಮಗಿರುವುದರಿಂದ ಮಾನ್ಯ ಮಂತ್ರಿಗಳು ಈ ವಿಚಾರಗಳಿಗೆ ತಮ್ಮ ಮುಖ್ಯ ಗಮನವನ್ನು ಕೊಟ್ಟು, ತಕ್ಕ ಬದಲಾವಣೆಗಳನ್ನು ಶ್ರದ್ಧೆಯಿಂದ ಮಾಡಿ, ದೇಶದಲ್ಲಿ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆದು, ದೇಶದಲ್ಲಿ ಕಾರ್ಮಿಕರ ಚಳುವಳಿಗೆ ಅವಕಾಶವಿಲ್ಲದಂತೆ ಮಾಡಬೇಕೆಂಬ ಉದ್ದೇಶದಿಂದ ನಾನು ಈ ನಿರ್ಣಯವನ್ನು ಈಗ ನಿಮ್ಮ ಮುಂದೆ ಮಂಡಿಸುತ್ತೇನೆ. ಇದಕ್ಕೆ ಸರ್ವರೂ ಬೆಂಬಲಿಸಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Resolution moved:—

"That this Assembly is of the opinion that Government should prohibit by suitable legislation the reduction of working personnel in various industrial establishments in the State."

Sri P. M. SWAMIDORAI (Kolar Gold Fields—Scheduled Castes).—Sir, in supporting the resolution moved by Sri Venkatesh, I bring to the notice of this Hon'ble House specific cases from Kolar Gold Fields. The employers there, in spite of so many Acts, awards of so many Courts, Tribunals and other safeguards, are contemplating to retrench employees on a large scale. There are employees to the extent of about 25,000 or more on whom a population of about 1½ lakhs is depending entirely. As such, if a majority or at least 30 per cent of the employees are thrown out, it will certainly hit adversely the entire population of Kolar Gold Fields. The employees in Kolar Gold Fields are mostly from the Scheduled Castes and they were contributing to the national wealth to a great extent in the production of gold and thereby our State was getting a very good income. Now the employers of the four mines combined together are contemplating to take steps in this direction directly or indirectly. Indirectly also they have adopted so many tactics quoting Standing Order 21 (c) which says that with notice or compensation in lieu of 10 days' notice, a man's services can be dispensed with without assigning any reason, which in the opinion of the people, is gross injustice. Not only that. The employer brings so many unfounded allegations and says that an employee is a thief and though the man is proved to be not guilty in the Court, the employer refuses to take him back to service because he contends that the man alleged to be involved in that case was discharged on technical grounds and so he is not willing to take him back. To avoid all these things and miseries, I think Sri Venkatesh is justified in recommending for suitable legislation being enacted and I am also of the same opinion and request that this matter may be taken into consideration. The foreigners dominate over our people; they not only dominate but also rule over our people and cause much misery inspite of this country being ours and gold being mined from our country. It is high time for our Government to take this industry to their own control and nationalise it if possible, and they should see that no foreigners dominate over our people. Somehow this is going on. If nationalisation is not possible in the near future, at least in the interests of security of service, I once again request that suitable legislation may be initiated by this House. I heartily support the resolution moved by Sri Venkatesh.

ಶ್ರೀ ಆರ್. ಅನಂತರಾಮಕೃರವರು (ಚಾಮರಾಜ ಪೇಟೆ).—ಅಧ್ಯಕ್ಷರೇ, ಈ ತರಾವು ಬಹಳ ಮುಖ್ಯವಾದುದು. ಸಾಮಾನ್ಯವಾಗಿ ಇದು ಕಾರ್ಮಿಕ ಜನರಿಗೆ ಸಲ್ಲತಕ್ಕದ್ದು. ಶ್ರೀ ವೆಂಕಟೇಶ್‌ರವರು ಈ ತರಾವನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಈಗ ತಮಗೆ ಗೊತ್ತಿರುವಂತೆ ಕಾರ್ಮಿಕರಿಗೂ ಮತ್ತು ಮಾಲೀಕರಿಗೂ—ಮಾಲೀಕರು ಎಂದರೆ ಖಾಸಗೀ ಮಾಲೀಕರಿಗೂ—ಸರ್ಕಾರದವರಲ್ಲಿ ಒಂದು ಸಂಬಂಧ ಚೆನ್ನಾಗಿಲ್ಲ. ಯಾವ ದೊಡ್ಡ ಪಟ್ಟಣದಲ್ಲಿ ನೋಡಿದರೂ ಅವರ ಸಂಬಂಧ ಬರಬರುತ್ತಾ ದೂರ ಹೋಗುತಿದೆ. ಈ ಸಂದರ್ಭದಲ್ಲಿ ಖಾಸಗಿ ಮಾಲೀಕರೂ ಗಿರಣಿಯವರೂ ಕಾರ್ಮಿಕರನ್ನು ಹೊರಗೆ ಕಳುಹಿಸುವುದಕ್ಕೆ ಒಂದು ಕಾನೂನು ಸ್ವಲ್ಪ ಅಡಚಣೆಯಾಗಿದೆ. ಹಿಂದಿನ ಕಾಲದಲ್ಲಿ ಅವರ ಮನಸ್ಸಿಗೆ ಬಂದಂತೆ ನಡೆಸುತಿದ್ದರು, ಆದರೆ ಈಗ ಕಾನೂನಿರುವುದರಿಂದ ಸ್ವಲ್ಪ ಕಷ್ಟವಾಗಿ ಅವರು ಕೆಲವು ಕಾರಣಾಂತರಗಳ ಮುಖೇನ ಕಾನೂನು ಮೂಲಕ ಓಡಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ, ಇದಕ್ಕಾಗಿ ಒಂದು ಟ್ರಬ್ಯೂನರ್ ಇದೆ. ಅದರ ಮುಂದೆ ಒಂದು ಅರ್ಜಿ ಹಾಕಿ ಇಷ್ಟು ಮಂದಿ ಬೇಕಾಗಿಲ್ಲ ಎಂದು ನೆವ ಹೂಡುತ್ತಾರೆ, ಅದಕ್ಕಾಗಿ ಹೊರಗಿನಿಂದ ರಾಯರನ್ನು ಕರೆಸಿ ಎಷ್ಟೋ ಸಂದರ್ಭದಲ್ಲಿ ವಾದಿಸಿದ್ದಾರೆ. ಅವರ ಅನುಕೂಲಕ್ಕೆ ಚ್ಯುತಿ ಬಂದಿದೆ. ಈ ಸಂದರ್ಭದಲ್ಲಿ ಎಷ್ಟೋ ಮಾಲೀಕರು ತಮಗೆ ಬೇಕಿಲ್ಲದ ಕಾರ್ಮಿಕರನ್ನು ಓಡಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದಕ್ಕೆ ಉದಾಹರಣೆಯನ್ನು ನಮ್ಮ ಎತ್ತರು ಹೇಳಿದ್ದಾರೆ. ಬನ್ನಿಮಿಲ್ಲಿನಲ್ಲಿ ಸುಮಾರು 2—3 ವರ್ಷಗಳಿಂದ 120 ಜನರನ್ನು ತೆಗೆದರು. ಅದನ್ನು ಕೋರ್ಟಿನವರು ನ್ಯಾಯವೆಂದು ಒಪ್ಪಿದ್ದಾರೆ. ಅದು ಹೋಗಲಿ ಈಗ ಅವರನ್ನು ತೆಗೆದಮೇಲೆ ಹೊಸದಾಗಿ ಜನರನ್ನು ಅವರ ಸ್ಥಳಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೋಡಿದರೆ ಅವರಿಗೆ ಕೆಲಸವಿಲ್ಲದೆ ಓಡಿಸಿದರೆ ಅಥವಾ ಆಗದೆ ಓಡಿಸಿದರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈಗ ಹೊಸದಾಗಿ 600 ಜನರನ್ನು ಉರ್ಕ್ ಡಿಪಾರ್ಟ್‌ಮೆಂಟಿನಿಂದ ಬಗೆಯಬೇಕು, ಅದನ್ನು ಮುಚ್ಚಬೇಕು ಎಂದು ಪ್ರಯತ್ನಮಾಡಿದ್ದಾರೆ; ಏಕೆಂದರೆ ಅಲ್ಲಿ ಕಾರ್ಮಿಕ ಸಂಘ ಬಹಳ ವ್ಯವಸ್ಥೆಯಿಂದ ನಡೆಯುತ್ತಿದೆ. ಅಲ್ಲಿ ಮಾಲೀಕರ ಕೈ ಚಳಕ ನಡೆಯುವುದಿಲ್ಲ. ಈ ಸಂಘ ಇಷ್ಟು ಚೆನ್ನಾಗಿ ಬೆಳೆಯುತ್ತಿದೆ. ಇದನ್ನು ಮುರಿಯಬೇಕು ಎಂದು ಎನಾದರೂ ಒಂದು ನೆಪ ಹೂಡುತ್ತಿದ್ದಾರೆ. ಅಲ್ಲರುವ ಕಾರ್ಮಿಕರನ್ನು ಓಡಿಸೋಣ ಎಂದು ದುರುದ್ದೇಶದಿಂದ ಮಾಲೀಕರು ಈಗಾಗಲೇ ಒಂದು ಡಿಪಾರ್ಟ್‌ಮೆಂಟನ್ನೇ ಪೂರ್ತಿಯಾಗಿ ಮುಚ್ಚಬೇಕೆಂದು ಮನಸ್ಸುಮಾಡಿದ್ದಾರೆ. ಆದರೆ ಈಗಾಗಲೇ ಟಳಿಗಾಲ ಬರುತ್ತಿದೆ, ಉಣ್ಣೆ ಕೈಗಾರಿಕೆ ಈಗ ನಡೆಯಬೇಕು. ಆದರೆ ಬೇಕಾದಷ್ಟು ಮಾಲಿದೆ, ಅದೇ ಖರ್ಚಾಗಿಲ್ಲದಿರುವಾಗ ಜನರೇಕೆ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿರುವಹಾಗೆ ಅದರಲ್ಲಿ ಬೇಕಾಗಿರುವ ಕೆಲವು ಜನರನ್ನು ಹತ್ತಿ ಇರಾಖೆಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಹೀಗೆ ಕಾರ್ಮಿಕರನ್ನು ಓಡಿಸುವುದಕ್ಕಾಗಿ ಬಹಳವಾಗಿ ಪ್ರಯತ್ನಮಾಡುತ್ತಿದ್ದಾರೆ.

ಇನ್ನೊಂದು ವಿಚಾರ ಸಭೆಯಮುಂದೆ ಇಡಬೇಕಾಗಿದೆ. ಏನೆಂದರೆ ಬನ್ನಿಮಿಲ್ಲು 1939ರಿಂದ 1946ರವರೆಗೆ ಬಹಳ ಹಣ ಸಂಪಾದಿಸಿದೆ. ಸಂಪಾದಿಸಿ ಬೇಕಾದಷ್ಟು ಹಣ ರಿಸರ್ವ್ ಫಂಡಿನಲ್ಲಿಟ್ಟಿದೆ. ಇಷ್ಟು ಕೂಡಿದ ಮೇಲೆ ಸಂಪಾದನೆಗೆ ಕೆಟ್ಟಕಾಲ ಬಂದರೆ ತಮ್ಮನ್ನೇ ನಂಬಿರುವ ಕಾರ್ಮಿಕರನ್ನೇ ಓಡಿಸುವುದು ನ್ಯಾಯವೇ! ಕಷ್ಟಕಾಲದಲ್ಲಿ ಪೂರ್ತಿಯಾದ ಸಂಬಳ ಪಾವತಿಮಾಡಲು ಸಾಧ್ಯವಿಲ್ಲದಿದ್ದರೆ ಅರ್ಧ ಸಂಬಳ ಏಕೆ ಕೊಡಬಾರದಾಗಿತ್ತು? ಸಕ್ಕರೆ ಕಾರ್ಖಾನೆಯಲ್ಲಿ ಯಾವಾಗ ಸಕ್ಕರೆ ತಯಾರಿಕೆಯಿಲ್ಲವೋ ಆಗ ಅರ್ಧ ಅಥವಾ ಮುಕ್ಕಾಲು ಸಂಬಳ ಕೊಡುತ್ತಾರೆ. ಅದೇ ರೀತಿಯಲ್ಲಿ ಬನ್ನಿಮಿಲ್ಲಿನವರೂ ಏಕೆ ಮಾಡಲಲ್ಲವೋ? ಗೊತ್ತಾಗುವುದಿಲ್ಲ. ಹೊರಗಿನಿಂದ ಯೂರೋಪಿಯನ್ನರನ್ನು ಮತ್ತು ಪಾಶ್ಚಾತ್ಯರನ್ನು ಕರೆದುಕೊಂಡು ಬಂದಿದ್ದರು. ಅವರನ್ನು ಉರ್ಕ್ ಡಿಪಾರ್ಟ್‌ಮೆಂಟಿನಿಂದ ತೆಗೆದಿಲ್ಲ. ಹೀಗೆ ಬಹಳ ಅನ್ಯಾಯ ನಡೆಯುತ್ತಿದೆ. ಈ ರೀತಿ ನಡೆಯುತ್ತಿರುವುದನ್ನು ನೋಡಿ ನಾವು ಕಾಣುವುದೇನೆಂದರೆ: ಎಲ್ಲಾ ಗಿರಣಿ ಮಾಲೀಕರೂ ಕೂಲಿಗಾರರನ್ನು ಹೊರಗೆ ಓಟ್ಟುತ್ತಾರೆ, ಕೂಲಿಗಾರರ ಸಂಘ ಮುರಿಯುತ್ತಾರೆ, ಇದರಿಂದ ನಿರುದ್ಯೋಗ ಸಮಸ್ಯೆ ಬಹಳ ಹೆಚ್ಚಾಗುತ್ತದೆ ಎಂಬುದು. ಪಟ್ಟಣಗಳಲ್ಲಿ ಈಗಾಗಲೇ ನಿರುದ್ಯೋಗ ಸಮಸ್ಯೆ ಪುರುವಾಗಿದೆ, ಬಾಕಿ ಕಾರ್ಮಿಕರೂ ಹೊರಗೆ ಬಂದಮೇಲೆ ದೊಡ್ಡ ಸಮಸ್ಯೆಯಾಗುತ್ತದೆ. ಈ ಸಂದರ್ಭದಲ್ಲಿ ಹಿಂದೆ ನಾನು ಹೇಳಿದ ಹಾಗೆ ಬನ್ನಿಮಿಲ್ಲಿನವರು ಹೆಚ್ಚಾಗಿ ಕೂಲಿಗಾರರೊಡನೆ ಸಹಕಾರಮಾಡದೇ ಹೋದರೆ ಮತ್ತು ಅನ್ಯಾಯಮಾಡಿದರೆ ಸರ್ಕಾರ ರಾಷ್ಟ್ರೀಕರಣ ಮಾಡಬೇಕು, ಮುಚ್ಚಬೇಕಾಗಿಲ್ಲ ಎಂದು ಹೇಳುತ್ತಿದ್ದಾರೆ. ಕೊನೆಯಪಕ್ಷ ಜಾಯಿಂಟ್ ಮ್ಯಾನೇಜ್‌ಮೆಂಟ್ ಏಕೆ ಮಾಡಬಾರದು? ಹಾಗೆಮಾಡಿ ಇಷ್ಟು ಅನ್ಯಾಯ ತಪ್ಪಿಸುವುದು ಬಹಳ ಒಳ್ಳೆಯದು. ಹೆಚ್ಚಾಗಿ ಹೇಳುವುದಕ್ಕೆ ಇಷ್ಟವಿಲ್ಲ. ಮಿನರ್ವ ಮಿಲ್ಲು, ರಾಜಾಮಿಲ್ಲು ಮತ್ತು ಇತರ ಮಿಲ್ಲುಗಳವರೂ ಕೂಲಿಯವರನ್ನು ಹೊರಗೆ ಕಳುಹಿಸುವ ಪ್ರಯತ್ನದಲ್ಲಿದ್ದಾರೆ. ಈ ಸಂದರ್ಭದಲ್ಲಿ ಒಂದು ತಿದ್ದುಪಡಿ ಕಾನೂನು ಮಾಡುವುದು ಒಳ್ಳೆಯದು. ಸಾಮಾನ್ಯವಾಗಿ ಅವರಿಗೆ ಬಹಳ ಕಷ್ಟ ಕಾಲವಾದರೆ ಮತ್ತು ಸರಿಯಾದ ಕಾರಣವಿದ್ದರೆ ಸ್ವಲ್ಪ ಜನರನ್ನು ಕಳುಹಿಸಬಹುದು. ಅದನ್ನು ಬಿಟ್ಟು ಪೂರ್ತಿಯಾಗಿ ತೆಗೆಯುವುದು ಅನ್ಯಾಯ. ಈಗ ನಮ್ಮ ಸರ್ಕಾರದವರೂ ಹೆಚ್ಚು ಜನರನ್ನು ತೆಗೆಯುತ್ತಿದ್ದಾರೆ. ಆದರೆ ಇರಾಖೆಗಳನ್ನೇ ಮುಚ್ಚುವುದಿಲ್ಲ. ಅದೇ ರೀತಿಯಲ್ಲಿ ಬೇಕಾದರೆ ಕಾರ್ಖಾನೆ ಅಥವಾ ಗಿರಣಿ ಮಾಲೀಕರು ತೆಗೆಯುವುದು ಒಳ್ಳೆಯದು. ಅದನ್ನು ಬಿಟ್ಟು ಒಂದೊಂದು ಇರಾಖೆಯನ್ನೇ ಮುಚ್ಚಿ ಜನರಿಗೆ ಅನ್ಯಾಯಮಾಡುವುದು ದೇಶಕ್ಕೆ ಬಹಳ ದ್ರೋಹಮಾಡಿದಂತಾಗುತ್ತದೆ. ಆದಕ್ಕಾಗಿ, ಈ ಸಂದರ್ಭದಲ್ಲಿ ಒಂದು ಕಾನೂನು ಮಾಡುವುದು ಬಹಳ ಒಳ್ಳೆಯದು. ಹಾಗೆ ಮಾಡಿದರೆ ದೇಶಕ್ಕೂ ಒಳ್ಳೆಯದು ಮತ್ತು ಕೈಗಾರಿಕೆಗೂ ಉತ್ತೇಜನ ಕೊಟ್ಟಹಾಗಾಗುತ್ತದೆ. ಒಂದುಪಕ್ಷ ಬನ್ನಿಮಿಲ್ಲಿನವರು ಉರ್ಕ್ ಡಿಪಾರ್ಟ್‌ಮೆಂಟ್ ಮುಚ್ಚಿದರೆ ದೇಶಕ್ಕೆ ಬಹಳ ಕಷ್ಟ. ಆಗ ತಯಾರಾಗುವುದೂ ನಿಲ್ಲುತ್ತದೆ, ಹೊರಗಿನಿಂದ ತರಿಸುವುದಕ್ಕೆ ಇಷ್ಟವಿಲ್ಲ. ಆ ಸಂದರ್ಭದಲ್ಲಿ ಬೆರೆ ಬಹಳ ಜಾಸ್ತಿಯಾಗುತ್ತದೆ. ಆದ್ದರಿಂದ ಕಾರ್ಖಾನೆಗಳವರು ಸಾಮಾನುಗಳ ಬೆರೆ ಇಳಿದರೆ ಸಂಬಳ ಆಗ ಸ್ವಲ್ಪ ಕಡಮೆಮಾಡಲಿ, ತುಟ್ಟಿಭತ್ಯ ಮಾಡಿ ಸಂಬಳ ಕಡಮೆ ಕೊಡಲಿ. ಆ ರೀತಿ ಮಾಡದೆ ಎಲ್ಲರನ್ನೂ ಹೊರಗೆ ಕಳಿಸುವುದು ದೇಶಕ್ಕೆ ಒಳ್ಳೆಯದಲ್ಲ. ಈ ಸಂದರ್ಭದಲ್ಲಿ ಕಾರ್ಮಿಕ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳಲ್ಲಿ ನಾನು ಪ್ರಾರ್ಥನೆಮಾಡುವುದು; ಬಹಳ ಜಾಗರೂಕತೆಯಿಂದ ಕೆಲಸಮಾಡಬೇಕು: ಇಲ್ಲದಿದ್ದರೆ ಮೈಸೂರು, ಬೆಂಗಳೂರು, ಭದ್ರಾವತಿ ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಕಾರ್ಮಿಕರ ಗುಂಪಿನಲ್ಲಿ

ನಿರುದ್ಯೋಗ ಸಮಸ್ಯೆ ಬಹಳವಾಗಿ ದೇಶದಲ್ಲಿ ಅನಾಹುತವಾಗುತ್ತದೆ ಎಂದು. ಇಷ್ಟು ಹೇಳಿ ಭಾಷಣ ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡರು (ಸಾಗರ–ಹೊಸನಗರ).—ಅಧ್ಯಕ್ಷರೇ, ಶ್ರೀ ವೆಂಕಟೇಶ್‌ರವರು ಸಭೆಯ ಮುಂದೆ ಮಂಡಿಸಿರುವ ಈ ನಿರ್ಣಯಕ್ಕೆ ನಾನು ನನ್ನ ಹೃತ್ಪೂರ್ವಕವಾದ ಬೆಂಬಲ ನೀಡುತ್ತಾ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಈ ನಿರ್ಣಯದಲ್ಲಿ ಕೇಳುವ ಕಾನೂನು ಬಹಳ ಹಿಂದೆಯೇ ಬರಬೇಕಾಗಿತ್ತು. ಆದರೆ ಈವರೆಗೆ ಈ ರೀತಿಯಾಗಿ ಕಾರ್ಮಿಕರನ್ನು ಮ್ಯಾನೇಜ್‌ಮೆಂಟಿನವರು ಮನ ಬಂದಾಗ ಹೊರಗೆ ಓಡಿಸುವುದು ಒಂದು ಅಡ್ಡಿ ತಡೆಯಿಲ್ಲದೆ ನಡೆದುಕೊಂಡು ಹೋಗಿರುವುದು ತುಂಬಾ ಅನ್ಯಾಯಕ್ಕೆ ಎಡೆಕೊಟ್ಟಿದೆ. ಗೆಳೆಯ ವೆಂಕಟೇಶ್‌ರವರು ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದ್ದಾರೆ. ಎಷ್ಟೋ ಸಾವಿರಾರು ಜನ ಕೂಲಿಗಾರರನ್ನು ಮ್ಯಾನೇಜ್ ಮೆಂಟಿನವರು ಹೊರಗೆ ಹಾಕಿದ್ದಾರೆ. ಮ್ಯಾನೇಜ್ ಮೆಂಟಿನವರು ಖಾಸಗಿಯವರೇ ಆಗಲಿ, ಸರ್ಕಾರದವರೇ ಆಗಲಿ ಈ ರೀತಿಯಾಗಿ ಒಂದು ಕಾರ್ಯವನ್ನು ಮಾಡಿದರೆ, ಕೆಲಸಗಾರರನ್ನು ಯಾವುದೇ ಕಾರಣಕ್ಕಾಗಿ ಹೊರದೂಡಿದರೋ ಆ ಒಂದು ನೀತಿಯನ್ನು ತಡೆಗಟ್ಟುವುದಕ್ಕೆ ಒಂದು ಕಾನೂನು ಅತ್ಯಾವಶ್ಯಕ. ಅದರಲ್ಲೂ ಇಂದು ಜೀವನ ನಡೆಸುವುದೇ ದುರ್ಭರವಾಗಿರುವ ಕಾಲದಲ್ಲಿ ಇದ್ದ ಒಂದು ಸಣ್ಣ ಕೆಲಸವೂ ಕೂಡ ಏಕಾಏಕಿ ಹೋಯಿತೆಂದರೆ ಸಹಸ್ರಾರು ಜನರು ನಿರುದ್ಯೋಗಿಗಳಾಗುವುದೂ ಅಲ್ಲದೆ ಅವರಿಗೆ ಜೀವನಕ್ಕೇ ಇಲ್ಲದೆ ಹೋಗಿ ಅನೇಕರು ಬೀದಿಯ ಭಿಕಾರಿಗಳಾಗುತ್ತಾರೆ. ಅಲ್ಲದೆ ಈ ರೀತಿಯಲ್ಲಿ ಕೆಲಸ ಮಾಡುವ Right to labour ಶಕ್ತಿಯನ್ನು ನಮ್ಮ ರಾಜ್ಯಾಂಗದಲ್ಲಿ ಕಾಣಿಸದೇ ಇದ್ದರೂ ಕೂಡ ಕೆಲಸದಲ್ಲೇ ಇರಬಾರದೆಂದು ತೆಗೆದುಹಾಕದಂತೆ ನೋಡಿಕೊಳ್ಳುವುದು ಯಾವುದೇ ಒಂದು ಸರ್ಕಾರದ ಆದ್ಯಕರ್ತವ್ಯ. ಆದ್ದರಿಂದ ಈ ಕಾನೂನು ಅತ್ಯಗತ್ಯವಾಗಿ ಆಗಲೇಬೇಕು ಎಂಬುದು ನನ್ನ ಒತ್ತಾಯ. ಮತ್ತು ಹಾಗೆ ಒತ್ತಾಯ ಮಾಡುತ್ತಾ ಗೆಳೆಯ ವೆಂಕಟೇಶ್‌ರವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ನಿರ್ಣಯವನ್ನು ಯಾವುದೇ ಆಶ್ವಾಸನದ ಮೇಲೂ ಈ ಸಭೆಯಿಂದ ವಾಪಸ್ಸು ಪಡೆಯಬಾರದು ಎಂದು. ಈ ನಿರ್ಣಯ ಕಾನೂನು ಆಗುವುದಕ್ಕೆ ನಾವೆಲ್ಲರೂ ಸತತವಾಗಿ ಪ್ರಯತ್ನ ಮಾಡಬೇಕು. ಕಾರಣ ಇಷ್ಟೆ. ಈ ರೀತಿ ನಾವು ನಿರ್ಣಯವನ್ನೂ ತರುವುದಕ್ಕೆ ಪ್ರಯತ್ನಪಟ್ಟು ವಿಫಲರಾದರೆ, ಯಾರಾರು ಇಂಥಾ ಕಷ್ಟಕ್ಕೆ ಸಿಕ್ಕಿಹಾಕ್ಕೊಳ್ಳುತ್ತಾರೋ ಅವರಿಗೆ ಆ ಕಾರ್ಮಿಕರಿಗೆ ನಾವು ಯಾವ ಒಂದು ಸಹಾಯವನ್ನೂ ನೀಡಿದಂತಾಗುವುದಿಲ್ಲ. ಅಲ್ಲದೆ ಇನ್ನು ಮುಂದೆ ಹೆಚ್ಚು ಸಂಖ್ಯೆಯಲ್ಲಿ ಕೆಲಸಗಾರರನ್ನು ತೆಗೆದುಹಾಕಬೇಕೆಂದಿರುವಂಥ ಮ್ಯಾನೇಜ್‌ಮೆಂಟ್‌ರವರಿಗೆ ನಾವು ಯಾವುದೇ ರೀತಿಯಲ್ಲಿ ಪ್ರತಿಭಟನೆ ತೋರಿಸುವುದಕ್ಕೂ ಆಗುವುದಿಲ್ಲ. ನನಗೆ ಎಷ್ಟೋ ಜನ ಕಾರ್ಮಿಕರು ಹಾಗೂ ಕಾರ್ಮಿಕ ಸಂಸ್ಥೆಗಳವರು ಪತ್ರ ಬರೆದಿದ್ದಾರೆ. ಅಂಥ ಪತ್ರಗಳಲ್ಲಿ ಒಂದು ಎಂದರೆ, ಹಾನನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಿಂದ ಬಂದಿರುವುದು. ಅವರು ಕೇಳಿದ್ದಾರೆ. ಸಭೆಯ ಮುಂದೆ ನಮ್ಮ ವಿಷಯ ಯಾವಾಗ ಬರುತ್ತದೆ, ನಮ್ಮ ಗತಿ ಏನು, ಎಂದು ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಸರ್ಕಾರದಿಂದ ನಡೆಯುತ್ತಾ ಇದ್ದ ಶಿವಮೊಗ್ಗಾದ ಮ್ಯಾಚ್ ಫ್ಯಾಕ್ಟರಿ ಮುಚ್ಚಲ್ಪಟ್ಟಿತು.

Sri T. SIDDALINGAIYA.—It is not correct.

Sri A. BHEEMAPPA NAIK.—It was a Joint Stock Company.

ಶ್ರೀ ಎಸ್. ಗೋಪಾಲಗೌಡರು.—ಸರ್ಕಾರದವರು ಭಾಗವಹಿಸಿದ್ದ ಕೈಗಾರಿಕೆ ನಿಲ್ಲಿಸಲ್ಪಟ್ಟಿತು. ಆಗಲೂ ಕೂಡ ನಾವು ಹೆಚ್ಚಿನ ಒಂದು ಪ್ರತಿಭಟನೆಯನ್ನು ಪ್ರದರ್ಶನ ಮಾಡಿ ಮತ್ತೆ ಕಂಪೆನಿ ನಡೆಯುವಂತೆ ಮಾಡಬೇಕಾಯಿತು. ಈ ರೀತಿ ನಡೆಯುವುದಕ್ಕೆ, ಹೀಗೆ ಮ್ಯಾನೇಜ್‌ಮೆಂಟ್‌ನವರು ಯಾವುದೋ ಒಂದು ಕಾರಣವನ್ನು ಕೊಟ್ಟು ಕೆಲಸಗಾರರನ್ನು ಕೆಲಸದಿಂದ ತೆಗೆಯುವುದಕ್ಕೆ ಮತ್ತು ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಪ್ರದರ್ಶನ ಮಾಡುವುದಕ್ಕೆ ಇದರಲ್ಲೇ ಶಕ್ತಿ ವ್ಯಯ ಆಗುವುದರಲ್ಲದೆ ಮತ್ತು ದೇಶದಲ್ಲಿ ಎಲ್ಲ ಜನರಿಗೂ ಈಗ ಸಾಕಷ್ಟು ಉದ್ಯೋಗ ದೊರೆತಿಲ್ಲ. ಅನೇಕ ಕೈಗಾರಿಕೆಗಳನ್ನು ತೆರೆಯಬೇಕು ಮತ್ತು ಕೆಲಸಮಾಡುವ ಎಲ್ಲಾ ವಯಸ್ಕರಿಗೂ ಕೆಲಸವನ್ನು ಕೊಡುವುದು ಕೂಡ ಸರ್ಕಾರದವರ ಒಂದು ಕರ್ತವ್ಯವಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರ.—ಕೆಲಸಮಾಡುವವರು ಇದ್ದರೆ ಕೆಲಸಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್. ಗೋಪಾಲಗೌಡರು.—'ನಾನು ತಯಾರಿದ್ದೇನೆ, ಸ್ವಾಮಿ, ನನ್ನಂಥ ಕೆಲಸ ಮಾಡುವುದಕ್ಕೆ ಸಾವಿರಾರು ಜನರು ತಯಾರಿದ್ದಾರೆ.' ಎಂದು ಹೇಳುತ್ತೇನೆ. ಎಲ್ಲ ಹೋದರೂ 'No employment " No vacancy " ಎಂದು ಬೋರ್ಡು ಇರುತ್ತದೆ. ಈಗ ತಾನೆ ಮಾನ್ಯ ಮಂತ್ರಿಗಳು ಎಲ್ಲರಿಗೂ ಕೆಲಸ ಕೊಡುವುದಕ್ಕೆ ತಯಾರಾಗಿದ್ದೇವೆ' ಎಂದು ಹೇಳಿದರು. ಇದು ಬಹಳ ಸಂತೋಷದ ವಿಷಯ. ಹೀಗೆ ಸರ್ಕಾರದವರು ಮುಂದೆ ಬಂದ ಈವತ್ತು, ಯಾರಾರು ನಿರುದ್ಯೋಗದಿಂದ ಪರಿತಪಿಸುತ್ತಿದ್ದಾರೋ ಅವರಿಗೆಲ್ಲಾ ಕೆಲಸ ಕೊಡಿಸುವುದು ಅಲ್ಲದೆ, ಇವತ್ತು ಎಷ್ಟೋ ಜನ ಕಾರ್ಮಿಕರು ಕೆಲಸವಿಲ್ಲದೆ ಇದ್ದಾರೆ. ಅವರನ್ನು ಕೆಲಸದಿಂದ ತೆಗೆದುಹಾಕದಂತೆ ಒಂದು ತುರ್ತು ಕಾನೂನು ತರುವ ಮೂಲಕ ಅವರನ್ನು ರಕ್ಷಣೆಮಾಡುವ ಭಾರ ಸರ್ಕಾರದ ಮೇಲಿದೆ. ಆದ್ದರಿಂದ ನಾನು ಹೆಚ್ಚು ಈ ವಿಷಯದಲ್ಲಿ ವಿವರ ಕೊಡುವುದಕ್ಕೆ ಇಷ್ಟ ಪಡದೆ, ಈ ಕಾನೂನನ್ನು ಈ ಸಭೆಯವರು ತರುವುದಕ್ಕೆ ಪ್ರಯತ್ನಮಾಡಬೇಕು ಒತ್ತಾಯಮಾಡಬೇಕು ಎಂದು ಹೇಳಿ ಈ ನಿರ್ಣಯವನ್ನು ತಂದ ನನ್ನ ಮಿತ್ರರಾದ ವೆಂಕಟೇಶ್‌ರವರಿಗೆ ನನ್ನ ಮಂಡನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ವೆಂಕಟೇಶ್‌ರವರು.—ಮಾನ್ಯ ಮಿತ್ರರಾದ ಶ್ರೀಮಾನ್ ಗೋಪಾಲಗೌಡರು ಇದನ್ನು ವಾಪಸು ತೆಗೆದುಕೊಳ್ಳಬಾರದು, ಒತ್ತಾಯಮಾಡಬೇಕು ಎಂದು ಹೇಳಿದ್ದಾರೆ. ನಿರ್ಣಯದ ಬಗ್ಗೆ ಸೂಚಕರು ಸೂಚನೆ ಮಾಡುವಾಗ ಜವಾಬ್ದಾರಿ ಅರಿತೇ ಸೂಚನೆ ಮಾಡಿದ್ದಾರೆ ಎಂದು ಅವರಿಗೆ ಹೇಳುತ್ತೇನೆ. 15-16 ವರ್ಷದಿಂದಲೂ ನಾನೂ ಒಬ್ಬ ಕೂಲಿಗಾರನಾಗಿ ಕಾನೂನು ಬದ್ಧವಾಗಿ ಕಾರ್ಮಿಕ ಕೆಲಸಗಳನ್ನು ಮಾಡತಕ್ಕವಿಚಾರ ತಿಳಿದುಕೊಂಡಿದ್ದೇನೆ. ಆದ್ದರಿಂದ ಇದನ್ನು ವಾಪಸು ತೆಗೆದುಕೊಳ್ಳುವುದೂ ಬಿಡುವುದೂ ನನಗೆ ಸೇರಿದ್ದು. ಮಾನ್ಯ ಮಂತ್ರಿಗಳು ಉತ್ತರಕೊಟ್ಟ ಮೇಲೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಮಂತ್ರಿಗಳು).—ಸ್ವಾಮಿ,

(ಶ್ರೀ ಎ. ಜಿ. ರಾಮಚಂದ್ರರಾಯರು).

ಬೆಂಗಳೂರು ನಗರದ ಕಾರ್ಮಿಕರ ಪ್ರತಿನಿಧಿಗಳು ಸ್ವಾರಸ್ಯವಾದ ಭಾಷಣಮಾಡಿದ್ದಾರೆ. ಅವರು ಪ್ರಾರಂಭ ಮಾಡುವಾಗಲೇ ತಿಳಿಸಿದಂತೆ ಉದ್ಯಮಗಳು ರಾಭದಾಯಕವಾಗಿ ನಡೆಯಬೇಕು. ಸೋಮಾರಿತನ ಕ್ಕಾಗಲೀ ಅಥವಾ ನೆಪಗಳ ಮೇಲೆ ಕೆಲಸ ಕಡಮೆ ಮಾಡುವುದಕ್ಕಾಗಲೀ ಉತ್ತೇಜನ ಕೊಡುವುದಕ್ಕೆ ಈ ನಿರ್ಣಯ ಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವುದು ಬಹಳ ಸಂತೋಷದ ವಿಷಯ. ಇದನ್ನು ಸ್ವಾಗತಿಸುತ್ತೇನೆ. ಆದರೆ ಸರ್ಕಾರಿ ಉದ್ಯಮಗಳನ್ನು ಬಿಟ್ಟರೆ ಬಾಕಿ ಯಾವ ಉದ್ಯಮವೂ ಕೂಡ ಕಾನೂನಿನಿಂದ ಸೃಷ್ಟಿಯಾಗಿ ಬಂದಿಲ್ಲ ಮತ್ತು ಕಾನೂನಿನ ಮಾತ್ರದಿಂದರೇ ಅಭಿವೃದ್ಧಿ ಹೊಂದುವುದಕ್ಕೆ ಆಗುವದಿಲ್ಲ. It is not born by legislation; it cannot be sustained by legislation. ನಮ್ಮದು free economy and welfare economy ಎಂದು ಹೇಳಬಹುದು. ನ್ಯಾಷನಲೈಜ್, ಸೋಷಿಯಲೈಜ್ ಮಾಡಕಕ್ಕ ಉದ್ದೇಶ ಈಗ ನಮ್ಮ ಸರ್ಕಾರಕ್ಕೆ ಸದ್ಯಕ್ಕೆ ಇಲ್ಲ. ಆದ್ದರಿಂದ ಕಾನೂನಿನ ಆಶ್ರಯದಲ್ಲಿ ಬರದೇ ಇರುವ ಉದ್ಯಮಗಳಿಗೆ ಕಾನೂನು ಎನ್‌ಫೋರ್ಸ್ ಮಾಡುತ್ತೇವೆ ಎಂದು ಹೇಳುವುದು ಕಷ್ಟ. ಈಗಿನ ಬಡ್ಜೆಟ್ ಸ್ಥಿತಿ ನೋಡಿದರೆ ದೇಶದ ದುಸ್ಥಿತಿ ಗೊತ್ತಾಗುತ್ತದೆ. ಅನೇಕ ತಿಂಗಳುಗಳ ಕಾಲ ನಷ್ಟ ಹೊಂದುತ್ತಾ ಇದ್ದ ಸರ್ಕಾರದ ಕೆಲವು ಉದ್ಯಮಗಳನ್ನು ಕೂಡ ರಾಭದಾಯಕವಾಗಿ ಮಾಡಬೇಕೆಂದು ಪ್ರಯತ್ನಪಟ್ಟರೂ ಸಾಧ್ಯವಾಗದೆ ಇದ್ದುದರಿಂದ ಮುಚ್ಚಿರುವುದು ನಿಜ. ಅವನ್ನು ಅಡಮ್ಟ್ ಜಾಗ್ರತೆ ತೆರೆಯಬೇಕು, ಕಾರ್ಮಿಕರಿಗೆ ಅನುಕೂಲಮಾಡಿಕೊಡಬೇಕು ಎಂದು ಮಾನ್ಯ ಕೈಗಾರಿಕಾ ಮಂತ್ರಿಗಳು ಪ್ರಯತ್ನ ಪಡುತ್ತಾ ಇದ್ದಾರೆ. ಖಾಸಗಿ ಉದ್ಯಮಗಳವರೂ ಸಹ ರಾಭಕ್ಕೆ ಕೆಲಸಮಾಡತಕ್ಕವರು. ಅನೇಕ ವರ್ಷ ಉದ್ಯಮನಡೆಸಿ ನುರಿತವರಾಗಿರತಕ್ಕವರು. ಅವರೂ ಉದ್ಯಮವಾಡುತ್ತಾರೆ. ಅವರಲ್ಲಿ ಕೈಕಟ್ಟಿಕೊಂಡು ಕೂರಲು ಇಷ್ಟ ಪಡುತ್ತಾರೆಂದು ಭಾವಿಸಲಾರದು. ಆದ್ದರಿಂದ ಅನಿವಾರ್ಯವಾದ ಸಂದರ್ಭಗಳಲ್ಲಿ ಕೆಲವರು ತಮ್ಮ ಉದ್ಯಮವನ್ನು ಸ್ವಲ್ಪ ಕಡಮೆಮಾಡಬಹುದು. ಆಗಿರತಕ್ಕ ನಷ್ಟವನ್ನು ಸುಧಾರಿಸಿಕೊಂಡು ಪುನಃ ಉದ್ಯಮಮಾಡತಕ್ಕವರೇ ಹೊರತು ಉದ್ಯಮವನ್ನು ಮುಚ್ಚಿ, ಕಾರ್ಮಿಕರಿಗೆ ತೊಂದರೆಕೊಡಬೇಕೆಂಬ ಉದ್ದೇಶವಿಲ್ಲ ಎಂದು ವಿಚಾರಣೆಯಿಂದ ತಿಳಿದು ಬರುತ್ತದೆ. ಕೆಲವು ಕಡೆ ಯಾವ ನೆಪವೂ ಇಲ್ಲದೆ ದುರುದ್ದೇಶದಿಂದ ತೊಂದರೆ ಕೊಡಬಹುದು ಎಂಬ ಭಾವನೆ ಇರಬಹುದು. ಅಂಥದು ಸರ್ಕಾರದವರ ಗಮನಕ್ಕೆ ಬಂದರೆ ಖಂಡಿತವಾಗಿಯೂ ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ರೀತಿಯಲ್ಲಿ ರೇಬರ್ ಆಕ್ಟ್‌ನಲ್ಲಿ ಅದಕ್ಕೆ ಅವಕಾಶವಿದೆ. ಇದಕ್ಕಿಂತ ಹೆಚ್ಚಾಗಿ ಇತರ ಸೆಂಟ್ರಿಲ್ ಆಕ್ಟ್‌ಗಳು ಬೇರೆ ಇವೆ. ಅಂಥ ಒಂದು ಕೆಟ್ಟ ಬುದ್ಧಿಯಿಂದ, ದುರುದ್ದೇಶದಿಂದ ಕಾರ್ಮಿಕರಿಗೆ ತೊಂದರೆ ಕೊಟ್ಟಪಕ್ಷದಲ್ಲಿ ಸೆಂಟ್ರಲ್ ಗವರ್ನಮೆಂಟ್ ಮುಂಬಾಂತರ ತನಿಖೆ ನಡೆಸಬಹುದು, ಫಲಕಾರಿಯಾಗಿ ನರಿಯಾದ ಡೈರೆಕ್ಷನ್ ಕೊಟ್ಟು ಸರಿಪಡಿಸಬಹುದು. ಹೀಗಿರುವಾಗ ಹೊಸದಾಗಿ ರೆಜಿಸ್ಲೇಷನ್ ಮಾಡಬೇಕಾಗಿಲ್ಲ. ಅಂದ ಮಾತ್ರಕ್ಕೆ ಸರ್ಕಾರ ಕೈಕಟ್ಟಿಕುಳಿತುಕೊಳ್ಳುತ್ತದೆ ಎಂದಲ್ಲ. ಯಾವುದೇ ಉದ್ಯಮವಾಗಲಿ ದುರುದ್ದೇಶದಿಂದ ನಡವಳಿಕೆ ನಡೆಸುವುದು, ಕಾರ್ಮಿಕರಿಗೆ ತೊಂದರೆಕೊಡುವುದು ಇದ್ದರೆ, ಸರ್ಕಾರದವರು ಪ್ರವೇಶ ಮಾಡಿ ಸೂಕ್ತ ಪರಿಹಾರ ಕೊಡುತ್ತೇವೆ ಎಂಬ ಧರವಸೆ ಕೊಡುತ್ತೇನೆ.

ಕೋಲಾರದ ಮಾನ್ಯ ಮಿತ್ರರು contemplated action ವಿಚಾರ ಹೇಳಿದರು. ಆ ರೀತಿ contemplate ಮಾಡಿದ್ದಾರೋ ಇಲ್ಲವೋ ಎಂದು ಹೇಳುವುದು ಸೂಕ್ತವಲ್ಲ. ಆ ರೀತಿ ಮಾಡುವುದು imminent ಎಂಬುದಾಗಿ ಕಂಡುಬಂದರೆ, ಸರ್ಕಾರದ ಗಮನಕ್ಕೆ ತರಬಹುದು. ಅದಕ್ಕೆ ಸೂಕ್ತಗಮನವನ್ನು ಸರ್ಕಾರ ನೀಡುತ್ತದೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಡಿ. ವೆಂಕಟೇಶ್‌ರವರು.—ಕಾರ್ಮಿಕರ ಮಂತ್ರಿಗಳು ವಿವರವಾಗಿ ಹೇಳಿದ್ದಾರೆ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಕ್ಟ್ ಪ್ರಕಾರ ಅದು ನಮ್ಮದೇಶಕ್ಕೂ ಜಾರಿಗೆ ಬರುವುದಾದರೆ, ನಾನು ಸಭೆಯ ಅಪ್ಪಣೆ ಬೇಡಿ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn.

Mr. SPEAKER.—The House will now rise for lunch.

The Assembly adjourned for lunch at Three of the Clock and re-assembled at Thirty Minutes past Three of the Clock.

[Mr. SPEAKER in the Chair.]

Sri M. PALANIYAPPAN (Ulsoor).—Mr. Speaker, I want to bring to your notice rule 139 (1). The Secretary is not making proper arrangements to send relevant papers. In fact, I have not received since two days questions and answers.

Mr. SPEAKER.—I will see to it.

No. 16.—Stopping the payment of salary of Rs. 100 to each Member of Assembly.

ಶ್ರೀ ಎಂ. ಶಂಕರ ಲಿಂಗೇಗೌಡರು (ನಾಗಮಂಗಲ).—ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿಯಿದೆ.

Mr. SPEAKER.—I think the mover is in the Select Committee to which the Bill on the subject has been referred already.

Sri M. SHANKAR LINGE GOWDA.—That is a different point.

Mr. SPEAKER.—It is not altogether different. I think the Member can have his say on the matter in the Select Committee. So, may I expect the Member not to move his resolution?

Sri M. SHANKAR LINGE GOWDA.—I am moving. (Laughter)

* **Sri M. MADIAH.**—I rise to a point of order Sir. Under rule 146 (2) (f), a Member while speaking must not reflect on any determination of the Assembly except on a motion for amending or rescinding it. I am afraid whether the Hon'ble Member can move this resolution without affecting a decision already taken by the Assembly. The Mysore Legislative Assembly has already come to a decision with regard to salaries of the Members of this House. If at all, the Member might bring an amendment to the Act which is already passed by the Assembly. Apart from this, Article 195 of the Constitution of India says that all the Members of the Assembly and the Legislative Council of a State shall be entitled to receive such salaries and allowances as may from time to time be determined by the Legislature of a State by law. The Mysore Legislative Assembly, by law, has determined the salaries of Hon'ble Members of this House and anything said against will be offending the determination or the decision of the Legislative Assembly. The only course open d to the Hon'ble Member was to have sponsored an amendment under article 207 with the permission of the Rajpramukh. Article 207 says:

> "A Bill or amendment making provision for any of the matters specified in sub-clauses (a) to (f) of clause (1) of article 199 shall not be introduced or moved except on the recommendation of the Governor,.....".

So, in case any Member of this House wanted to move an amendment to this Act, he should have taken the permission of the Rajpramukh of the State. The Member cannot be permitted to move this resolution without affecting the determination of the Assembly. I therefore request the Chair to give a ruling on this subject.

Mr. SPEAKER.—What is the determination of the Assembly so far on this matter ?

Sri M. MADIAH.—Under rule 146 (2) (f) a Member while speaking must not reflect on any determination of the Assembly. The determination of the Assembly is that every Member of this House should be paid Rs. 100 in the form of salaries.

Sri Mulka GOVINDA REDDY.—So far the Assembly has not determined.

Sri M. MADIAH.—It has determined and the resolution contemplates that the salary of Rs. 100 should be stopped. By allowing this resolution, the Hon'ble Member will have to begin his speech by saying that the salary allowed to the Hon'ble Members of this House should be stopped, which means he will be casting a reflection on the determination of the Assembly. As per article 195 the Assembly has determined and there is an alternative also suggested in rule 146: "except on a motion for amending or rescinding it". Under this rule he will have to bring in an amending Bill. The Hon'ble Member cannot therefore offer his remarks on this subject. Therefore, I request the Chair to give a ruling on this point.

Sri H. S. RUDRAPPA (Honnali).—Sir, I rise to a point of order, though not on the same grounds urged by my Hon'ble friend Sri M. Madiah, for the reason that the new Assembly as constituted is entitled to determine its salary or allowances as it likes. Under the provisions of article 195 and article 238, this Assembly is entitled to determine the salary of the Members of this Assembly. Therefore, the resolution sponsored by Sri Shankar Linge Gowda is not in order. Although this House is entitled to determine the salary or allowances, it cannot be done by means of a resolution. It can be done only by law, *i.e.*, by means of a Bill which should be sponsored and not by a resolution like this. That is one thing.

Another important point is, that the Government have sponsored legislation a few days ago to fix the allowances and salaries of the Members and that Bill has been referred to a Select Committee. Therefore no resolution concerning the same subject-matter can be moved now, because that matter has been referred to the Select Committee.

*Speeches indicated by asterisk have not been revised by the Members concerned.

(SRI H. S. RUDRAPPA).

And even otherwise, this resolution cannot be sponsored for the simple reason that the salaries and allowances of Members cannot be determined by a resolution of this House. Therefore, I draw your kind attention to article 195 and 238 of the Constitution Sir.

(Sri M. Madiah rose again)

Sri M. SHANKAR LINGE GOWDA.—There is a point of order Sir. The same Member is speaking twice.

Mr. SPEAKER.—Sri Madiah, have you finished your speech?

Sri M. L. LINGANNA (Nanjangud).—Sir, in upholding the point of order raised by Sri H. S. Rudrappa, I wish to draw the attention of the mover of the Resolution to the fact that some days back a Bill had been placed before this House and referred to a Select Committee. The Hon'ble Member who has tabled this resolution is also a member of that Select Committee. As such it is advisable and also feasible in the interest of the business of this House being carried on in proper manner that the Hon'ble Member who has tabled this resolution may abstain from moving this resolution. He can ventilate his views before the Select Committee. The point whether the Members are entitled to Rs. 100, Rs. 200 or no salary or Batta is a matter that he can express before the Select Committee and convert the other members of the Select Committee into his views. Even if the resolution is allowed to be moved, it will merely mean a repetition of the views of the particular Member in regard to this matter. So I submit that the Hon'ble Member may be pleased to abstain from moving or withdraw his resolution.

Sri K. PATTABHI RAMAN (Kolar).—Mr. Speaker, I think we are now having very interesting discussion; for the reasons sponsored by my friend Sri H. S. Rudrappa and in view of article 146 (1) (f) I want to say that both points of order have to be ruled out and Sri Shankarlinge Gowda permitted to proceed. My submission is this, Sir.

You will be pleased to see that taking a clue from Sri H. S. Rudrappa's submission to this House, the right of the Assembly to determine the salary of the Members of this Assembly stands supreme and that has to be done at the beginning of the Session. Secondly, reliance has been placed upon rule 146 (2) (f) which says: "reflect on any determination of the Assembly except on a motion for amending or rescinding it". There has been no such determination, and it is not contemplated in the rules that simultaneously a bill is sponsored by the Government and a resolution by a Member on the same matter this House, seized of both, should not proceed with them simultaneously. That will be reading something into the rules which is not permitted.

Sri M. MADIAH—Sir, I want to point out..... ...

Mr. SPEAKER.—I cannot understand why the Hon'ble Member is in such a hurry.

Sri K. PATTABHIRAMAN.—And further, we have merely to see from the Rules of Procedure and Conduct of Business, what is the legislative competence of this House and what is the scope of moving a resolution. Now that a resolution has been tabled, admitted and is before this House, it is very clear that the right of the Member to move a resolution cannot be taken away unless there is a specific prohibition. As a matter of fact, the general principle in these matters should be to interpret the rules in such a manner as to enable a Member to exercise his right rather than to take away a right which otherwise existed. By that canon of interpretation, one should judge and see that so long as these rules in regard to the scope of resolutions are satisfied, they will be quite in order. I perfectly appreciate the suggestion made by Sri M. Linganna. He appealed to the Hon'ble Mover that he may abstain from moving this resolution and it is for him to decide. Nevertheless, the question facing this House and the issue before us now is whether the resolution can be moved and I am saying this because, now we are going to lay down a very important precedent if this point of order is sustained by the Speaker; because, that will be taking away the right of a Member of this House to

move resolutions. There are two things before the House, namely, a bill sponsored by the Government awaiting determination and a resolution by a Member of this House. To say that a resolution should not be moved simultaneously when a Bill is before the House is to read something into the Rules which is certainly not permissible. On these grounds, I submit that the points of order raised cannot be sustained. Sri Shankarlinge Gowda's right stands supreme and he must be permited to proceed.

Sri M. PALANIYAPPAN (Ulsoor).—Sir, I raise another point of order. Rule 140 says:

> "A motion must not raise a question substantially identical with one on which the Assembly has given a decision in the same session."

Already a few days back, the Hon'ble Minister was pleased to introduce a bill in the Assembly and that bill has been referred to a Select Committee. Sri Shankarlinge Gowda also is a member of that Select Committee and this resolution pertains to the same question. So, I think it is superfluous under Rule 140 and I suggest that it may be ruled out of order.

Sri B. NARAYANASWAMY (Mysore South).—Mr. Speaker, in my opinion the points of order raised by my friends Sri Madiah and Sri H. S. Rudrappa are perfectly justified, for the simple reason that under Rule 146 (2) there has been a determination of this House to refer the matter to a Select Committee and no Member can anticipate the decision of that Select Committee. Sri Shankarlinge Gowda's resolution would be counter to the decision that has already been taken by this Assembly that the matter should be referred to the Select Committee. Under these circumstances, it would be very difficult for this House to decide at this stage regarding the question that my friend Sri Shankarlinge Gowda has raised. So that point which Sri Pattabhiraman has said, namely, that 146 (2) cannot apply, cannot hold water. His argument that there is no determination cannot be correct because there is already a determination of this House and that is to refer the matter to the Select Committee. As such the resolution that is now going to be moved by Sri M. Shankarlinge Gowda cannot be moved and it may be disallowed.

Sri Mulka GOVINDA REDDY (Chitaldrug).—The point of order raised by my friend Sri Madiah is not in order. This House has not determined the salaries of the Members of the Assembly. Rule 140 to which the attention of the House has been drawn by one of the Hon'ble Members, says:

> "A motion must not raise a question substantially identical with one on which the Assembly has given a decision in the same session."

This Assembly has not given any decision with regard to this. So, this Rule 140 does not apply. Sri Shankarlinge Gowda is perfectly justified in moving this resolution. A right which has been guaranteed under these Rules of Procedure should not be taken away by the point of order raised by Sri Madiah. I uphold what Sri Shankarlinge Gowda says and the right that has been conferred on him should be given to him.

Mr. SPEAKER.—According to Rule 146 clause 2 (f) read along with Rule 102 (a), Sri Shankarlinge Gowda's resolution is in order because it is only an expression of opinion. It may be, as one Hon'ble Member pointed out, very desirable on his part not to move this resolution in view of the fact that he happens to be a member of that Select Committee. To avoid all these subtle differences of opinion at this stage, it may be very desirable on his part not to move it. However, it is left to him.

* ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಸ್ಯಾಮಿ ನಾನು ತಂದಿರತಕ್ಕ ನಿರ್ಣಯದಲ್ಲಿ ನಾನು ಹೇಳಿರತಕ್ಕದ್ದು ಇಷ್ಟೇ ವಿಚಾರ.—

> "ವಿಧಾನ ಸಭೆಯು ಸದಸ್ಯರಲ್ಲಿ ಪ್ರತಿಯೊಬ್ಬರಿಗೂ ಮಾಹೆಯಾನ 100 ರೂಪಾಯಿ ಸಂಬಳ ಕೊಡುವುದನ್ನು ನಿಲ್ಲಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಎಂದು ನಾನೇನೋ ಈ ಠರಾವನ್ನು ಮಂಡಿಸುತ್ತೇನೆ.....

Mr. SPEAKER.—No further discussion about this rule. The Member may either move the resolution or not.

Sri M. SHANKARLINGE GOWDA.—I move the resolution.

ಇದರಲ್ಲಿರುವುದೇನೆಂದರೆ –ನಾನು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರುಗಳೂ ದೇಶದಲ್ಲಿರತಕ್ಕೆ ಜನರ ಮುಂದೆ ಓಟನ್ನು ಗಳಿಸಲು ಹೋಗಿದ್ದ ಕಾಲದಲ್ಲಿ ನಾವು ಅವರಿಗೆ ನಮ್ಮ ಸೇವೆಯನ್ನು ಯಾವ ಪ್ರತಿಫಲವೂ ಇಲ್ಲದೆ ಎಂದರೆ non-official ಆಗಿ ಸಂಬಳಸಾರಿಗೆ ತೆಗೆದುಕೊಳ್ಳದೆ ಮಾಡುತ್ತೇವೆಂದು ನಮ್ಮನ್ನು ಚುನಾವಣೆಮಾಡಿ ಕಳುಹಿಸಿರತಕ್ಕವರ ಮುಂದೆ ಹೇಳಿದ್ದೇವೆ. ಹೀಗೆ ಅನೇಕರು ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಆದರೆ ಈ ಬಿಲ್ಲಿನಲ್ಲಿ ಸಂಬಳ ಎನ್ನುವ ಪದವನ್ನೇನೂ ತಾವು ಇವಕ್ಕೆ ಬಳಸಿರುವುದಿಲ್ಲ. ಆದಾಗ್ಯೂ ನಾನು ಮಾತ್ರ ಈ ನೂರು ರೂಪಾಯಿಗಳನ್ನು ಸಂಬಳ ಎಂದು ಕೊಡುವುದಾದರೆ ನಾನು ಇದನ್ನು ಖಂಡಿತ ತೆಗೆದು ಕೊಳ್ಳುವುದಿಲ್ಲವೆಂಬುದಾಗಿ ಹೇಳಿದ್ದೇನೆ. ಹೀಗೆ ಹೇಳತಕ್ಕ ಹಕ್ಕೂ ನನಗೆ ಇರುವುದರಿಂದ ಇದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ನಾನು ಈ ನಿರ್ಣಯವನ್ನು ತಂದಿರತಕ್ಕ ಉದ್ದೇಶ, ಈ ನೂರು ರೂಪಾಯಿ ಸಂಬಳವನ್ನು ಏತಕ್ಕಾಗಿ ತೆಗೆದುಕೊಳ್ಳಬೇಕು, ಎಂಬುದನ್ನು ತಿಳಿದುಕೊಳ್ಳುವುದಕ್ಕೆ. ಆದರೆ ದುಡ್ಡು ಸಿಕ್ಕುತ್ತೆಂದರೆ ಯಾರು ಬೇಡವೆನ್ನುತ್ತಾರೆ? ಆದರೆ ಅದಕ್ಕೂ ಒಂದು ಕಾರಣಬೇಕು. ಹೀಗೆ ನಾವು ಈ ದುಡ್ಡನ್ನು ತೆಗೆದುಕೊಂಡರೆ ಏನುಕೆಲಸ ಮಾಡಬೇಕು? ಆದನ್ನು ತಾವು ನಿಗದಿ ಮಾತಿಲ್ಲ. ನಾವು ನಾನ್ ಆಫಿಷಿಯಲ್ ಆಗಿದ್ದುಕೊಂಡು 100ರೂ ಸಂಬಳ ತೆಗೆದು ಕೊಂಡರೆ, ಅದಕ್ಕೆ ಸ್ಯಾಲರಿ ಎಂದು ಏಕೆ ಹೆಸರಿಡಬೇಕು? ನಾನು ನನ್ನಪಾಡಿಗೆ ಈ ನಿರ್ಣಯವನ್ನೇನೋ ಕಳುಹಿಸಿದೆ. ನಾನು ಹೇಳತಕ್ಕದ್ದೇನೆಂದರೆ—ಇದೆರ್ನಾ ಪ್ರಜೆಗಳ ದುಡ್ಡು. ಈ ದಿವಸ ಇದು 100ರೂಗಳಿಗೆ ನಿಂತಿದೆ ನಾಳೆ ನಾವು ಇದನ್ನು 150 ರೂ. ಗೆ ಹೆಚ್ಚು ಮಾಡಿಕೊಂಡರೂ ಮಾಡಿಕೊಳ್ಳಬಹುದು. 200–250 ರೂ. ವರೆಗೂ ಹೆಚ್ಚಿಸಿಕೊಂಡು ಹೋಗಬಹುದು. ನಾವು ಹೀಗೆ ಇಷ್ಟಪಟ್ಟರೆ ಏನು ಬೇಕಾದರೂ ಮಾಡುವುದಕ್ಕಾಗುತ್ತದೆ. ಆದರೆ ಈ ಸಂಬಳ ಎನ್ನುವುದು ಅಷ್ಟು ಗೌರವಯುತವಾದ್ದೆಂದು ನನಗೆ ಕಂಡುಬರುವುದಿಲ್ಲ. ಈ ರೀತಿಯ ಅಧಿವೇಶನಗಳು ನಡೆಯುವುದಕ್ಕೆ ಮೊದಲು ಪ್ರಾರಂಭವಾದದ್ದು 1881ನೇ ಇಸವಿಯಿಂದ. ಹಾಗೆ 1881ನೇ ಇಸವಿಯಲ್ಲಿ ಹುಟ್ಟಿದ ಅಸೆಂಬ್ಲಿಗೆ ನಾನು ಸದಸ್ಯನಾಗಿ ಬಂದು 15ಸೇರು ಅಕ್ಕಿಗೆ ಕೆಲಸಮಾಡಿ ಹೋಗಿದ್ದೇನೆ. ಅನಂತರ ಒಂದು ಮಿಟಿಂಗಿಗೆ 3 ರೂಪಾಯಿಗಳಂತೆ ಪಡೆದು ಕೆಲಸ ಮಾಡಿದ್ದಾರೆ. ಅನಂತರ ಅದನ್ನು 5 ರೂ. ಗೆ ಹೆಚ್ಚುಮಾಡಲಾಯಿತು. ಅನಂತರ ಮಾಧವ ರಾಯರ ಕಾಲಕ್ಕೆ 10 ರೂಪಾಯಿಗಳಾಯಿತು. ನಾವು ಇಲ್ಲದ ಕಾಲದಲ್ಲಿ ನಮ್ಮನ್ನು ಡಿಸ್ ಮಿಸ್‌ಮಾಡಿ ಓಡಿಸಿಬಿಟ್ಟು ನೀವು ಅದನ್ನು 15 ರೂಪಾಯಿಗಳಿಗೆ ಹೆಚ್ಚಿಸಿಕೊಂಡು ಬಿಟ್ಟಿರಿ. ಅನಂತರ ಈಗ 100ರೂ. ಸಂಬಳಕ್ಕೆ ದಾರಿ ಮಾಡಿದ್ದೀರಿ.

ಅಧ್ಯಕ್ಷರು.—ತಾವು ಹಾಗೆ ಡಿಸ್‌ಮಿಸ್, ಓಡಿಸಿಬಿಟ್ಟಿರಿ ಎಂಬ ಪದಗಳನ್ನು ಉಪಯೋಗ ಮಾಡಬಾರದು. ನಿಮ್ಮನ್ನು ಯಾರೂ ಡಿಸ್‌ಮಿಸ್ ಮಾಡಲಲ್ಲ.

ಶ್ರೀ ಎಂ. ಶಂಕರಲಿಂಗೇ ಗೌಡರು.—ಇಂಗ್ಲೀಷನ್ನು ಹೇಳವಾಗ ಎಲ್ಲೋ ಸ್ವಲ್ಪವ್ಯತ್ಯಾಸವಾಯಿತು, ಸ್ವಾಮಿ. ಅದೇನೋ 'ಡಿಸ್ಪೆಸ್ಟ್ ಎತ್' ಎಂದು ಹೇಳುತ್ತಾರಲ್ಲಾ. ಅದರ ಎರಡು ಪದಗಳ ಅರ್ಥವೂ ಒಂದೇ. ಆದರೆ ಇಲ್ಲಿರತಕ್ಕವರಾರೂ ಹಾಗೆ ಡಿಸ್‌ಮಿಸ್ ಆಗಲಿಲ್ಲ. ಅದವನು ನಾನೊಬ್ಬಮಾತ್ರ.

ಆದರೆ ನಾನು ತಮ್ಮಲ್ಲಿ ಕೈಮುಗಿದು ಅರಿಕೆಮಾಡಿ ಕೊಳ್ಳುತ್ತೇನೆ—ನಿಜವಾಗಿಯೂ ಇದು ಬಹಳ ಕಷ್ಟದ್ದು, ನಮಗೆ ಅಪಮಾನಕರವಾದದ್ದು, ನಾವು ನಮ್ಮ ಕೈರಾದ ಸೇವೆಯನ್ನು ದೇಶಕ್ಕೆ ಮಾಡಲು ಹೀಗೆ ಒಂದು ಸಂಬಳ ಪಡೆಯುವುದು ನಮ್ಮ ಗೌರವಕ್ಕೆ ತಕ್ಕದ್ದಲ್ಲ. ಇದನ್ನು ಯಾರೂ ತೆಗೆದುಕೊಳ್ಳಬಾರದು. ನಮಗೆ ಈಗ ಕೊಡುತ್ತಿರುವ ದಿನ ಭತ್ಯ 15ರೂಪಾಯಿಗಳೇ ಸಾಕು. ಇದರ ಜೊತೆಗೆ ಡಬ್ಬರ್ ಫಸ್ಟ್‌ಕ್ಲಾಸ್ ಇಟ್ಟಿದ್ದರೆ ಸಾಕು.

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಅದು ಮಾತ್ರ ನಮಗೆ ಬೇಕೋ! ಏತಕ್ಕೆ? ಅದು ತಾನೇ ಏತಕ್ಕೆ!

ಶ್ರೀ ಎಂ. ಶಂಕರಲಿಂಗೇ ಗೌಡರು.—ಡಬ್ಬರ್ ಫಸ್ಟ್ ಕ್ಲಾಸ್ ಏತಕ್ಕೆಂದರೆ, ನಾವು ಬಂದು ಇಲ್ಲಿ ಕೆಲಸಮಾಡುವುದಕ್ಕೆ. ನಮಗೆ ಸಿಕ್ಕುವ 100 ರೂಪಾಯಿಗಳ ಸಂಬಳ ಮನೆಗೆ ಅಕ್ಕಿ ಬೇಳೆಗೆ ಹೋಗುತ್ತದೆ. ನಿಮ್ಮಹಾಗೆ ಇಲ್ಲಿ ಕುಳಿತು ಮಂತ್ರಿಗಳಾಗಿ ಕೆಲಸಮಾಡತಕ್ಕವರಿಗೆ ನೋ ಈ ಸಂಬಳ ಇರಬೇಕಾದದ್ದು ನ್ಯಾಯ ಮತ್ತು ಅಗತ್ಯ. ನಾವು ಇಲ್ಲದ್ದು ಕೆಲಸಮಾಡುವುದಕ್ಕೆ ನಮಗೆ ಕೊಡತಕ್ಕ 15 ರೂಪಾಯಿಗಳೇ ಸಾಕು. ಅದರ ಮೇಲೆ ಈ ಸಂಬಳಬೇಕೆಂದು ಕೇಳುವುದು ಮನೆಯಲ್ಲಿ 6ತಿಂಗಳ ಅಕ್ಕಿ ಬೇಳೆಯ ಬರ್ಡೀನೇನು! ಮೆಂಬರಾಗತಕ್ಕವರು ಸಂಬಳ ಇದ್ದರೂ ಕೆಲಸಮಾಡಬೇಕು, ಸಂಬಳವಿಲ್ಲದಿದ್ದರೂ ಕೆಲಸ ಮಾಡಬೇಕು. ಮೆಂಬರಾಗಿ ಕೆಲಸಮಾಡತಕ್ಕವರಿಗೆ ಒಂದು ಗೌರವವಿದೆ. ನಾನು ಒಬ್ಬಮೆಂಬರು ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ ವಿಚಾರ. ಅಂಥ ಒಂದು ಗೌರವದಿಂದ ಭೂಷಣದಿಂದ ಇರುವುದನ್ನು ಬಿಟ್ಟು ಸಂಬಳಕ್ಕೆ ಕೈಚಾಚುವುದು ಎಷ್ಟು ಅವಮಾನಕರ! ಇದನ್ನು ತಾವೆಲ್ಲರೂ ಆಲೋಚನೆಬೇಕು. ನಾವೂ ಎರ್ನಾನ್‌ಆಫಿಶಿಯಲ್‌ರಂತೆ ಸಂಬಳ ತೆಗೆದುಕೊಂಡರೆ ನಮ್ಮ ಮಾತನ್ನು ಯಾವ ಆಫೀಸಿನಲ್ಲಿಯೂ ಯಾರೂ ಕೇಳದಂತೆ ಆಗುತ್ತದೆ. ಹಾಗೆ 100ರೂಪಾಯಿ ಸಂಬಳ ತೆಗೆದು ಕೊಂಡಮೇಲೆ ನಾವು ಮಾಡುವ ಕೆಲಸವಾದರೂ ಏನು? ಆದರೆ ತಾವೆಲ್ಲರೂ ತಮ್ಮ ತಮ್ಮ ಚುನಾವಣೆ ಕ್ಷೇತ್ರದಲ್ಲಿ ಜನರ ಮುಂದೆ ಹೇಗೆ ಹೇಗೆ ಹೇಳಿ ಬಂದಿದ್ದೀರೋ ಹಾಗೆ ಮಾಡಿ. ನಾನೇನೋ ನನ್ನ ಕ್ಷೇತ್ರದಿಂದ ಚುನಾವಣೆ ಯಾಗಿ ಬರತಕ್ಕ ಕಾಲದಲ್ಲಿ ನಾನು ಸಂಬಳ ತೆಗೆಕೊಳ್ಳುವುದಿಲ್ಲವೆಂದು ಹೇಳಿ ಬಂದಿರುವುದರಿಂದ ಈಗ ನನಗೂ ಇಲ್ಲಿ ಸಂಬಳಕೊಡಿ ಎಂದು ಕೇಳಿದರೆ, ನಾನು ಪುನಃ ನನ್ನ ಕ್ಷೇತ್ರಕ್ಕೆ ಹೋದಾಗ ಅವರು ಅಲ್ಲಿ ಪರಕೆ ತೆಗೆದುಕೊಂಡರೆ ನಾನೇನು ಹೇಳಬೇಕು ಆಗ ಅವರಿಗೆ! ಹಾಗೆ ನಾನು ಈ ನೂರು ರೂಪಾಯಿಗಳನ್ನು ತೆಗೆದು ಕೊಳ್ಳಬೇಕಾದರೆ ಇದಕ್ಕೆ ಪದ ಬದಲಾವಣೆ ಮಾಡ ಬೇಕು. ಆದರೆ ನಾವು ಜನರ ಮೆಚ್ಚುಗೆಗಾಗಿ ಕೆಲಸ ಮಾಡುತ್ತೇವೆಂದು ಇಲ್ಲಿ ಬಂದು ಈಗ ಸಂಬಳ ತೆಗೆದು ಕೊಳ್ಳುತ್ತೇವೆಂದರೆ ಇದನ್ನು ಯಾರೂ ಒಪ್ಪರಾರರು. ಆದ್ದರಿಂದ ದೇಶಸೇವೆ ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗುವ ಬದಲು ಸಂಬಳ ಕೇಳುವುದು ಸರಿಯಲ್ಲ. ಈ ಕಾರಣ ಶಂಕರಲಿಂಗೇಗೌಡನಾದ ನಾನು ಸಂಬಳ ಏಕೆ ತೆಗೆದುಕೊಳ್ಳಬೇಕು? ನಾನೇನೋ ತೆಗೆದು ಕೊಳ್ಳುವುದಿಲ್ಲ, ನೀವೂ ಬಿಟ್ಟುಬಿಡಿ ಎಂದರೆ ಅದೊಂದು ಕ್ರಿಯಾರೋಪವೆಂದು ದೂರು ತರುತ್ತೀರಿ.

4 P.M.

ಹೀಗೆ ಸಂಬಳವನ್ನು ನಿಗದಿ ಮಾಡುವ ಕಾಲದಲ್ಲಿ ಪಾರ್ಲಮೆಂಟಿನಲ್ಲಿ ಈ ವಿಷಯ ಬಂದು ಚರ್ಚೆಯಾಗಿದೆ. ಸಂಬಳ ಏಕೆ ತೆಗೆದುಕೊಳ್ಳಬೇಕೆಂದು ಕೇಳಿ ಒಬ್ಬ ಸದಸ್ಯರು ಕೂಡದೆಂದು ವಾದ ಮಾಡಿದ್ದಾರೆ, ಅದಕ್ಕೆ ಬೆಂಬಲ ದೊರೆತಿದೆ. (ಆ ಸದಸ್ಯರ ಹೆಸರು ಜ್ಞಾಪಕ ವಿಲ್ಲದೆ ಅಕ್ಕ ಪಕ್ಕದ ಸದಸ್ಯರನ್ನು ಕೇಳುತ್ತಿದ್ದರು.)

Mr. SPEAKER.—The Member should not address other Hon'ble Members directly. He must always address the Chair. I shall have to ask the speaker to resume his seat if he goes on addressing other Hon'ble Members directly.

ಶ್ರೀ ಶಂಕರಲಿಂಗೇಗೌಡರು.—ಸಂಬಳ ಕೊಟ್ಟು ಅಡ್ಜೈಜರಾಗಿ, ಸತ್ಯ ನಿಷ್ಠೆಯಿಂದ, ಬಂದಿರುವ ಕ್ಷೇತ್ರದ ಪರವಾಗಿ ನಡೆದುಕೊಳ್ಳಬೇಕೆಂದು ಪ್ರಜಾ ಪ್ರಭುತ್ವ ಸರ್ಕಾರದವರು ಒಂದು ಬಲ್ಲನ್ನು ತಂದರು. ಆ ಕಾಲದಲ್ಲಿ 100 ವೌಂಡುಗಳು ಕೊಡುವುದೇಕೆಂದು ಕೇಳಿದಾಗ ಆ ರೀತಿಯಾಗಿ ಉದ್ದೇಶವನ್ನು ಹೇಳಿದರು. ಹಾಗೆ ಕೊಡುವುದು ತಪ್ಪು ಎಂದು ವಾದಿಸಿದ ಮೇಲೇ ಆಗ 1862ನೆಯ ಇಸವಿಯ ಪಾರ್ಲಮೆಂಟಿನಲ್ಲಿ ಅದು ಅಂಗೀಕಾರವಾಗಲಿಲ್ಲ. ಆಗ ನಾಲ್ಕೈದು ಜನರಿದ್ದರು. ಈಗ 25 ಜನರು ವಿರೋಧ ಪಕ್ಷದಲ್ಲಿದ್ದಾರೆ. ಹಿಂದಿನಿಂದಲೂ ಈ ಪದ್ಧತಿ ಇದ್ದೇ ಇದೆ.

Sri B. HUTCHE GOWDA.—We are not sure that it will stop at Rs. 100.

ಶ್ರೀ ಎಂ. ಶಂಕರಲಿಂಗೇಗೌಡರು.—ಈಗ ನಾನು ನೂರು ರೂಪಾಯಿ ಸಂಬಳ ಎಂಬ ಪದವನ್ನು ಒಪ್ಪುವುದಿಲ್ಲ. ಸಂಬಳ ಎಂಬುದು ಆಗೌರವವೆಂದು ತಿಳಿದು ಈ ನಿರ್ಣಯ ತಂದಿದ್ದೇನೆ. ಸಂಬಳ ಎಂಬ ಪದವನ್ನು ಸೆಲೆಕ್ಟ್ ಸಮಿತಿಯವರು ಹೊಡೆದುಹಾಕಿ ಅರೋಯೆನ್ಸ್ ಎಂದು ಮಾಡಿದರೆ ಪರವಾಗಿಲ್ಲ. (ಸಭೆಯಲ್ಲಿ ನಗು) ಈ ನೂರು ರೂಪಾಯಿಗಳನ್ನು ದೇಶ ಸೇವೆ ಮಾಡುವವರು ತೆಗೆದುಕೊಳ್ಳಬಾರದು. ಇದರಿಂದ ಉಳಿತಾಯವಾಗುವ ಒಂದು ಲಕ್ಷ ರೂಪಾಯಿಗಳನ್ನು ಇತರ ಉಪಯುಕ್ತವಾದ ಕೆಲಸಗಳಿಗೆ ಉಪಯೋಗಿಸಿದರೆ ಎಷ್ಟೋ ಪ್ರಯೋಜನವಾಗುತ್ತದೆ. ಇದನ್ನು ಕೊಡಬಾರದು. ಕೋರಾರದಲ್ಲಿ ಕ್ಷಾಮದಿಂದ ಅನಾನುಕೂಲವಾಗಿರುವ ಪ್ರಜೆಗಳಿಗಾದರೂ ಅನುಕೂಲವಾಗಲಿ ಎಂಬ ಒಂದು ಉದ್ದೇಶದಿಂದ ಈ ನೂರು ರೂಪಾಯಿಗಳ ಸಂಬಳ ಬೇಡವೆಂದು ನೂಚಿಸಿದ್ದೇವೆ. ಆದ್ದರಿಂದ ಎಲ್ಲರೂ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Resolution moved:

> "That this Assembly is of the opinion that payment of salary of Rs. 100 per month for each Member of the Legislative Assembly be stopped."

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ವರು (ಟಿ. ನರಸೀಪುರ).—ಸ್ವಾಮಿ, ಶ್ರೀ ಶಂಕರಲಿಂಗೇಗೌಡರು ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಅಭಿಪ್ರಾಯಗಳನ್ನು ನಥೆಯ ಮುಂದಿಡುತ್ತೇನೆ. ಶಾಸನಸಭಾ ಸದಸ್ಯರುಗಳಿಗೆ ವೇತನವನ್ನು ಕೊಡುವುದು ಬಹಳ ಅಧರ್ಮವಾದ ಕೆಲಸ; ಏಕೆಂದರೆ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಖಾಸಗೀ ಮನುಷ್ಯರಾಗಿದ್ದರೂ ಈ ವೇತನ ಪಡೆಯದೆ ಸೇವೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಸೇವೆ ಮಾಡುವವರು ಸಂಸ್ಥಾನದಲ್ಲಿ ಅನೇಕ ಜನರಿದ್ದಾರೆ. ವೇತನವನ್ನು ಪಡೆದು ಸೇವೆ ಮಾಡಬೇಕಾದ ಅಗತ್ಯವಿಲ್ಲ. ವೇತನ ಕೊಡುವುದರಿಂದ ಸಂಸ್ಥಾನಕ್ಕೆ ಖರ್ಚು ಬೀಳುವ ಸುಮಾರು ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು ನಿಲ್ಲಿಸಿದರೆ ಅದು ಬೇರೆ ಉಪಯುಕ್ತವಾದ ಕಾರ್ಯಗಳಿಗೆ ಉಪಯೋಗವಾಗುತ್ತದೆ. ಈ ವಿಚಾರದಲ್ಲಿ ಸೆಲೆಕ್ಟ್ ಸಮಿತಿಯು ವರದಿ ಬರಬೇಕಾಗಿದೆ. ಅವರು ಇನ್ನೂ ಏನೂ ತೀರ್ಮಾನ ಮಾಡಿಲ್ಲ. ಆದರೆ ಆ ಸಮಿತಿಯ ವರದಿ ಬಂದರೆ ವೇತನದ ಮೊಬಲಗು ಹೆಚ್ಚಬಹುದು ಅಥವಾ ಇದ್ದಹಾಗೆಯೇ ಇರಬಹುದು. ಇಷ್ಟುಹಣವನ್ನು ವೇತನ ರೂಪವಾಗಿ ಪಡೆದು ಸೇವೆ ಮಾಡಬೇಕೆಂಬ ಮನೋಭಾವವನ್ನು ಒಪ್ಪುವುದಕ್ಕಾಗುವುದಿಲ್ಲ. ಇದರ ಬದಲು ಈ ಮೊಬಲಗನ್ನು ಅನೇಕ ನೀರಾವರಿ ಕಾಮಗಾರಿಗಳಿಗಾಗಲಿ, ಆಗಬೇಕಾದ ಇತರ ಕೆಲಸಕಾರ್ಯಗಳಿಗಾಗಲಿ ಬಜೆಟ್ಟಿನಲ್ಲಿ ಒದಗಿಸಿದರೆ ಬೇಕಾದಷ್ಟು ಸೆಳೆ ಬೆಳೆದು ಅನ್ನದ ಅಭಾವವನ್ನು ನೀಗಬಹುದು ಮತ್ತು ಪ್ರಜೆಗಳಿಗೂ ಸಂತೋಷದಾಯಕವಾಗಿರುತ್ತದೆ. ಆದ್ದರಿಂದ ಮನಃಪೂರ್ವಕವಾಗಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

Sri A. G. RAMACHANDRA RAO (Minister for Law and Education).—Sir, I oppose this motion for two reasons. This subject matter is before the Legislature and a Bill has been introduced and is referred to a Select Committee. Therefore in the first instance it may not be desirable to take it up for discussion at this stage. In the second place, I feel that this resolution is *ultra vires* of the Constitution. Because the Bill has been there, this resolution has come in this form.

Sri S. SRINIVASA IYENGAR.—A ruling has been given.

Sri A. G. RAMACHANDRA RAO.—I do not refer to that. It is incumbent on this House under the Constitution of India to fix up salaries and allowances and every Member is entitled to it. I just read for the edification of this House, article 195 of the Constitution of India.

> "Members of the Legislative Assembly and the Legislative Council of a State shall be entitled to receive such salaries and allowances that may from time to time be determined by the Legislature of a State by law and until provision in that respect is so made, salaries and allowances at such rates and upon such conditions as were immediately before

(SRI A. G. RAMACHANDRA RAO).

the commencement of this Constitution, applicable in the case of members of the Legislative Assembly of the corresponding Province."

Therefore it is an obligation on the part of this House to fix up salaries as well as allowances and this resolution cannot repeal this provision of the Constitution of India. So it is a right which the Member should exercise. He is entitled to ask or not to ask for it. In that view I request the Member to withdraw the resolution

Mr. SPEAKER.—What does the Member propose to do?

ಶ್ರೀ ಎಂ. ಶಂಕರಲಿಂಗೇಗೌಡರು.—ಸ್ವಾಮಿ, ನಾನು ನನ್ನ ಸ್ವಂತ ಅಭಿಪ್ರಾಯ.....

Mr. SPEAKER.—No speech is allowed. Is the Hon'ble Member going to withdraw or press the resolution? That is the point.

Sri M. SHANKARLINGE GOWDA.—Whatever may be the consequences, I am going to press the resolution.

Mr. SPEAKER.—The question is:

"That this Assembly is of the opinion that payment of salary of Rs. 100 per month for each Member of the Legislative Assembly be stopped."

The motion was negatived.

Sri M. LINGANNA (Nanjangud).—Sir, the next resolution is mine. In view of the assurance given by the Hon'ble Food Minister that a motion would be moved before this House about the food policy, I do not move my resolution.

No. 18.—Abolition of the Mysore Legislative Council.

Sri Mulka GOVINDA REDDY (Chitaldrug).—Sir, I move:

"That this Assembly is of the opinion that the Mysore Legislative Council be abolished with immediate effect."

ಸ್ವಾಮಿ, ಲೆಜಿಸ್ಲೇಟೀವ್ ಕೌನ್ಸಿಲ್ ಎಂಬುದು ಪಾರ್ಟ್ (ಬಿ) ಸ್ಟೇಟ್‌ಗಳಲ್ಲಿ ಮೈಸೂರಿನಲ್ಲಿ ಮಾತ್ರ ಇದೆ. ಪಾರ್ಟ್ (ಎ) ಸ್ಟೇಟ್‌ಗಳಲ್ಲಿ 9 ಸ್ಟೇಟ್‌ಗಳ ಪೈಕಿ 4 ಸ್ಟೇಟ್‌ಗಳಲ್ಲಿ ಇಲ್ಲ. ಇದರ ಜೊತೆಗೆ ಈಗ ನಾವು ಇಂಡಿಯಾ ದೇಶದ ರಿಪಬ್ಲಿಕ್‌ನ ಒಂದು ಯೂನಿಟ್ ಆಗಿದ್ದೇವೆ. ಅತಿಮುಖ್ಯವಾದ ವಿಷಯಗಳನ್ನು ಇಂಡಿಯನ್ ಯೂನಿಯನ್‌ಗೆ ಬಿಟ್ಟು ಕೊಟ್ಟಿದ್ದೇವೆ. ಡಿಫೆನ್ಸ್, ಕಮ್ಯುನಿಕೇಷನ್ಸ್, ಫಾರಿನ್ ಅಫೇರ್ಸ್ ಮತ್ತು ಫೈನಾನ್ಸ್, ಇವುಗಳನ್ನೆಲ್ಲಾ ನಾವು ಇಂಡಿಯಾ ಸರ್ಕಾರದವರಿಗೆ ಬಿಟ್ಟು ಕೊಟ್ಟಿದ್ದೇವೆ. ಆಕಾಶವಾಣಿಯನ್ನು ಬಿಟ್ಟುಕೊಟ್ಟಿದ್ದೇವೆ. ಇಲೆಕ್ಷನ್ಸ್‌ನ್ನು ಬಿಟ್ಟುಕೊಟ್ಟಿದ್ದೇವೆ. ನಮ್ಮ ದೇಶದ ರೈಲ್ವೆಯನ್ನು ಬಿಟ್ಟುಕೊಟ್ಟಿದ್ದೇವೆ. ಹೀಗೆ ನಾನಾವಿಧವಾದ ಅತಿಮುಖ್ಯ ವಿಷಯಗಳನ್ನೆಲ್ಲಾ ನಾವು ಇಂಡಿಯಾ ಸರ್ಕಾರದವರಿಗೆ ಬಿಟ್ಟು ಕೊಟ್ಟಿದ್ದೇವೆ. ಈಗ ಉಳಿದಿರುವ ವಿಷಯಗಳು ಬಹಳ ಕಡಿಮೆ ಇವೆ. ಇದಕ್ಕೆ 100 ಜನ ಇರತಕ್ಕ ಮೈಸೂರು ದೇಶದ ನ್ಯಾಯ ವಿಧಾಯಕ ಸಭೆ ಲೆಜಿಸ್ಲೇಟೀವ್ ಅಸೆಂಬ್ಲಿ ಏನಿದೆಯೋ ಅದೇ ಸಾಕಾಗಿದೆ. ನಮ್ಮ ದೇಶದಲ್ಲಿರತಕ್ಕ ಜನ ಸಂಖ್ಯೆ 90 ಲಕ್ಷ ಇದೆ. ನಮ್ಮ ದೇಶದ ಹೆಚ್ಚು ಕಡಮೆ ವರಮಾನ 12 ಕೋಟಿ ರೂಪಾಯಿ ಆಗಿದೆ. ಈ ಒಂದು 12 ಕೋಟಿ ರೂಪಾಯಿಗಳ ವರಮಾನವನ್ನು ಯಾವರೀತಿ ಖರ್ಚು ಮಾಡಬೇಕು, 90 ಲಕ್ಷ ಜನಗಳಿಗೆ ಯಾವರೀತಿ ಆದರಿಂದ ಅನುಕೂಲವಾಗ ಬೇಕು ಎಂದು ಹೇಳಿ ಅದರ ಆಗುಹೋಗುಗಳನ್ನು ತೀರ್ಮಾನ ಮಾಡುವುದಕ್ಕೆ ಈ ಸಭೆಗೆ ಬೇಕಾದಷ್ಟು ಹಕ್ಕು ಇದೆ. ಇರತಕ್ಕ ಹಕ್ಕನ್ನು ಈ ಸಭೆ ಚಲಾಯಿಸಿದರೆ ಸಾಕಾಗಿದೆ. ಮೈಸೂರು ದೇಶದ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಇರತಕ್ಕ ಅಧಿಕಾರವೂ ಕೂಡ ಬಹಳ ಕಡಮೆಯಾಗಿದೆ. ಆದರಿಂದ ದೇಶಕ್ಕೆ ಏನೂ ಅನುಕೂಲವಾಗುವುದಿಲ್ಲ. 40 ಜನ ಸದಸ್ಯರು ಇರುವುದಕ್ಕೆ ಅನುಕೂಲವಾಗುತ್ತದೆ, ಮೂರು ಲಕ್ಷ ರೂಪಾಯಿ ಇನ್ನೂ ಜಾಸ್ತಿ ಖರ್ಚಾಗುವುದಕ್ಕೆ ಅವಕಾಶ ಕಲ್ಪಿಸಿದ ಹಾಗೆ ಆಗುತ್ತದೆ. ಆದ್ದರಿಂದ ಜನಗಳಿಗೆ ಸಾರ್ಥಕವಾದ ಕೆಲಸ ಆಗುವುದಿಲ್ಲ. ಲೆಜಿಸ್ಲೇಟೀವ್ ಕೌನ್ಸಿಲ್‌ನ್ನು ತೆಗೆದು ಹಾಕಿ ಅದೇ ಮೂರು ಲಕ್ಷವನ್ನು ದೇಶದ ಏಳಿಗೆಗೆ, ಉನ್ನತಿಗೆ, ಬಡ ರೈತರ ಮತ್ತು ಕಾರ್ಮಿಕರ ಸೌಕರ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಉಪಯೋಗಿಸಬಹುದು. ಈ ಎಲ್ಲಾ ಕಾರಣಗಳಿಂದ ಲೆಜಿಸ್ಲೇಟಿವ್ ಕೌನ್ಸಿಲ್ ಇರುವುದು ನ್ಯಾಯವಾಗಿ ಇಲ್ಲವೇ ಇಲ್ಲ. ಅದರ ಜೊತೆಗೆ ನಮ್ಮ ದೇಶ ಹೇಗಿದ್ದರೂ ಇಂಡಿಯನ್ ರಿಪಬ್ಲಿಕ್‌ನ ಒಂದು ಯೂನಿಟ್ ಆಗಿದೆ. ಪಾರ್ಲಿಮೆಂಟ್ ಇದೆ, ಹೌಸ್ ಆಫ್ ದಿ ಪೀಪಲ್ ಇದೆ, ಕೌನ್ಸಿಲ್ ಆಫ್ ಸ್ಟೇಟ್ಸ್ ಇದೆ. ಯಾವುದಾದರೂ ಒಂದು ಅವಸರದ ಲೆಜಿಸ್ಲೇಷನ್ ಬಂದರೆ ಹೌಸ್ ಆಫ್ ದಿ ಪೀಪಲ್ ಇದೆ. ಅದನ್ನು ತಡೆಗಟ್ಟುವುದಕ್ಕೆ ನಿದಾನ ಮಾಡುವುದಕ್ಕೆ ಕೌನ್ಸಿಲ್ ಆಫ್ ಸ್ಟೇಟ್ಸ್ ಇದೆ. ಮೈಸೂರು ದೇಶದಲ್ಲೂ ಅದೇ ಪದ್ಧತಿ ಅನುಸರಿಸಬೇಕೆಂದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ, ಔಚಿತ್ಯ ಕಾಣುವುದಿಲ್ಲ. ಆದ್ದರಿಂದ ಲೆಜಿಸ್ಲೇಟೀವ್ ಕೌನ್ಸಿಲ್ ತಕ್ಷಣವೇ ರದ್ದು ಆಗ ಬೇಕೆಂದು ಹೇಳಿ, ಈ ನಿರ್ಣಯವನ್ನು ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Resolution moved:

"That this Assembly is of the opinion that the Mysore Legislative Council be abolished with immediate effect."

ಶ್ರೀ ಪಿ. ಆರ್. ರಾಮಯ್ಯನವರು.—On a point of order Sir. ಲೆಜಿಸ್ಲೇಟಿವ್ ಕೌನ್ಸಿಲ್

ನಿರ್ಮಾಣದ ವಿಚಾರ ಕಾರ್ಪಸ್ಟಿಟ್ಯೂಷ್ಟ್‌ಗೆ ಸೇರಿದ್ದು. ತಮ್ಮ ಸಭೆಗೆ ಸೇರಿದ್ದಲ್ಲ. ಕೇಂದ್ರದಲ್ಲಿ ಕಾರ್ಪಸ್ಟಿಟ್ಯೂಯಂಟ್ ಅಸೆಂಬ್ಲಿ ಗೊತ್ತು ಮಾಡಿದ್ದು ವಿಧಾನದ ಪ್ರಕಾರ ಅದು ನಿರ್ಮಾಣವಾಗಿದೆ. ಆದ್ದರಿಂದ ಈ ಸಭೆಗೆ ಈ ನಿರ್ಣಯವನ್ನು ಚರ್ಚಿಸಲು ಅಧಿಕಾರವಿಲ್ಲ. ಇದು ಈ ಸಭೆಯ ಪರಿಮಿತಿಗೂ, ಅಧಿಕಾರಕ್ಕೂ ಮೀರಿದ ವಿಚಾರವಾಗಿದೆ ಎಂದು ಹೇಳುತ್ತೇನೆ.

Sri S. SRINIVASA IYENGAR (T. Narsipur).—It is an expression of opinion and as such this House has a right to discuss the resolution.

Sri B. HUTCHE GOWDA (Turuvekere).—I wish to draw the attention of the House to article 169 (1) of the Constitution :

> "Notwithstanding anything in article 168, Parliament may by law provide for the abolition of the Legislative Council of a State having such a Council or for the creation of such a Council in a State having no such Council, if the Legislative Assembly of the State passes a resolution to that effect by a majority of the total membership of the Assembly and by a majority of not less than two-thirds of the members of the Assembly present and voting."

So this is in order.

Mr. SPEAKER.—It is only to have the views of the Legislature and it is admissible.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ಈಗಾಗಲೇ ಶ್ರೀಮಾನ್ ಗೋವಿಂದರೆಡ್ಡಿಯವರು ಹೇಳಿದಂತೆ ಪಾರ್ಟ್ (ಬಿ) ಸ್ಟೇಟ್‌ಗಳಲ್ಲಿ ಮೈಸೂರಿನಲ್ಲಿ ಮಾತ್ರ ರೆಜಿಸ್ಲೇಟಿವ್ ಕೌನ್ಸಿಲ್ ಇದೆ. ಅಲ್ಲದೆ ಪಾರ್ಟ್ (ಎ) ಸ್ಟೇಟ್‌ನಲ್ಲೂ ಕೂಡ ರೆಜಿಸ್ಲೇಟಿವ್ ಕೌನ್ಸಿಲ್ ರಚ್ಚುಮಾಡಬೇಕೆಂದು ಅನೇಕ ಕಡೆ ನಿರ್ಣಯಗಳು ಬಂದಿವೆ. ಒಂದು ಕಾರಣ, ಹಿಂದೆ ಫೈನೂರಿನಲ್ಲಿ ರೆಜಿಸ್ಲೇಟಿವ್ ಕೌನ್ಸಿಲ್ ಇತ್ತು ಎಂದು ಹೇಳಿದ್ದಾರೆ. ಆಗ ಇದ್ದ ಸನ್ನಿವೇಶವೇ ಬೇರೆ. ಪ್ರಜಾಪ್ರತಿನಿಧಿಸಭೆ ಇತ್ತು. ಅದು ಬರೀ ಅರಿಕೆಗಳನ್ನು ಅರ್ಪಿಸತಕ್ಕ ಸಭೆಯಾಗಿದ್ದು ಅದಕ್ಕೆ ಯಾವ ಅಧಿಕಾರವೂ ಇರಲಿಲ್ಲ. ಮತ್ತು ಕಟ್‌ಮೋಷನ್ ಮುಂತಾದುವುಗಳನ್ನು ತರುವುದಕ್ಕೆ ರೆಜಿಸ್ಲೇಟಿವ್ ಕೌನ್ಸಿಲ್‌ಗೆ ಮಾತ್ರ ಅಧಿಕಾರ ಇತ್ತು. ಅಲ್ಲ ಮಾತ್ರ ಅದನ್ನು ಚರ್ಚಿಸಬಹುದಾಗಿತ್ತು. ಆದ್ದರಿಂದ ಹಿಂದೆ ರೆಜಿಸ್ಲೇಟಿವ್ ಕೌನ್ಸಿಲ್ ಇದ್ದುದು ನ್ಯಾಯವಾಗಿತ್ತು; ಈಗ ಕಾರ್ಪಸ್ಟಿಟ್ಯೂಷ್ಟ್ ಪ್ರಕಾರ ರೆಜಿಸ್ಲೇಟಿವ್ ಅಸೆಂಬ್ಲಿಗೆ ಪೂರ್ಣ ಅಧಿಕಾರವಿದೆ. ಸೆಕ್ಷನ್ 196, 197, 198ರಲ್ಲಿ ನೋಡಿದರೆ ರಜಿಸ್ಲೇಟಿವ್ ಕೌನ್ಸಿಲ್‌ಗೆ ಎಷ್ಟರ ಮಟ್ಟಿನ ಅಧಿಕಾರವಿದೆ ಎಂಬುದು ವ್ಯಕ್ತಪಡುತ್ತದೆ. ಅದಕ್ಕೆ ಯಾವ ಅಧಿಕಾರವೂ ಇಲ್ಲ. ಸುಮ್ಮನೆ ಅವಂಬರ ಕ್ಕಾಗಿ ಇರತಕ್ಕ ಸಭೆ ಎಂದು ಹೇಳಿ ಕಾರ್ಪಸ್ಟಿಟ್ಯೂಷ್ಟ್ ನಲ್ಲಿ ಇದೆ. ಅದೂ ಅಲ್ಲದೆ ನಮ್ಮ ದೇಶದ 15 ಜಿಗಾಜೆ ಗಳು ಕೇಂದ್ರಕ್ಕೆ ಹೋರಟುಹೋದವು. ಕೆಲಸವೂ ಕೂಡ ಮೊದಲನಷ್ಟು ಇಲ್ಲ. ರೆಜಿಸ್ಲೇಟಿವ್ ಕೌನ್ಸಿಲ್ ಕಾರ್ಪಸ್ಟಿಟ್ಯೂಟ್ ಆಗಬೇಕಾಗಿದ್ದರೆ ಅಸೆಂಬ್ಲಿಯಲ್ಲಿರ ತಕ್ಕ ಸದಸ್ಯರ $\frac{1}{4}$ ಭಾಗ ಇರಬೇಕು. ಇಲ್ಲದೇ ಇದ್ದರೆ ಕನಿಷ್ಟಪಕ್ಷ 4 ! ಜನ ಇರಬೇಕು ಎಂದು ಮಾಡಿದ್ದಾರೆ. ನಮ್ಮಲ್ಲಿ ಎಷ್ಟು ಬೇಕೋ ಅಷ್ಟು ಕೂಡ ಇಲ್ಲದೇ (inflation ಮಾಡಿ) 40 ಜನ ಇರಬೇಕೆಂದು ಗೊತ್ತು ಮಾಡಿದ್ದಾರೆ. ಅಸೆಂಬ್ಲಿಯಲ್ಲಿ ಏನು ನಡೆಯತ್ತದೆಯೋ ಅದೆಲ್ಲಾ ರೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಪುನರಾವರ್ತನೆಯಾಗಬೇಕು. ಇಲ್ಲಿ ನಡೆದದ್ದೆಲ್ಲಾ ಅಲ್ಲಿ ನಡೆಯಬೇಕು. ಒಂದು ವೇಳೆ ಅವರು ಅಭಿಪ್ರಾಯ ವ್ಯಕ್ತಪಡಿಸಿದರೂ ಕೂಡ ಅಸೆಂಬ್ಲಿಯಲ್ಲಿ ಒಪ್ಪಿದರೆ ಒಪ್ಪಬಹುದು ಇಲ್ಲದೇ ಇದ್ದರೆ ಇಲ್ಲ. ಅಸೆಂಬ್ಲಿಗೇ ಪೂರ್ಣ ಅಧಿಕಾರವಿದೆ. ಆದ್ದರಿಂದ ಅಲ್ಲಿಗೆ ಹೋಗತಕ್ಕ ಅವಶ್ಯಕತೆ ಇಷ್ಟಾಗಿಲ್ಲ.

ಮತ್ತೊಂದೇನೆಂದರೆ, 197 (1)ರ ಪ್ರಕಾರ ಅಲ್ಲಿ ಗೊಂದು ಸೆಕ್ರೆಟೇರಿಯಟ್ ಇಲ್ಲಿಗೊಂದು ಬೇರೆ ಸೆಕ್ರೆಟೇರಿಯಟ್ ಇರಬೇಕಾಗುತ್ತದೆ. ಹಾಗೆಯೇ ಬೇರೆ ಬೇರೆ ಸಭಾ ಭವನಗಳು ಇತ್ಯಾದಿಯಾಗಿ ಅನೇಕ ಖರ್ಚುಗಳು ಬರುತ್ತವೆ. ಇಷ್ಟು ಭಾರವನ್ನೂ ನಮ್ಮ ದೇಶ ವಹಿಸುವುದಕ್ಕೆ ಸಾಧ್ಯವೇ ! ಈಗಾಗಲೇ ನಮ್ಮ ಆಡಳಿತ ತರೆ ಭಾರವಾಗಿದೆ. ತಲೆಶಿರೋಭಾರವಾಗಿದೆಯೆಂದು ಎಲ್ಲರೂ ಕೇಳುತ್ತಿದ್ದಾರೆ. ಇದನ್ನು ಅದಷ್ಟುಮಟ್ಟಿಗೆ ಕಡಮೆಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

ಅಲ್ಲದೆ, ಆಡಳಿತ ದೃಷ್ಟಿಯಿಂದಲೂ ಸಹ ಒಂದು ವೇಳೆ ರೆಜಿಸ್ಲೇಟಿವ್ ಕೌನ್ಸಿಲು ಇಲ್ಲದಿದ್ದರೆ ಆಡಳಿತ ನಡೆಯುವುದಕ್ಕೇನಾದರೂ ತೊಂದರೆ ಅಥವಾ ಅನಾನುಕೂಲವಾಗುವ ಹಾಗಿದ್ದರೆ ನಾವೂ ಕೂಡ ಇದರ ಇರುವಿಕೆಯನ್ನು ಖಂಡಿತ ಒಪ್ಪುತ್ತಿದ್ದೆವು. Part A ಪ್ರಾಂತಗಳಲ್ಲಿರುವಂತೆ ಕೌನ್ಸಿಲ್ ಇಲ್ಲದೆ ಆಡಳಿತ ನಡೆಸುವಾಗ ನಾವು superfluous ಆಗಿ ಇಟ್ಟುಕೊಂಡು ಏಕೆ ಆಡಳಿತ ನಡೆಸಬೇಕೋ ಗೊತ್ತಾಗುವುದಿಲ್ಲ. ಆ ಸಭೆಯ functions ಕೂಡ ಗುರುತರವಾದುವಲ್ಲ. ಯಾವ ವಿಚಾರದಲ್ಲೂ ಸಂಪೂರ್ಣ ಅಧಿಕಾರ ಇಲ್ಲ. Finance ಬಿಲ್ಲನ್ನು ಅಲ್ಲಿಗೆ ತಗೆದುಕೊಂಡು ಹೋಗುವ ಹಾಗೆ ಇಲ್ಲ. ಇತರ ಯಾವ ವಿಚಾರದಲ್ಲೇ ಆಗಲಿ ಅದು ಆಬ್ಸೈರ್ ತೀರ್ಮಾನ ಮಾಡುವಂತಿಲ್ಲ. ಒಂದು ಸಾರಿ ಪ್ರತಿಯೊಂದು ವಿಷಯವೂ ಮೇಲ್ಕಕ್ಕೂ ಕೆಳಕ್ಕೂ ಹೋಗುವುವಷ್ಟೇ ರಾಧ. ಮಂತ್ರಿಗಳು ಬೇರೆ ಇಲ್ಲಿಯೂ ಅಲ್ಲಿಯೂ ಇರಬೇಕಾಗಿ ಬಂದು ಆಡಳಿತದ ವಿಷಯಕ್ಕೆ ಸಂಪೂರ್ಣವಾಗಿ ಗಮನ ಕೊಡುವುದಕ್ಕೆ ಸಾಧ್ಯವಿಲ್ಲದಂತಾಗಿರುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಶ್ರೀಮಾನ್ ಮುಖ್ಯ ಗೋವಿಂದರೆಡ್ಡಿಯವರು ತಂದಿರತಕ್ಕ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ. ಹೆಚ್ಚಿಗೆ ಒಂದು ಸಭೆಯನ್ನು ಹೀಗೆ ಇಟ್ಟುಕೊಂಡಿರುವುದು ಸರಿಯಲ್ಲ. ಆದ್ದರಿಂದ ಇದನ್ನು ತೆಗೆಯಲು ಸಭಾಸದಸ್ಯರೆಲ್ಲರೂ ಪ್ರಯತ್ನಿಸುವುದು ನಮ್ಮ ಕರ್ತವ್ಯವೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ನಾನು ತಮ್ಮಲ್ಲಿ ಒಂದು ಅರಿಕೆಮಾಡಿಕೊಳ್ಳಬೇಕು. ಈ ನಿರ್ಣಯವನ್ನು ಯಾರಾದರೂ ವಿರೋಧಿಸುವವರಿದ್ದರೆ, ಅವರು ಮಾತನಾಡಿದನಂತರ ನನಗೆ ಮಾತನಾಡುವುದಕ್ಕೆ ಅವಕಾಶಕೊಡಬೇಕೆಂದು ಹೇಳುತ್ತೇನೆ.

Sri M. LINGANNA (Nanjangud).—I want to oppose this resolution Mr. Speaker, Sir, for several reasons. No doubt the Upper House, *i.e.*, the Mysore Legislative Council, looks superfluous on some grounds. Though this Legislative Assembly is vested with supreme powers, I believe the Upper House is in a way needed. No doubt, the existence of this House means considerable financial expenditure and even so far as the legislative power of the Upper House is concerned, it has very little. Some of the members who are supporting this particular resolution say that because of the financial stringency, the State cannot probably maintain that House. No doubt there is also a provision in the Indian Constitution that if any Assembly were to desire the abolition of the Upper House that can be done provided the Assembly moves a resolution to that effect.

I believe, Sir, the Mysore State occupies a unique position in respect of the linguistic division of Kannada province. That point I want to stress on here. I do not know the minds of the Mysore Members who were in the Parliament, what they felt when they adopted this particular provision of having bi-cameral system in Mysore. I rather imagine that the Members had in view the expansion of the Mysore State into a bigger area because we know when the question of formation of Karnataka.....

Sri Mulka GOVINDA REDDY.—On a point of order Sir. The question of linguistic provinces does not arise out of this resolution.

Sri M. LINGANNA.—I am only saying the reasons why the Upper House should be maintained and this is one of the reasons why the Legislative Council should be retained and as such I think the point of order raised by my beloved friend is not maintainable.

So, Mr. Speaker, most of the Members of this House are aware that the non-official resolution in the Parliament, the first by ballot, is about the distribution of the Provinces on linguistic basis. Also it is a well known fact, and most of the Members of this House are aware of it, that there is a lot of agitation over the linguistic provinces within and without the State. Most of the Members are also aware that there is an agitation that Mysore should be made a nucleus around which this Karnataka province should be hammered out. From that point of view when Karnataka is formed with 2 crores of people in it, I believe, a bi-cameral system is essential. I believe that if we were to recommend this particular resolution, in course of time we may be called upon to reinstate this Upper House as and when the province is formed. As there is this view of expansion of the Mysore State into a bigger State, I believe, the maintaining of an Upper House is essential. The opinion that because of the financial stringency the Upper House cannot be maintained, is not tenable. For these reasons I oppose this resolution and think that the resolution seems to be innocuous. I feel that it is most untimely.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಸ್ವಾಮಿ, ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರು ತಂದಿರತಕ್ಕ ಈ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ. ಈಗತಾನೆ ಮಾತನಾಡಿದ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಿರೋಧಿಸುತ್ತಾ ಕೊಟ್ಟ ಕಾರಣಗಳು ಅಷ್ಟು ಸಮಂಜಸವಾಗಿಲ್ಲವೆಂದು ತಿಳಿಸಲಿಚ್ಛಿಸುತ್ತೇನೆ ತಜ್ಞರು ಅಭಿಪ್ರಾಯಪಡುವುದು, ಮೇಲ್ಮನೆಯೆಂಬುದಿದ್ದರೆ, ಕೆಳಗಿನ ಮನೆಯವರು, ಅಸೆಂಬ್ಲಿಯವರು ಯಾವುದಾದರೂ ತೀರ್ಮಾನವನ್ನು ಆತುರವಾಗಿ ತೆಗೆದುಕೊಂಡರೆ, ಆ ಆತುರದ ತೀರ್ಮಾನದಿಂದ ಉಂಟಾಗತಕ್ಕ ಪರಿಣಾಮವನ್ನು ತಡೆಗಟ್ಟುವುದಕ್ಕಾಗುತ್ತದೆ ಎಂದು. ಆದರೆ ನನ್ನ ನಿವೇದನೆ ಇಷ್ಟೆ. ಆ ರೀತಿಯಾಗಿ ಆತುರದ ತೀರ್ಮಾನಕ್ಕೆ ಬಾರದಿರುವುದಕ್ಕೆ ಅಡ್ಡಿಗಳು ನಮ್ಮ ಅಸೆಂಬ್ಲಿಯಲ್ಲೇ ಅನೇಕವಾಗಿವೆ. ಏಕೆಂದರೆ ನಾವು ಯಾವುದಾದರೂ ಅಭಿಪ್ರಾರು ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ಆ ವಿಷಯ ಒಂದು ಸರೆಕ್ಟ್ ಕಮಿಟಿಗೆ ಹೋಗಿ ಅಲ್ಲಿ ಕೂಲಂಕಷವಾಗಿ ವಿಮರ್ಶೆಯಾದ ಮೇರೆ ಇಲ್ಲಿ ಸಭೆಯಲ್ಲಿ ಮೂರನೇ ಹಂತದಲ್ಲಿ ತೀರ್ಮಾನ ಮಾಡುತ್ತೇವೆ. ಆದ್ದರಿಂದ ಆತುರವಾಗಿ ತೀರ್ಮಾನಕ್ಕೆ ಬರುತ್ತೇವೆನ್ನುವುದಕ್ಕೆ ಅವಕಾಶವಿಲ್ಲ.

ಅಲ್ಲದೆ, ಯಾವುದಾದರೂ ಒಂದು ರೀತಿಯಲ್ಲಿ ಸಹಾಯಕವಾಗಿರುವುದು ಹೋಗಿ, ಆ ಸಭೆ ಒಂದು ಒಳ್ಳೆಯದಾಗುವುದೂ ಸುಲಲಿತವಾಗಿ ಆಗದಿರುವಂತೆ ಅಡ್ಡ ಬರುತ್ತದೆಂಬುದನ್ನು ಹೇಳುತ್ತೇನೆ. ಏನಾದರೂ ಒಂದು ಅತಿಮುಖ್ಯವಾದ ನಿರ್ಣಯವನ್ನು ಈ ಸಭೆ ಮಾಡಿ ಅದರಿಂದ ಬೇಗ ಜನತೆಗೂ, ದೇಶಕ್ಕೂ ಹೆಚ್ಚಿನ ಪ್ರಯೋಜನವನ್ನು ಒದಗಿಸಬೇಕೆನ್ನುವ ಸಂದರ್ಭದಲ್ಲಿ ಈ ಮೇಲ್ಮನೆಯು ನಿಧಾನಕ್ಕೆ ಕಾರಣವಾಗಿ ಖಂಡಿತವಾಗಿ ಅಡ್ಡ ಬರಬಹುದು. ಏಕೆಂದರೆ, ಆ ವಿಷಯ ಮೇಲ್ಮನೆಗೆ ಬೇರೆ ಹೋಗಿ ಅವರ ಅಭಿಪ್ರಾಯವನ್ನೂ ಪಡೆದು ಬರುವ ಹೊತ್ತಿಗೆ ಜನತೆಗೆ ಸಕಾಲದಲ್ಲಿ

ದೊರೆಯಬೇಕಾಗಿದ್ದ ರಾಥ ದೊರೆಯದೆ ಹೋಗುವ ಸಂದರ್ಭವೂ ಇದೆ. ಮತ್ತು ನಾವು ಏನು ಕಾನೂನು ರಚನೆ ಮಾಡುತ್ತೇವೆಯೋ ಅದು ನೇರವಾಗಿ ಮತ್ತು ಪೂರ್ಣವಾಗಿ ಗುರಿಮುಟ್ಟುವುದಕ್ಕೆ ಬದಲು, ಮೇಲಿನ ಮನೆಗೂ ಕೆಳಗಿನ ಮನೆಗೂ ಓಡಾಡುವುದಕ್ಕೆ ಪ್ರಾರಂಭವಾಗಿ ತಡವಾಗುವುದಕ್ಕೆ ಅವಕಾಶವಾಗುತ್ತದೆ.

ಅಲ್ಲದೆ ಇನ್ನು ಕೆಲವರು ಹೇಳಿದಂತೆ, ಈ ಎರಡು ಮನೆಗಳಲ್ಲೂ ಒಂದೇ ರಾಜಕೀಯ ಪಕ್ಷವು ಬಹುಮತದಲ್ಲಿದ್ದ ಪಕ್ಷದಲ್ಲಿ ಇದರಿಂದ ಇಬ್ಬೇನು ತೀರ್ಮಾನವಾಗುತ್ತದೆಯೋ ಅಲ್ಲಿಯೂ ಅದೇ ತೀರ್ಮಾನವಾಗುತ್ತದೆ. ಹಾಗೆ ಒಂದು ಪೇಳೆ, ಒಂದೇ ತೀರ್ಮಾನವಾಗುವ ಸಂದರ್ಭದಲ್ಲಿ ಹೀಗೆ ಬೇರೆಬೇರೆ ಮನೆಗಳೇ ಕರಬೇಕು! ಹಾಗಿಲ್ಲದೆ, ಒಂದು ರಾಜಕೀಯ ಪಕ್ಷ ಕೆಳಮನೆಯಲ್ಲಿ ಬಹುಮತದಲ್ಲಿದ್ದು ಮೇಲು ಮನೆಯಲ್ಲಿ ಅದಕ್ಕೆ ಬಹುಮತವಿಲ್ಲದಿದ್ದರೆ, ನಾನು ಮೊದಲೇ ಹೇಳಿದಂತೆ, ಕೆಳಗಿನ ಮನೆಯವರು ಮಾಡಿದ ತೀರ್ಮಾನಗಳಿಗೆ ಅದು ಬಹಳವಾಗಿ ಅಡ್ಡಿ ಆತಂಕಗಳನ್ನು ತರುವುದಕ್ಕೆ ಕಾರಣವಾಗಿ ಶೀಘ್ರವಾಗಿ ಕಾರ್ಯಕರಾಪಗಳು ನಡೆಯುವುದಕ್ಕೆ ಕೂಡ ಅಡಚಣೆಯಾಗುತ್ತದೆ.

ಈ ನಿರ್ಣಯ ಸೂಚಕರು ಹಣದ ಉಳಿತಾಯದ ದೃಷ್ಟಿಯಿಂದಲೂ ಇದನ್ನು ಒತ್ತಾಯಪಡಿಸಿದ್ದಾರೆ. ಈಗಾಗಲೇ ಅವಶ್ಯವು ಮಟ್ಟಿಗೆ ಹೆಚ್ಚಿದ ಬಾಬುಗಳನ್ನು ಕಡಮೆಮಾಡಬೇಕೆಂದು ನಮ್ಮ ಸರ್ಕಾರದವರು ಕಂಕಣ ತೊಟ್ಟಿಕೊಂಡು ಕಾರ್ಯೋನ್ಮುಖರಾಗಿದ್ದಾರೆ. ಅಂಥ ದರಲ್ಲಿ ಈ ಮೇಲಿನ ಮನೆಯನ್ನಿಟ್ಟುಕೊಂಡಿರುವುದು ವ್ಯರ್ಥಾವೆಚ್ಚಕ್ಕೆ ದಾರಿ.

ಇನ್ನು ಸಾಂಪ್ರದಾಯಿಕವಾಗಿಯೇನಾದರೂ ಹೀಗೆ ಮೇಲಿನ ಮನೆಯನ್ನು ಇಟ್ಟುಕೊಳ್ಳಲೇಬೇಕೆಂದು ಅಭಿಪ್ರಾಯಪಡುವವರಾಗಿದ್ದರೆ, ಈಗಾಗಲೇ ಸಾಂಪ್ರದಾಯಿಕವಾದ ಎಷ್ಟೋ ಇನ್ನೂ ಮಹತ್ವದ ವಿಷಯಗಳನ್ನು ನಾವು ತೆಗೆದುಹಾಕಿದ್ದೇವೆ; ಇದು ಸಭಾ ಸದಸ್ಯರಿಗೆಲ್ಲಾ ಗೊತ್ತಿರುವ ವಿಷಯ. ಈಗ ಮೊನ್ನೆ ತಾನೆ ನಮ್ಮ ಸಂಸ್ಥಾನಕ್ಕೆ ಎರಡು ಬಾವುಟಗಳಿರುವುದು ಅನುಚಿತವೆಂದು ತೀರ್ಮಾನಿಸಿ ಒಂದೇ ಬಾವುಟವಿರಬೇಕೆಂದು ಹೇಳಲಿಲ್ಲವೇ; ಅದೇ ರೀತಿಯಾಗಿ ಸಾಂಪ್ರದಾಯಿಕವೆಂಬುದನ್ನು ಬಿಟ್ಟು ಅನಾವಶ್ಯಕವಾದ ಈ ಮೇಲಿನ ಮನೆಯನ್ನು ತೆಗೆದುಹಾಕಿ. ನಮ್ಮ ಅಭಿವೃದ್ಧಿ ಕಾರ್ಯಗಳಿಗೇ ಸಾಕಷ್ಟು ಹಣವಿಲ್ಲದಿರುವಾಗ ನಾವು ಈ ಮೇಲಿನ ಮನೆಯನ್ನಿಟ್ಟುಕೊಳ್ಳುವುದು ತೀರಾ ಅನುಚಿತ, ಅನಾವಶ್ಯಕವೆಂದು ಹೇಳಿ ಮಾನ್ಯ ಸದಸ್ಯರೆಲ್ಲರೂ ಈ ನಿರ್ಣಯಕ್ಕೆ ಬೆಂಬಲಕೊಡಬೇಕೆಂದು ಪ್ರಾರ್ಥಿಸುತ್ತೇನೆ.

4-30 P.M.

Sri M. RAJASEKHARA MURTHY (Yelandoor).—Mr. Speaker, Sir, in supporting this Resolution, I would like to prove to the satisfaction of this House that the existence of the Legislative Assembly alone can serve the interests of the public and there is no necessity for the Legislative Council in the State. In other words, unicameral constitutionalism or the single chamber system is better suited for Mysore than bicameral constitutionalism or the double chamber system.

At the very outset, I would like to bring to the notice of the Hon'ble Members that the existence of the double chamber system is an historical accident. This bifurcation of the Legislative organ into the Lower House and the Upper House is purely derived from the habits of the English Constitution which is the mother Constitution for the whole world. Therefore, the existence of the Upper House is not born out of the need for utility or service or efficiency or for the protection against a single chamber despotism. It is only to provide certain special representations to the privileged aristocratic classes that existed in England, *i.e*, Barons. Here in our country, the social structure is such that we have not got any special privileged classes and as such there is no need for any Legislative Council in our State.

Further, the existence of the Upper Chamber has been necessitated because the Upper Houses in addition to their legislative activities have been entrusted with judicial and executive functions. For example the American Senate. The American Senate, in addition to its legislative work has got to discharge certain executive and judicial functions. It has got to discharge executive functions in connection with the ratification of the treaties and the appointments of high officials. And the Senate has also got to discharge certain judicial functions in connection with the impeachment of higher officials of the State. This is also the case in England; the House of Lords is the supreme Court of Appeal in all cases arising in Great Britain proper. But in our State no such special powers have been entrusted to the Legislative Council and I think the existence of such a body is not necessary. This is almost an impotent body and such an impotent body has no right to exist. To put it in the words of Goldwin Smith "To suppose that power allows on important matters to be controlled by impotency is vain." And further coming to the 18th and 19th century

(SRI M. RAJASEKHARA MURTHY.)

political philosophers, *Bentham* of England and *Abbe Seiyes* of France, they say :

> "If the Second Chamber agrees with the First Chamber, then it is superfluous ; if it disagrees, then it is pernicious."

The implication of this statement is this : Suppose both the Houses agree on any point, then it is a dull duplication, because both Houses agree on the same point. Suppose, the Upper House is going to disagree with the Lower House then it is a danger to democracy. Further, I would like to mention about the composition and the nature of the Legislative Council constituted in our State. It is purely a cosmopolitan club ! Some of the Members have been nominated by the executive in the name of the Rajpramukh ; some have been elected by the Members of the Legislative Assembly; and some Members have been indirectly elected from certain constituencies, like the Graduates' constituency and the Teachers' constituency. Now coming to the nominated Members, generally the executive will nominate such Members who are going to support them and these Members who have adorned the branches of the Legislative Council by nomination are not going to oppose any measure of first class importance because they want to safeguard their position. Regarding Members who have been elected from the Graduates' constituency and the Teachers' constituency, they form a narrow minority and represent the interests of the conservative elements, whereas the Lower House represents the progressive elements. Then both Houses will be at logger heads. And coming to the Members who have been elected by the Members of the Legislative Assembly, the opinion expressed by such Members will in no way differ from the opinion expressed by the Members of the Legislative Assembly. Therefore, there is no difference of opinion between these two Houses. When there is no difference of opinion, there is no necessity for the Second House to exist.

Again, I would like to bring to your notice that the existence of bi-cameralism is a thing which is common to the republican and federal forms of Government. Ours is a unit in a republican form of Government. Most of the enactments have been already extended to the State and the volume of legislative business in the Legislative Assembly has been terribly reduced.

Further it has been argued that it is to safeguard against the tyranny and oppression of the single chamber despotism. This argument certainly does not apply to those countries which are governed by a democratic constitution ; but rather to places where totalitarian form of government existed, *i.e.*, Italy and Germany prior to the Second World War.

Further, as a measure of economy, I am going to support this resolution. Our financial position is very weak. Sources of income have become inelastic and most of the income yielding departments are showing diminution. Further, I would like to bring to your notice that our society is dynamic and not static. Legislative measures have to be enacted immediately to suit the people. The existence of the double chamber system will cause unnecessary delay. The Legislative Council acts as a court of legislative revision which acts as a check on the moving wheel of legislation. I would like with the permission of the Chair to quote from Harold Laski :

> " Necessary revision is best effected by the prior consultation by Government of the interests touched by the legislation proposed. Most criticism in a second chamber will merely repeat the arguments already adduced in the first. What it has to say will not, except by accident, possess any special quality..... it will tap no sources of knowledge or opinion not already in contact with the first.
>
> * * *
>
> The necessary checks are always present in the inertia of the mass, and the desire of the Government

to avoid large changes which may be disastrous. Any other checks will, almost inevitably, be a premium not upon improvement but upon opposition in terms of vested interests."

It has been pointed out that the Legislative Council prevents hasty, rash and ill-considered legislation. Sometimes Members are carried away by emotion and impulse and they may commit certain mistakes. It is not correct. The Law will not be enacted immediately without consulting the public and it will not be straightaway entered in the statute book. After thorough deliberations, the enactments will be made. Further, the existence of a double chamber system creates duality in the legislative organ and the existence of one chamber creates unity and fixes definite responsibility. It has also been argued that special representation may be given to those people who have secured distinction in certain fields like Art, literature, profession and also to those who have served the public. What I want to say is, a person may be a literary genius, but any discussion made by him on the social insurance scheme is of little importance. Or a person may be a comedian, but that does not qualify him to give contribution on a debate about currency and banking. A person may be a surgeon, may be a doctor; he can feel the pulse of a patient, give prescription and injections, but he cannot feel the pulse of the nation, suggest remedies and also give practical schemes on important matters.

In winding up my speech, I would like to say that the Second Chamber has come to be regarded as a clumsy and complicated addition to the structure of the Government, and a fifth wheel in the administrative coach. It is an unnecessary and complicated duplication. Therefore I request all the Members of this House to support this resolution.

*ಶ್ರೀ ಎಂ. ಮಾದಯ್ಯನವರು (ನಂಜನಗೂಡು—ಅನುಸೂಚಿತ ಜಾತಿಗಳು.)—ಸ್ವಾಮಿ, ಈ ನಿರ್ಣಯವನ್ನು ಮಂಡಿಸಿರತಕ್ಕಂಥ ಮಾನ್ಯ ಸದಸ್ಯರೂ ಮತ್ತು ಇದನ್ನು ಅನುಮೋದಿಸಿರತಕ್ಕವರೂ ಮತ್ತು ಇದನ್ನು ಪುಷ್ಟೀಕರಿಸಿ ಮಾತನಾಡಿರುವಂಥ ಮಾನ್ಯ ಸದಸ್ಯರುಗಳೂ ಹೂಡಿರತಕ್ಕ ವಾದವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಈ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಅದಕ್ಕೆ ಕಾರಣ ಇಷ್ಟೆ:—

ನಮ್ಮ ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಯು (ವಿಧಾನ ಪರಿಷತ್ತು) ಇನ್ನೂ ಹೊಸ್ತಾನೆ ರಚಿತವಾಗಿದೆ. ಆ ಸಭೆಯು ಅಂದರೆ ಪರಿಷತ್ತಿನ ಸದಸ್ಯರು ಹೊಸ್ತಾನೆ ಪ್ರಮಾಣವಚನವನ್ನು ಸ್ವೀಕಾರಮಾಡಿ ತಮ್ಮ ಸಭಾಪತಿಯನ್ನು ಚುನಾವಣೆಮಾಡಿಕೊಂಡಿದ್ದಾರೆ. ಈ ಸಭೆಯ ಕೆಲಸಕಾರ್ಯಗಳು ಕೆಲವು ಕಾಲದ ವರೆಗೆ ನಡೆದ ಮೇಲೆ ಇದನ್ನೆಲ್ಲಾ ಆಲೋಚನೆಮಾಡುವುದೇ ಏನಾ ಈಗ ಇದು ತೀರಾ ಆತುರವಾಗಿ ವರ್ತಿಸಿದಂತೆ ಆಗುತ್ತದೆ. ಹಾಗೆ ಕೆಲವು ಕಾಲ ಕಾದು ನೋಡಿದನಂತರ ಇವರು ಈ ವಾದ ಮಾಡಿದ್ದರೆ ಇದರಲ್ಲಿ ಏನಾದರೂ ತಿರುಳಿರಬಹುದೆಂದು ನಾನು ಯೋಚಿಸುತ್ತಿದ್ದೆ. ಆದರೆ ಈಗಿನ ವಾದದಲ್ಲಿ ಅಂಥ ತಿರುಳೇನೂ ಇದ್ದಹಾಗೆ ಕಂಡುಬರುವುದಿಲ್ಲ. ಕೇವಲ ವಾದ ಮಾಡಬೇಕೆಂಬ ಒಂದು ಉದ್ದೇಶದಿಂದ ಹೀಗೆ ಹೇಳಿದ್ದಾರೆಯೇ ಶಿವಾಯಿ ಇದರಲ್ಲಿ ಏನೂ ತಿರುಳಿಲ್ಲವೆಂಬುದು ಎದ್ದು ಕಾಣುತ್ತಿದೆ. ನಮ್ಮ ಮೈಸೂರಿನ ವೈಶಿಷ್ಟ್ಯವನ್ನು ಎತ್ತಿ ಹಿಡಿದು ಮತ್ತು ಇಡೀ ಭಾರತದಲ್ಲೇ ಈ ನಮ್ಮ ಎರಡು ಸಭೆಗಳು ಒಂದು ಚರಿತಾರ್ಹವಾದ ಇತಿಹಾಸವನ್ನೇ ಮಾಡಿಕೊರಿಸಿರತ್ತವೆ. 1924ನೇ ಇಸವಿಯಲ್ಲಿ ಸ್ಥಾಪಿತವಾದ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಸಭೆಯು ಮೊನ್ನೆ ಮೊನ್ನೆತನಕ ಎಂದರೆ ಕಳೆದ ಎರಡು ವರ್ಷಗಳ ಹಿಂದಿನವರೆಗೂ ಕೆಲಸಮಾಡಿ ಅದು ಇಡೀ ಭಾರತಕ್ಕೇ ಒಂದು ಮೇಲು ಪಂಗ್ತಿಯನ್ನು ಹಾಕಿಕೊಟ್ಟಿದೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಆ ಸಭೆಗೆ ಆಯವ್ಯಯದ ಅಂದಾಜು ಪಟ್ಟಿಯ ಬಗ್ಗೆ ಚರ್ಚೆಮಾಡಲು ಅವಕಾಶವಿಲ್ಲ, ಹಿಂದಿದ್ದ ಪ್ರಕಾರ ಈ ಪರಿಷತ್ತಿಗೆ ಮುಂದೆ ಕೆಲಸಮಾಡುವ ಅವಕಾಶವಿಲ್ಲ, ಆದುದರಿಂದ ಅದು ಬೇಡ ಎನ್ನುವ ಒಂದು ವಾದವನ್ನೇ ಪ್ರಧಾನವಾಗಿ ಮಾಡಿ ಹೇಳಿದ್ದಾರೆ. ನಮ್ಮ ಭಾರತ ರಾಜ್ಯಾಂಗ ಸಭೆಯು ಅನೇಕ ಕಣ್ಮಣಿಗಳಿಂದ ಕೂಡಿದ್ದಂಥ ಸಭೆ. ನಾನಾ ಸಂಸ್ಥಾನಗಳ ಪ್ರತಿನಿಧಿಗಳು ಆ ರಾಜ್ಯಾಂಗ ಸಭೆಯಲ್ಲಿದ್ದು, ಅಲ್ಲಿ ಕೆಲಸಮಾಡಿದಂಥಾ ಅನೇಕ ಪ್ರವೀಣರು ಇದರ ಅವಶ್ಯಕತೆ ಬಹಳವಾಗಿದೆಯೆಂದು ಹೇಳಿದ್ದಾರೆ. ಹಾಗೆ ಅವರು ಯಾವ ಯಾವ ಸಂಸ್ಥಾನಕ್ಕೆ ಹಾಗೆ ಎರಡೆರಡು ಸಭೆಗಳಿರಬೇಕೆಂಬುದನ್ನು ನಿರ್ಧಾರಮಾಡುವಾಗ ನಮ್ಮ ಮೈಸೂರಿಗೂ ಕೂಡ ಎರಡು ಸಭೆಗಳು ಇರತಕ್ಕದ್ದು ಎಂದು ತಿಳಿಸಿರತಕ್ಕದ್ದು ಮೈಸೂರಿನ ಒಂದು ಉನ್ನತ ಮಟ್ಟವನ್ನು ತೋರಿಸಿರತಕ್ಕದ್ದಾಗಿದೆ. ಇದೊಂದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ಇಂಥಾದ್ದನ್ನು ಈಗ ಬೇಡವೆಂದು ಹೇಳುತ್ತಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ. ಸ್ವಾಮಿ, ಈ ಸಭೆಯ ಮುಂದೆ ಈಗ ಈ ನಿರ್ಣಯವನ್ನು ಮಂಡಿಸಿರತಕ್ಕ ಮತ್ತು, ಇದನ್ನು ಪುಷ್ಟೀಕರಿಸಿ ಮಾತನಾಡಿರತಕ್ಕ ಮಾನ್ಯ ಸದಸ್ಯರೆಲ್ಲರೂ ಸ್ವಲ್ಪ ಸಾವಧಾನದಿಂದ ಅವಲೋಕನಮಾಡಿದರೆ ಅವರಿಗೇ ವ್ಯಕ್ತವಾಗುತ್ತದೆ. ಈ 40 ಜನ ಸದಸ್ಯರನ್ನೊಳಗೊಂಡ ಸಂಸ್ಥೆಯಲ್ಲಿ ಪದವೀಧರರಿಗೆ ಪ್ರಾತಿನಿಧ್ಯ ಕೊಡಲಾಗಿದೆ; ಉಪಾಧ್ಯಾಯರಿಗೆ, ಸ್ಥಳೀಯ ಸಂಸ್ಥೆಗಳವರಿಗೆ ಪ್ರಾತಿನಿಧ್ಯ ಕೊಡಲಾಗಿದೆ. ರಾಜಪ್ರಮುಖರು ನಾಮನಿರ್ದೇಶದ ಮೂಲಕ ಅದಕ್ಕೆ ಮಹಾ ಮಹಾ ಪುರುಷರನ್ನು ಪ್ರತಿನಿಧಿಗಳನ್ನಾಗಿ ಆರಿಸಿಕೊಂಡಿದ್ದಾರೆ. ಇಂಥಾ ಶ್ರೇಷ್ಠವಾದಂಥ ಪ್ರಾತಿನಿಧ್ಯವುಳ್ಳ ಸಭೆ ಅದು ಎಂಬ ವಿಚಾರ ಅವರಿಗೆ

(ಶ್ರೀ ಎಂ. ಮಾದಯ್ಯನವರು):

ಗೊತ್ತಿದ್ದೂ, ಹೀಗೆ ಅವರು ಒಂದು ನಿರ್ಣಯ ತಂದಿರುವುದು ನನಗೆ ಪರಮಾಶ್ಚರ್ಯವಾಗಿದೆ. ಈ ಸಭೆಯ ಮುಂದೆ ಬರತಕ್ಕ ಪ್ರಸ್ತಾವೆಗಳು ಇಲ್ಲಿ ಪ್ರಾಸಾಗಿ ಅನಂತರ ಅವು ಪರಿಷತ್ತಿನ ಸಭೆಯ ಮುಂದೆ ಹೋಗಿ, ಅಲ್ಲಿ ಅವರ ಸೂಕ್ತ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆದು ಹೀಗೆ ಉದ್ಭವವಾಗುವ ಶಾಸನಗಳು ದೇಶದವರೆಲ್ಲರೂ ಅವುಗಳನ್ನು ಎತ್ತಿ ಹಿಡಿಯುವುದಕ್ಕೆ ಏಷ್ಟು ಅರ್ಹವಾದವುಗಳಾಗುತ್ತವೆಂಬ ವಿಚಾರವನ್ನು ನಾನು ಪುನಃ ಒತ್ತಿ ಹೇಳಬೇಕಾಗಿಲ್ಲ. ಇದಕ್ಕಾಗಿ ನಮ್ಮ ರಾಜ್ಯಾಂಗದಲ್ಲಿ ಭಾರತ ರಾಜ್ಯಾಂಗ ಸಭೆಯವರು ಒಂದು ಅನುಕೂಲವಾದ ಅವಕಾಶ ಕಲ್ಪಿಸಿಕೊಟ್ಟು ಈ ಸಭೆಯನ್ನು ಉಳಿಸಿಕೊಟ್ಟಿದ್ದಕ್ಕಾಗಿ ನಮ್ಮ ಈ ಉಭಯ ಸಭೆಗಳೇ ಅಲ್ಲದೆ ನಮ್ಮ ಸಂಸ್ಥಾನದ ಇಡೀ 80 ಲಕ್ಷ ಜನರೂ ಅವರನ್ನು ಹೃತ್ಪೂರ್ವಕದಿಂದ ಅಭಿನಂದಿಸಬೇಕಾಗಿದೆ. ಇದೂ ಅಲ್ಲದೆ, ನಾನು ಮೊದಲಾಗಲೇ ಹೇಳಿರುವಹಾಗೆ, ನಮ್ಮ ಸಿಸ್ಟರ್ ಸ್ಟೇಟುಗಳಲ್ಲಿ ಎಂದರೆ ಅಕ್ಕಪಕ್ಕದ ಮದ್ರಾಸ್, ಬೊಂಬಾಯಿ, ಮುಂತಾದ ಎ ಭಾಗದ ಸ್ಟೇಟುಗಳಿಗೆ ಏನು ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೋ ಆ ಸೌಲಭ್ಯಗಳನ್ನು ನಮ್ಮ ಮೈಸೂರಿಗೂ ಒದಗಿಸಿಕೊಟ್ಟಿದ್ದಾರೆ. ಆದರೆ ಈ ಪರಿಷತ್ತು ಇನ್ನೂ ಮೊನ್ನೆತಾನೆ ಪ್ರಾರಂಭವಾಗಿದೆ. ಇನ್ನೂ ಕೆಲವು ಕಾಲ ಕಾದು ನೋಡಬೇಕು. ಈಗಲೇ ಯಾವುದನ್ನೂ ಮಾಡಬಾರದು. ಏನೋ ಪ್ರಾಪಮಾಡಬೇಕು ಎಂಬ ಉದ್ದೇಶದಿಂದ ಕೆಲವು ಕಾರಣಗಳನ್ನು ಹಾಕಿಕೊಂಡು ಭಾಷಣಮಾಡಿದರೆ ಅದರಲ್ಲಿ ಏನೂ ತಿರುಳಿಲ್ಲವೆಂದು ಗೊತ್ತಾಗುತ್ತದೆ. ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸಿ, ಈ ಸಭೆಯೂ ಸಹ ಇದನ್ನು ಸಂಪೂರ್ಣವಾಗಿ ವಿರೋಧಿಸಿ ಇದನ್ನು ಔಟ್‌ವೋಟ್ ಮಾಡಬೇಕೆಂದು ತಿಳಿಸಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ನಾನು ಈ ಠರಾವನ್ನು ವಿರೋಧಿಸುತ್ತೇನೆ. ಈ ವಿಚಾರದಲ್ಲಿ ತಜ್ಞರ ಅಭಿಪ್ರಾಯವನ್ನು ನೋಡಿದರೆ ಎರಡು ಸಭೆಗಳಿರುವುದು ಸೂಕ್ತವಾಗಿದೆ. ಅಮೇರಿಕಾ ದೇಶದಲ್ಲೂ ಫೆಡರಲ್ ಕಾನ್ಸ್ಟಿಟ್ಯೂಷನ್ ಮತ್ತು ಅದರ ಅನೇಕ ಯೂನಿಟ್‌ಗಳಲ್ಲಿ ಎರಡು ಸಭೆಗಳಿವೆ. ಅದೇ ರೀತಿಯಲ್ಲಿ ಅನೇಕ ದೇಶಗಳಲ್ಲಿ ಎರಡು ಸಭೆಗಳಿವೆ. ನಮ್ಮ ಭರತಖಂಡದಲ್ಲಿ ಫೆಡರೇಷನ್‌ಗೆ ಒಳಪಟ್ಟಿರುವ ಸಂಸ್ಥಾನಗಳ ಹೈಕೆಲವು ದೊಡ್ಡ ಸಂಸ್ಥಾನಗಳಲ್ಲಿ ಎರಡು ಸಭೆಗಳಿವೆ. ಇಂಡಿಯಾದೇಶದಲ್ಲೂ ಕೂಡ 'ಎ' ಭಾಗದ ಸಂಸ್ಥಾನಗಳ ಹೈಕಿ ಆರು ಸಂಸ್ಥಾನಗಳಲ್ಲಿ ಈಗ ಎರಡು ಸಭೆಗಳಿವೆ. 'ಬಿ' ಭಾಗಕ್ಕೆ ಸೇರಿದ ನಮ್ಮ ಸಂಸ್ಥಾನದಲ್ಲಿ, ಮೇಲ್ಕಂಡ 'A' ಭಾಗದ ಸಂಸ್ಥಾನಗಳನ್ನು ಅನುಸರಿಸಿ ಎರಡು ಸಭೆಗಳನ್ನಿಟ್ಟುಕೊಂಡಿದ್ದೇವೆ. ಆದ್ದರಿಂದ ತಜ್ಞರ ಅಭಿಪ್ರಾಯ, ಪ್ರಜಾಭಿಪ್ರಾಯ ಮತ್ತು ರೋಕಾನುಭವವಿರುವವರ ಅಭಿಪ್ರಾಯ, ಇವುಗಳನ್ನು ನೋಡಿದರೆ ಎರಡು ಸಭೆಗಳಿರುವುದು ಸೂಕ್ತವೆಂದು ನನಗೆ ಕಂಡು ಬರುತ್ತದೆ. ಇದರಲ್ಲಿ ಮೈಸೂರಿನ ಅನುಭವವನ್ನು ಸ್ವಲ್ಪ ವಿಮರ್ಶೆಮಾಡಬೇಕು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಎಂದು ಮೊದಲಿನಿಂದ ಎರಡು ಸಭೆಗಳಿದ್ದುವು. ಇಷ್ಟೇ ಅಲ್ಲದೆ ಪ್ರಜಾಪ್ರತಿನಿಧಿ ಸಭೆಯಲ್ಲಿ 310 ಜನ ಸದಸ್ಯರೂ, ನ್ಯಾಯವಿಧಾಯಕ ಸಭೆಯಲ್ಲಿ 70 ಜನ ಸದಸ್ಯರೂ ಇರುತ್ತಿದ್ದರು. ಆ ಎರಡು ಸಭೆಗಳನ್ನು ತೆಗೆದು ಈಗ ಪುನಃ ಎರಡು ಸಭೆಗಳನ್ನು ಮಾಡಿ ಒಂದರಲ್ಲಿ ನೂರು ಮಂದಿ, ಇನ್ನೊಂದರಲ್ಲಿ 40 ಮಂದಿ ಸದಸ್ಯರು ಇರುವಂತೆ ಗೊತ್ತುಮಾಡಿದೆ. ಅಂದ ಮೇಲೆ ಹಿಂದೆ ಖರ್ಚಾಗುತ್ತಿದ್ದುದರಲ್ಲಿ ಅನೇಕ ಭಾಗವನ್ನು ಖೋತಾಮಾಡಿ ಆದಷ್ಟು ಹಣ ಉಳಿಸಬೇಕೆಂದು ಈ ರೀತಿ ಏರ್ಪಾಡುಮಾಡಿದೆ. ಆದರೆ ಅದರಿಂದಾಗುವ ಉಪಯೋಗವನ್ನು ನಾವು ಕಳೆದುಕೊಂಡಿಲ್ಲ. ಆ ಕಾರಣದಿಂದ ಇಲ್ಲಿ ಎರಡು ಸಭೆಗಳಿರುವುದು ಬಹಳ ಅಗತ್ಯ.

ಎರಡನೆಯದಾಗಿ, ಹಿಂದೆ ಅಪಾರವಾಗಿದ್ದ ಸೇವಾಕ್ಷೇತ್ರ ಕಡಮೆಯಾಗಿದೆಯೆಂದು ಮಾನ್ಯ ಮಿತ್ರರು ಹೇಳಿದರು, ಅದು ನಿಜವಲ್ಲ. ಹಿಂದೆ ಇದ್ದುದು ಒಂದು ಕೃತಕವಾದ ಅಧಿಕಾರ; ನ್ಯೆಜವಾದ ಅಧಿಕಾರ ಇರಲಿಲ್ಲ. ಆಗ ಯಾವ ಠರಾವನ್ನು ಈ ಸಭೆ ಅಂಗೀಕಾರಮಾಡಿದ್ದರೂ ಅದನ್ನು ಮಹಾರಾಜರು ಅಂಗೀಕಾರಮಾಡಬಹುದಾಗಿತ್ತು, ಅಥವಾ ಬಿಡಬಹುದಾಗಿತ್ತು. ಅದೇ ಈ ದಿವಸ ಕ್ಷೇತ್ರ ಕಡಮೆಯಾದರೂ ನಿಜವಾದ ಅಧಿಕಾರ ಏದೆ. ಈ ದಿವಸ ನಾವು ಏನು ತೀರ್ಮಾನಮಾಡಿದರೂ ಅದಕ್ಕೆ ಬೆರೆಯಿದೆ; ಮತ್ತು ಆಗುಹೋಗುಗಳು ಜನರ ಮೇಲೆ ಬೀಳುತ್ತವೆ. ಇಂಥ ದೊಡ್ಡ ಜವಾಬ್ದಾರಿಯಿರುವಾಗ ಒಂದೇ ಒಂದು ಸಭೆಯಿದ್ದರೆ ಒಂದು ಅಭಿಪ್ರಾಯದಿಂದ, ಒಂದು ಉದ್ದೇಶದಿಂದ ಅಥವಾ ಕಾರಣಾಂತರದಿಂದ ಒಂದು ಶಾಸನಮಾಡಿದರೆ ಅದರ ಪರಿಣಾಮ ಒಂದೊಂದುವೇಳೆ ಕೆಟ್ಟದ್ದೇ ಆಗಬಹುದು. ಅದನ್ನು ತಡೆಯುವ ಉದ್ದೇಶದಿಂದ ಎರಡು ಸಭೆಗಳಿರುವುದು ಸೂಕ್ತ, ನಮಗೆ ಅನೂಚಾನವಾಗಿ ಬಂದಿರುವ ಪದ್ಧತಿಯಿಂದ ಬಹಳ ಉಪಯೋಗವಾಗುತ್ತದೆ ಎಂಬ ಧ್ಯೇಯದಿಂದ ಆ ರೀತಿಯಾಗಿ ನಿಂಬಿಕೊಂಡು ಮೈಸೂರು ರಾಜ್ಯಾಂಗ ರಚನಾಸಭೆ ಮತ್ತು ಭಾರತ ರಾಜ್ಯಾಂಗ ರಚನಾ ಸಭೆ ಇವೆರಡೂ ತೀರ್ಮಾನಿಸಿ, ಎರಡು ಸಭೆಗಳಿರಬೇಕೆಂದು ಗೊತ್ತುಮಾಡಿದುವು ಆದ್ದರಿಂದ ಈಗ ಇಷ್ಟೆಲ್ಲಾ ಕಾರ್ಯಕ್ರಮ ನಡೆಸಿ ನಮ್ಮ ಸುತ್ತು ಮುತ್ತಲಿನ ಅನುಭವ ತೆಗೆದುಕೊಂಡು ಪರಿಶೀಲಿಸಿ ಈ ವಿಧಾನ ಪರಿಷತ್ತನ್ನು ಏರ್ಪಡಿಸಲಾಗಿದೆ. ಅದಿನ್ನೂ ಕೆಲಸಮಾಡುವುದಕ್ಕೆ ಪ್ರಾರಂಭಿಸಿಲ್ಲ. ಆದರೆ ಆಗಲೇ ಅದನ್ನು ಖೋತಾ ಮಾಡಬೇಕೆಂದು ಹೇಳುವುದು ಕೆರ್ತವ್ಯ ಮಾಡಿದ ಹಾಗಾಗುತ್ತದೆಯೆ ಎಂಬುದನ್ನು ವಿಮರ್ಶೆಮಾಡಬೇಕಾದ್ದು ಅಗತ್ಯ. ಹಾಗೆ ಮಾಡದೆ ಸಂತಯಪಡುವುದು ಸ್ವಲ್ಪವೂ ಸೂಕ್ತವಲ್ಲ. ಈ ದಿವಸ ಹುಟ್ಟಿರುವುದನ್ನು ಈ ದಿವಸವೇ ಪೊಟಕುಮಾಡುವುದು ಉಚಿತವೇ? ಆದ್ದರಿಂದ ಈಗ ನಿರ್ಣಯ ತಂದಿರುವುದು ಸಮಯವೂ ಅಲ್ಲ, ಸೂಕ್ತವೂ ಅಲ್ಲ. ಆ ಸಭೆಯವರು ಕೆಲಸ ಮಾಡುವುದಕ್ಕೆ ಪೂರ್ಣ ಅವಕಾಶ ಕೊಟ್ಟು ಪರೀಕ್ಷಿಸಿ ಆ ಮೇಲೆ ಇಂಥ ಠರಾವು ತರಬೇಕೇ ಹೊರತು ಈ ಅಧಿವೇಶನದಲ್ಲೇ ಈ ದಿವಸ ತರುವುದು ಸರ್ವಥಾ ಸಾಧುವಲ್ಲ; ತಜ್ಞರಿಗೆ ಸೂಕ್ತವಲ್ಲ. ಆದ್ದರಿಂದ ಈ ನಿರ್ಣಯವನ್ನು ವಿರೋಧಿಸುತ್ತೇನೆ.

ಶ್ರೀ ಮುಲ್ಕಗೋವಿಂದರೆಡ್ಡಿಯವರು.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳೂ ಮತ್ತು ಈ ನಿರ್ಣಯವನ್ನು ವಿರೋಧಿಸಿದ ಸದಸ್ಯರೂ ಕೂಡ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಹಿಂದೆ ಪ್ರಜಾಪ್ರತಿನಿಧಿ ಸಭೆಯಿದ್ದರೂ ಆಗ ನ್ಯಾಯವಿಧಾಯಕ ಸಭೆಯಿತ್ತು, ನ್ಯಾಯವಿಧಾಯಕ ಸಭೆ ಹಿಂದಿನಿಂದ ಬಂದಿದೆ, ಅದರ ಔಚಿತ್ಯವಿದೆ ಎಂದು ಹೇಳಿದ್ದಾರೆ. ಹಿಂದಿದ್ದ ಪ್ರಜಾಪ್ರತಿನಿಧಿ ಸಭೆಗೆ ಒಂದು ರೆಸ್ಟ್ರಿಕ್ಟೆಡ್ ಫ್ರಾಂಚೈಸ್ ಇತ್ತು. ಆಗ 310 ಜನರು ಅಸೆಂಬ್ಲಿಯಲ್ಲಿದ್ದರೂ ಈಗ ವಿಧಾನ ಸಭೆಗಿರುವಂತೆ ವಯಸ್ಕರ ಮತದಾನದ ಹಕ್ಕು ಇರಲಿಲ್ಲ. ಇದರ

ಜೊತೆಗೆ ಈಗ ವಿಧಾನ ಸಭೆಯಲ್ಲೂ ನೂರು ಮಂದಿ ಸದಸ್ಯರಿದ್ದಾರೆ. ಹೆಚ್ಚು ಜನರಿದ್ದರೆ ಯಾವುದಾದರೂ ಒಂದು ನಿರ್ಧಾರಕ್ಕೆ ಬರುವುದಕ್ಕೆ ಮತ್ತು ಸರಿಯಾದ ಅಭಿಪ್ರಾಯ ಕೊಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಈಗ ವಯಸ್ಕರ ಮತದಾನ ಪದ್ಧತಿಯ ಮೇರೆ ಆರಿಸಿ ಬಂದಿರುವ ನೂರು ಜನ ಸದಸ್ಯರು (ಒಬ್ಬರು ಹೊರತು) ಈ ಸಭೆಯಲ್ಲಿರುವುದರಿಂದ ಯಾವ ಒಂದು ನಿರ್ಧಾರ ಮಾಡುವುದಕ್ಕೆ ಅಥವಾ ಅಭಿಪ್ರಾಯ ವ್ಯಕ್ತಪಡಿಸುವುವುದಕ್ಕೆ ಅವಕಾಶವಿದೆ. ಸರಿಯಾದ ಅಭಿಪ್ರಾಯ ವ್ಯಕ್ತ ಪಡಿಸಿ ಸೂಕ್ತ ನಿರ್ಧಾರಕ್ಕೆ ಬರಬಹುದು. ಇದರ ಜೊತೆಗೆ ಇಲ್ಲಿ ಬರುವವರು ಸರಿಯಾದ ಅಭಿಪ್ರಾಯ ವ್ಯಕ್ತಪಡಿಸುತ್ತೇವೆಂಬ ಮನೋಭಾವವುಳ್ಳವರಾಗಿದ್ದಾರೆ. ಹಿಂದೆ ಪ್ರಜಾಪ್ರತಿನಿಧಿ ಸಭೆಗೆ ಯಾವ ಅಧಿಕಾರವೂ ಇರಲಿಲ್ಲ. ಅದು ಅರಿಕೆ ಮಾಡುವ ಒಂದು ಸಭೆಯಾಗಿತ್ತು; ಹಿಂದಿನಿಂದ ಬಂದಿದ್ದರೂ ಕೂಡ ಅರಿಕೆ ರೂಪದಲ್ಲಿ ಹೇಳುವುದಕ್ಕೆ ಅವಕಾಶ ಮಾತ್ರ ಇತ್ತು. ಅದರ ಪರಿಣಾಮವಾಗಿ ಕಾರ್ಯರೂಪಕ್ಕೆ ಬರಲು ಅವಕಾಶವೂ ಇರಲಿಲ್ಲ ಈಗಿರುವ ವಿಧಾನ ಸಭೆಗೆ ಪ್ರತಿಯೊಂದು ಅಧಿಕಾರವೂ ಇದೆ. ಇದು ಸಾವಿರ್ ಬಾಡಿ ಎಂದು ಹೇಳಿದರೂ ತಪ್ಪಲ್ಲ. ರಿಪಬ್ಲಿಕನ್ ಕಾನ್ಸ್ಟಿಟ್ಯೂಷನ್ ರೀತಿಯಲ್ಲಿದೆ. ಇದು ವಿಶೇಷಾಧಿಕಾರವುಳ್ಳ ಸಭೆಯಾಗಿದೆ. ಆದ್ದರಿಂದ ಈಗ ಒಂದು ವಿಧಾನ ಪರಿಷತ್ತಿರುವುದು ಯಾವ ವಿಧದಲೂ ಔಚಿತ್ಯವೆನಿಸುವುದಿಲ್ಲ.

ಎರಡನೆಯದಾಗಿ, ಅಮೇರಿಕದ ರಾಜ್ಯಾಂಗದ ವಿಚಾರವನ್ನು ಪ್ರಸ್ತಾಪ ಮಾಡಿದರು. ನನ್ನ ಮಿತ್ರರಾದ ಶ್ರೀ ರಾಜಶೇಖರಮೂರ್ತಿಯವರು ಮಂತ್ರಿಗಳ ಭಾಷಣಕ್ಕೆ ಮುಂಚೆ ಅಮೇರಿಕಾದ ರಾಜ್ಯಾಂಗ ಪದ್ಧತಿ ಹೇಗಿದೆಯೆಂಬುದನ್ನು ಹೇಳಿದ್ದಾರೆ. ಅಲ್ಲಿರುವ ಸೆನೇಟಿಗೆ ಫೆಡರಲ್ ಕಾನ್ಸ್ಟಿಟ್ಯೂಷನ್ ಪ್ರಕಾರ ಜ್ಯುಡಿಷಿಯರ್ ಅಧಿಕಾರವಿದೆ. ಇಂಡಿಯಾದಲ್ಲಿ ರಿಪಬ್ಲಿಕನ್ ಕಾನ್ಸ್ಟಿಟ್ಯೂಷನ್ ಪ್ರಕಾರ ಒಂದು ಯೂನಿಯನ್ ಇದ್ದೂ ಅದಕ್ಕೇ ಬೇರೆ ಚೇಂಬರ್ ಇದೆ. ರಾಜ್ಯಪರಿಷತ್ತು ಬೇರೆ ಇದೆ. ಆದ್ದರಿಂದ ಇಲ್ಲಿ ವಿಧಾನ ಸಭೆ ಇರಬೇಕಾದ ಅಗತ್ಯವಿಲ್ಲ. ನಮಗಿಂತ ದೊಡ್ಡ ಪ್ರಾಂತವಾದ ಹೈದರಾಬಾದಿನಲ್ಲಿ ಒಂದೂವರೆ ಕೋಟಿ ಪ್ರಜೆಗಳಿದ್ದಾರೆ. ಅಲ್ಲಿರುವ ಒಂದು ಆದಾಯ ಕೂಡ ನಮ್ಮದರ ಎರಡರಷ್ಟು ಇದೆ. ಆದರೂ ಅಲ್ಲಿ ಒಂದು ಸಭೆಯಿದೆಯೇ ಹೊರತು ಎರಡಿಲ್ಲ. ನಮ್ಮ ಮಿತ್ರರು ಕೆಲವರು ಬೇರೆ ಸಭೆಯಿದ್ದರೆ ಮುಂದೆ ಭಾಷಾವಾರು ಪ್ರಾಂತವಾಗುವುದಕ್ಕೆ ಅವಶ್ಯಕತೆ ಬಿದ್ದಾಗ ಅದರ ಅನುಕೂಲ ಬೇಕಾಗುತ್ತದೆ ಎಂದು ಹೇಳಿದರು. ನಮ್ಮಲ್ಲಿರುವ ಮೇಲ್ಮನೆಗೆ ಈ ತರಹ ಅಧಿಕಾರವಿಲ್ಲ. ಭಾಷಾವಾರು ಪ್ರಾಂತವಾಗಬೇಕಾದರೆ ಮೈಸೂರಿಗೆ ಸೇರಬೇಕು ಅಥವಾ ಮೈಸೂರಿನಲ್ಲಿ ಎಗಡು ಮೂರು ಭಾಗವಾಗಬೇಕು. ಯಾವ ರೀತಿ ಮೈಸೂರಿಗೆ ಸೇರಬೇಕು, ಬಿಡಬೇಕು, ಭಾಗವಾಗಬೇಕಾದರೆ ಹೇಗಾಗಬೇಕು ಎಂಬುದನ್ನು ಸೂಚಿಸಲು ಮೈಸೂರು ವಿಧಾನಸಭೆಗೆ ಅಧಿಕಾರವಿದೆಯೇ ವಿನಾ ವಿಧಾನಪರಿಷತ್ತಿಗಿಲ್ಲ. ಹೈದರಾಬಾದಿನಲ್ಲಿ ಈಗ disintegrate ಆಗಬೇಕೆಂದು ದೊಡ್ಡ ಚಳುವಳಿ ನಡೆಯುತ್ತಿದೆ. ಅಂಥಾದ್ದರಲ್ಲೂ ಕೂಡ ಅಲ್ಲಿ ಬೇರೊಂದು ಸಭೆಯಿಲ್ಲ. ಆದ್ದರಿಂದ ನಮ್ಮ ಮೈಸೂರು ದೇಶದಲ್ಲಿ ಬೇರೆ ಸಭೆ ಇರಬೇಕಾದ ಅಗತ್ಯವಿಲ್ಲ, ಅವಶ್ಯಕತೆಯಿಲ್ಲ, ಅದನ್ನಿಡಬಾರದು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಯಾವ ತಜ್ಞರೂ, ನ್ಯಾಯಪಟುಗಳೂ ಈ ಅಭಿಪ್ರಾಯಕ್ಕೆ ವಿರೋಧವಾಗಿ ಹೇಳಿರಾರರು. ಮದ್ರಾಸಿನಲ್ಲೂ ಅದು ಬಹಳ ದೊಡ್ಡ ಪ್ರಾಂತವಾದರೂ ಅಲ್ಲೂ ಕೂಡ ವಿಧಾನಪರಿಷತ್ತು ಇರಬೇಕಾದ ಅಗತ್ಯವಿಲ್ಲ ಎಂದು ಒಂದು ಠರಾವು ಬಂದು ಔಟ್ ಆಗುತ್ತಲಿದೆಯೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ನಮ್ಮ ದೇಶದಲ್ಲಿ ವಿಧಾನಪರಿಷತ್ತು ಇರಬೇಕಾದ ಅಗತ್ಯವಿಲ್ಲ, ತಕ್ಷಣ ರದ್ದುಪಡಿಸಬೇಕು ಎಂದು ತಿಳಿಸಿ ಈ ನಿರ್ಣಯವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ನಮ್ಮ ಸ್ನೇಹಿತರು ಹೆಚ್ಚು ವಿಷಯ ಹೇಳಲಿಲ್ಲ. ಅವರು ಉದಾಹರಣೆ ಕೊಟ್ಟಿರುವುದೂ ಸರಿಯಲ್ಲ. ಹೈದರಾಬಾದಿನಲ್ಲಿ ಯಾವ ಸಭೆಯೂ ಇರಲಿಲ್ಲ. ಆದ್ದರಿಂದ ಯಾವುದಾದರೂ ಒಂದಾದರೆ ಸಾಕೆಂದು ನಿರೀಕ್ಷಿಸುತ್ತಿದ್ದರು.

5 P.M.

ಮತ್ತು ಅಮೇರಿಕಕ್ ಕಾನ್ಸ್ಟಿಟ್ಯೂಷನ್ ವಿಚಾರ ಹೇಳಿದರು. ಸರಿಯಾದ ಕಾರಣ ತೋರಿಸಿಲ್ಲ ಮತ್ತು ವಿರೋಧವನ್ನು ಪುಷ್ಟೀಕರಿಸಿಲ್ಲ ಎಂದು ಹೇಳುತ್ತೇನೆ.

Sri Mulka GOVINDA REDDY.—American President is the executive authority.

Mr. SPEAKER.—Is the Hon'ble Mover going to withdraw or press the resolution ?

Sri Mulka GOVINDA REDDY.—I am pressing the resolution.

Mr. SPEAKER.—The question is :

> "That this Assembly is of the opinion that the Mysore Legislative Council be abolished with immediate effect."

The motion was negatived.

(Sri C. T. Hanumanthaiya desired that his resolution may be taken up).

Mr. SPEAKER.—Sri C. T. Hanumanthaiya desires that his resolution may be taken up. If the House has no objection it will be taken up. Otherwise.....

(Most of the Members were not in favour.)

Mr. SPEAKER.—The House is not prepared to sit any longer. The House will now adjourn and meet tomorrow at 12 NOON.

The Assembly adjourned at Three Minutes past Five of the Clock to meet again at Twelve of the Clock on Thursday, 26th June 1952.

WD 2802—GPB—500—8-8-52